ಪುಸ್ತಕ ಪ್ರಪಂಚ

ಸಂಪುಟ ೫೧ ಜುಲೈ ೨೦೦೧ ಸಂಚಿಕೆ ೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ನಾ

ಮುಖಚಿತ್ರ: ಆರ್. ಕೆ. ನಾರಾಯಣ್

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಸಂಯುಕ್ತತ್ವ: ಸಂವಿಧಾನ ಗೋಸುಂಬೆ

ಸುಪ್ರಸಿದ್ಧ ವಕೀಲರಾದ ಅಲ್ಲಾಡಿ ಅರುಣ ಅವರು 'ಭಾರತೀಯ ರಾಜ್ಯಾಂಗದ ಸಂಯುಕ್ತತ್ವ ವಿರೋಧಿ ಲಕ್ಷಣಗಳು' (unfederal features of Indian constitution) ಎಂಬ ಘನವಾದ ಉದ್ಗ್ರಂಥವೊಂದನ್ನು ರಚಿಸಿದ್ದಾರೆ. ರಾಜ್ಯಾಂಗದ ಕಾರ್ಯರೂಪದಲ್ಲಿ ಎದ್ದು ಕಾಣುವ ಲೋಪದೋಷಗಳನ್ನು ಎತ್ತಿಹಿಡಿದಿದ್ದಾರೆ. ಭಾರತೀಯ ವರಿಷ್ಠನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳೂ, ನ್ಯಾಯವಲಯದ ಅತ್ಯುಜ್ವಲತಾರೆಯೂ ಆದ ವಿ.ಆರ್.ಕೃಷ್ಣಅಯ್ಯರ್ ಮುಕ್ತಕಂಠದಿಂದ ಆ ಗ್ರಂಥವನ್ನು ಪ್ರಶಂಸಿಸುತ್ತ, ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. (ಪುಸ್ತಕಾವಲೋಕನ, ದಿ ಹಿಂದೂ, ೧೫.೫.೨೦೦೧) ಸಾಮಾನ್ಯರನ್ನೊಳಗೊಂಡ ಭಾರತೀಯರೆಲ್ಲರಿಗೂ ಆ ಅಭಿಪ್ರಾಯಗಳು ತಿಳಿಯಬೇಕಾಗಿರುವುದರಿಂದ, ಅವನ್ನಿಲ್ಲಿ ಸಂಗ್ರಹಿಸಲಾಗಿದೆ:-

'ನಮ್ಮ ಮೂಲ ರಾಜ್ಯಾಂಗ ರಾಜಕೀಯವಾಗಿ ಹೆಮ್ಮೆ ತರುವಂಥದು ; ಮೂಲಭೂತವಾಗಿ ಸಂಯುಕ್ತತ್ವ ಸ್ವರೂಪದ್ದು. ಆದರದನ್ನು ಕಾರ್ಯಗತಗೊಳಿಸುತ್ತಿರುವ ಕೇಂದ್ರ ನಾಯಕರು ಅದರ ಮೂಲಭೂತ ಲಕ್ಷಣವನ್ನು ನ್ಯೂನಗೊಳಿಸಿ, ಅದರ ಸುಂದರ ಸಂಯುಕ್ತತ್ವ ಮುಖವನ್ನು ವಿರೂಪಗೊಳಿಸಿದ್ದಾರೆ. ಅದರಿಂದಾಗಿ ಸಂಯುಕ್ತತ್ವವನ್ನು ಒತ್ತಾಯಿಸುವ, ಪ್ರಜಾಪ್ರಭುತ್ವಾತ್ಮಕ ವಿಕೇಂದ್ರೀಕರಣವನ್ನು ಕಾರ್ಯಗತಗೊಳಿಸುವ ಸಲುವಾಗಿ ಹತ್ತಾರು ವರ್ಷಗಳಿಂದ ಚಳುವಳಿ ನಡೆಯುತ್ತಿದೆ. ಆ ಚಳುವಳಿಯ ಫಲ ರಾಜಮನ್ನಾರ್ ಮತ್ತು ಸರ್ಕಾರಿಯಾ ಆಯೋಗಗಳು. ಆ ವರದಿಗಳು ಸಂಯುಕ್ತತ್ವ ತತ್ವವನ್ನೆತ್ತಿ ಹಿಡಿದಿವೆ. ಸರ್ಕಾರಗಳು ಅವಕ್ಕೆ ಕವಡೆ ಬೆಲೆಯನ್ನು ನೀಡಿಲ್ಲ. ಸಂಯುಕ್ತ ಪ್ರಜಾಪ್ರಭುತ್ವದ ಲಾಭಗಳ ಕಡೆಗೆ ಗೋಸುಂಬೆಗಳಂಥ ರಾಜಕೀಯ ನಾಯಕರ ಗಮನ ಹರಿದಿಲ್ಲ.

'ಭಿನ್ನ ವಿಭಿನ್ನ ಸಂಸ್ಕೃತಿಗಳ, ಮತಗಳ, ಭಾಷೆಗಳ, ಜಾತಿ ಜನಾಂಗಗಳ ದೊಡ್ಡ ದೇಶ ಭಾರತ. ಇಲ್ಲಿ ಹಲವು ಬುಡಕಟ್ಟು ಜನರಿದ್ದಾರೆ. ವಿಭಿನ್ನ ರಾಜಕೀಯ, ಐತಿಹಾಸಿಕ ಹಾಗೂ ಭೌಗೋಳಿಕ ಹಿನ್ನೆಲೆಗಳಿವೆ. ಸಂಯುಕ್ತ ಪ್ರಜಾಪ್ರಭುತ್ವವಲ್ಲದೆ ಈ ವೈವಿಧ್ಯವನ್ನು ಸಮನ್ವಯಗೊಳಿಸಲಾಗದು. ಉಪರಾಷ್ಟ್ರೀಯತೆಗಳು ವಿಪುಲವಾಗಿರುವಾಗ ಸ್ವಯಂನಿರ್ಣಯಾಧಿಕಾರಕ್ಕೆ ಮಾನ್ಯತೆ ನೀಡಬೇಕಾದ್ದು ನಾಗರಿಕತೆಯ ಲಕ್ಷಣ. ಅಭಿವ್ಯಕ್ತಿ ಸ್ವಾತಂತ್ರ್ಯ, ಸ್ವಾಯತ್ತತೆ ಮತ್ತು ವಿಕೇಂದ್ರೀಕರಣ ಸ್ವಯಂನಿರ್ಣಯಾಧಿಕಾರದ ಗುರಿಯೇ ಹೊರತು ಅಪಸರಣವಲ್ಲ, ವಿಚ್ಛಿದ್ರತೆಯಲ್ಲ, ರಾಷ್ಟ್ರವಿರೋಧಿ ಪ್ರಯತ್ನವಲ್ಲ. ಭಾಷಾವಾರು ಪ್ರಾಂತರಚನೆ ರಾಷ್ಟ್ರವಿರೋಧಿ ಆಂದೋಲನವಾಯಿತೆ? ಜನರ ಪರಮಾಧಿಕಾರವನ್ನು ಯಾರೂ ಯಾವಾಗಲೂ ಮೊಟಕುಗೊಳಿಸಲಾರರೆಂಬುದಕ್ಕೆ ಪೊಟ್ಟಿ ಶ್ರೀರಾಮುಲು ಸಾಕ್ಷಿಯಾಗಿದ್ದಾರೆ. ಸ್ವಾಯತ್ತತೆ ಭಾರತದ ಪರಮಾಧಿಕಾರವನ್ನು ಪ್ರಶ್ನಿಸುವುದಿಲ್ಲ. ಅದರಿಂದ ಸೋದರಭಾವ ಹಾಗೂ ಏಕತಾಭಾವ ವೃದ್ಧಿಯಾಗುತ್ತವೆಂದೇ ಹೇಳಬೇಕು. ಆನಂದ ಸಾಹೇಬ್(ಪಂಜಾಬು) ನಿರ್ಣಯ ಸಹ ರಾಜ್ಯಗಳ ಸ್ವಾಯತ್ತತೆಯ ಪರವಾಗಿತ್ತೇ ಹೊರತು ವಿಭಜನೆಯ ಕಡೆಗಿರಲಿಲ್ಲವೆಂಬುದನ್ನು ಮರೆಯಲಾಗದು.

'ಪ್ರಪಂಚದಲ್ಲಿಯೇ ಅತ್ಯಂತ ಪ್ರಬಲಶಾಲಿಯಾದ ಸಂಯುಕ್ತ ಸಂಸ್ಥಾನ ತನ್ನ ಐವತ್ತು ಸಂಸ್ಥಾನಗಳಿಗೆ ಸ್ವಾಯತ್ತತೆ ಕೊಟ್ಟಿರುವುದಿಲ್ಲವೆ? ಅಧಿಕಾರ ವರ್ಗಾವಣೆ ಹಾಗೂ ರಾಷ್ಟ್ರೀಯತೆ ಪರಸ್ಪರ ವಿರೋಧವಲ್ಲವಷ್ಟೆ. ರಾಷ್ಟ್ರದ ವಿಭಜನೆಯಿಂದಾಗಿ ನಾಯಕರು ಭಯಭೀತರಾಗಿ, ಅತಿ

ಕೇಂದ್ರೀಕರಣದ ಪರವಾಗಿ ವಾಲಿದರೆಂಬುದೂ ನಿಜ. ಆದರೆ ರಬ್ಬರ್ ಪಟ್ಟಿಯನ್ನು ಮಿತಿಮೀರಿ ಎಳೆದದ್ದಾದರೆ ಕಿತ್ತು ಹೋಗುತ್ತದೆ. ವ್ಯಕ್ತಿ ಸ್ವಾತಂತ್ರ್ಯಾಪಹರಣ ಹಾಗೂ ಅತಿಕೇಂದ್ರೀಕರಣ ಎಂದಿದ್ದರೂ ಅಪಾಯಕಾರಿಯೆಂಬುದನ್ನು ವಿವೇಕಿಗಳು ಅರಿಯಬೇಕಾಗಿದೆ. ಭಾರತೀಯ ಇತಿಹಾಸವನ್ನೂ, ಅದರ ಸಂಸ್ಕೃತಿಯ ಸಂಕೀರ್ಣತೆಯನ್ನೂ ಬಲ್ಲವರಿಗೆ ಸಂಯುಕ್ತ ಪ್ರಜಾಪ್ರಭುತ್ವವೇ ಅದರ ಜಾಯಮಾನಕ್ಕೆ ಸರಿಯೆಂದು ತೋರದಿರಲಾರದು. ಚುನಾವಣಾ ಆಯೋಗ, ಲೆಕ್ಕತಪಾಸಣಾ ಇಲಾಖೆ, ಮೂಲಭೂತ ಕಾನೂನುಗಳ ಹೊಂದಾಣಿಕೆ, ನ್ಯಾಯಾಲಯದ ಏಕಸ್ವಾಮ್ಯ, ರಾಷ್ಟ್ರಪತಿಯ ಪರಮಾಧಿಕಾರ, ಇವೇ ಮೊದಲಾದ ನಿಯಂತ್ರಣಗಳು ಏಕತೆಯನ್ನು ಸಾಧಿಸುತ್ತವೆಂಬುದರಲ್ಲಿ ಅನುಮಾನವಿಲ್ಲ.

'ರಾಜ್ಯಗಳ ಕೇಂದ್ರೀಯ ಆರ್ಥಿಕಾವಲಂಬನೆ, ಕೇಂದ್ರೀಕೃತ ಯೋಜನಾ ವ್ಯವಸ್ಥೆ, ಶಾಸನ ರಚನೆಯಲ್ಲಿ ಕೇಂದ್ರದ ಅಸಮತೋಲನಾಧಿಕಾರ, ರಾಜ್ಯಗಳೊಡನೆ ಸಮಾಲೋಚನೆ ನಡಸದೆ, ರಾಜ್ಯಪಾಲ, ಚುನಾವಣಾ ಆಯೋಗ, ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳು, ಲೆಕ್ಕತಪಾಸಣಾಧಿಕಾರಿ ಮೊದಲಾದವರನ್ನು ನೇಮಕಮಾಡುವ ಪರಮಾಧಿಕಾರದಿಂದಾಗಿ, ರಾಜ್ಯಗಳ ಅಧಿಕಾರಾತ್ಮಕ ಕೀಳರಿಮೆಯಿಂದಾಗಿ, ರಾಜ್ಯಸರಕಾರಗಳನ್ನು ವಜಾಮಾಡುವ ಕೇಂದ್ರದ ಅಧಿಕಾರದಿಂದಾಗಿ ರಾಜ್ಯ ಸರಕಾರಗಳು ದುರ್ಬಲಗೊಳ್ಳುತ್ತಿವೆ, ಪ್ರಜಾಪ್ರಭುತ್ವ ಮಣ್ಣು ಗೂಡುತ್ತಿದೆ. ಕೇಂದ್ರದಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ, ಅಧಿಕಾರಮದದಿಂದ ವಿವೇಕದ ಕಣ್ಣು ಕುರುಡಾಗಿ, ಅಂಥ ದರ್ಬಾರು ನಡೆಯುತ್ತಿದೆ ; ಸರ್ವಾಧಿಕಾರ ಹಾಸುಗೆಯಾಗುತ್ತದೆ. ಮುಖ್ಯಮಂತ್ರಿಗಳು ದೆಹಲಿಮೇಟಿಯ ಸುತ್ತ ಸುತ್ತುವ ಮೂಕ ಪಶುಗಳಾಗಿದ್ದಾರೆ. ಅದರಿಂದಾಗಿ ರಾಜ್ಯಗಳಲ್ಲಿ ದಿನೇ ದಿನೇ ಅಸಂತೃಪ್ತಿ ದ್ವೇಷ ಮಾತ್ಸರ್ಯಗಳು ಬಡಬಾನಲವಾಗುತ್ತಿವೆ.

'ಕೇಂದ್ರ ಸಂಪುಟವೊಂದು ಪಿತೂರಿಗಾರರ ಸಂಚುಕೂಟವಾಗಿದೆ. ಪ್ರತಿಯೊಬ್ಬ ಮಂತ್ರಿಯೂ ಜಾರ್ ಚಕ್ರವರ್ತಿಯಂತೆ, ಸರ್ವಾಧಿಕಾರಿಯಂತೆ ದೇಶವನ್ನಾಳುತ್ತಾನೆ, ಮೊಗಲಾಯಿ ದರ್ಬಾರು ನಡಸುತ್ತಿದ್ದಾನೆ. ರಾಜ್ಯಗಳನ್ನು ವೈಭವೀಕೃತ ಮುನಿಸಿಪಾಲಿಟಿಗಳ ದರ್ಜೆಗಿಳಿಸಲಾಗಿದೆ. ರಾಜ್ಯಗಳ ಮಂತ್ರಿಗಳೊ, ಗೂಟದ ಕಾರು, ಕಾವಲು ಕಪ್ಪು ಬೆಕ್ಕುಗಳು, ಧನಸಂಪಾದನಾನುಕೂಲಗಳ ನಡುವೆ ವೈಭವ ಪ್ರದರ್ಶನ ಸಂತೆಯಲ್ಲಿ ಸುಖಲೋಲುಪರಾಗಿ ಸ್ವಾಭಿಮಾನರಹಿತರಾಗಿ ಐಷಾರಾಮಿ ಜೀವನವನ್ನು ನಡೆಸುತ್ತಿದ್ದಾರೆ. ರಾಜ್ಯಪಾಲರು ದೆಹಲಿಯ ಬಂಟರಾಗಿ, ಊರೂರು ತಿರುಗಿಕೊಂಡು, ಸೊಗಸುಗಾರ ಪುಟ್ಟಸ್ವಾಮಿಯರಂತೆ, ರಾಜ್ಯಗಳ ಖಜಾನೆಗಳಿಗೆ ಭಾರವಾಗಿದ್ದಾರೆ.

'ರಾಜ್ಯಾಂಗದ ೩೫೬ನೆಯ ನಿಯಮವನ್ನು ಬರೆಯುವಾಗ ಡಾ. ಅಂಬೇಡ್ಕರ್‌ರ ಕಣ್ಮುಂದೆ ದೇಶದ ವಿಭಜನೆಯ ದೃಶ್ಯವಿದ್ದಿರಬೇಕು. ನೀತಿ ಬಾಹಿರರಾದ ಜನ ರಾಜ್ಯಾಂಗದ ಯಾವ ನಿಯಮವನ್ನಾದರೂ ಉಲ್ಲಂಘಿಸಬಹುದು. ೩೫೬ನೆಯ ನಿಬಂಧನೆಯಾದಿಯಾಗಿ ಎಲ್ಲ ನಿಬಂಧನೆಗಳು ದುರುಪಯೋಗವಾಗದಂತೆ ನಿಯಂತ್ರಿಸುವ ಪರಮಾಧಿಕಾರ ರಾಷ್ಟ್ರಪತಿಗಿರುವಾಗ, ಯಾರೂ ಆತಂಕಗೊಳ್ಳಬಾರದೆಂದು, ರಾಜ್ಯಾಂಗ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಆ ನಿಯಮವನ್ನು ವಿರೋಧಿಸಿದ ಸದಸ್ಯರಿಗವರು ಉತ್ತರ ನೀಡುತ್ತಾರೆ. ರಾಜೇಂದ್ರ ಪ್ರಸಾದ್, ಕೆ.ಆರ್. ನಾರಾಯಣರಂಥ ಆತ್ಮಗೌರವವುಳ್ಳ ರಾಷ್ಟ್ರಪತಿಗಳನ್ನು ಬಿಟ್ಟರೆ, ಉಳಿದವರು ಪ್ರಧಾನಮಂತ್ರಿಗಳ ಚಂಚಗಳಾದರೆಂಬುದು ಸುಳ್ಳಲ್ಲ. ಎಲ್ಲ ಮಾರ್ಗಗಳು ಸೋತು

ಅನಿವಾರ್ಯವಾದಾಗ, ಕಟ್ಟಕಡೆಯದಾಗಿ, ೩೫೬ನೆಯ ಅಸ್ತ್ರ ಬಳಸಬಹುದೆಂದು ರಾಜ್ಯಾಂಗ ತಜ್ಞರಾದ ಎಂ.ಸಿ.ಸೆಟಲ್‌ವಾಡ್ ಸರ್ಕಾರಿಯಾ ಮೊದಲಾದವರು ಸ್ಪಷ್ಟಪಡಿಸಿದ್ದಾರೆ.

'ಕೇಂದ್ರದ ಬೊಕ್ಕಸಕ್ಕೆ ಹೊರೆಯಾಗಿರುವ ಮಾಹೆ ಪುದುಚೇರಿ ಗೋವ ದಾಮನ್ ದಿಯು ಮೊದಲಾದ ಓಣಿಯಗಲದ ಸಣ್ಣ ತಾಕುಗಳು ಕೇಂದ್ರದ ನೇರ ಆಡಳಿತದಲ್ಲಿರುವುದೇ ವಿಪರ್ಯಾಸ. ಕೇಂದ್ರ ನಾಯಕರ ವಿವೇಕ ರಾಹಿತ್ಯ, ವೀತ ದೂರದೃಷ್ಟಿ ಮತ್ತು ಬೇಮುತ್ಸದ್ದಿ.ತನದಿಂದಾಗಿ, ಕಾಶ್ಮೀರ ಸಮಸ್ಯೆ ಬಗೆಹರಿದಿಲ್ಲ. ಅದರಿಂದಾಗಿ ಧನ ಜನ ನಷ್ಟ ನಿರಂತರವಾಗಿ, ಅಪಾರವಾಗಿ ನಡೆಯುತ್ತಿದೆಯೆಂಬುದು ವಿಷಾದದ ಸಂಗತಿ.

'ಲೆಕ್ಕ ತಪಾಸಣಾಧಿಕಾರಿ ಹುದ್ದೆ, ಚುನಾವಣಾಯೋಗ, ಯೋಜನಾಮಂಡಲಿ, ಇವೇ ಮೊದಲಾದ ಅಖಿಲ ಭಾರತೀಯ ಮಟ್ಟದ ವಿಶಿಷ್ಟ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವಾಗ ಕೇಂದ್ರಸರ್ಕಾರ ರಾಜ್ಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದ್ದು ಅತ್ಯಗತ್ಯ. ಅವು ರಾಜಕೀಯ ದುರ್ವಾಸನೆಯಿಂದ ದೂರವಿರಬೇಕು. ಯಾವುದು ಎಲ್ಲರನ್ನು ಮುಟ್ಟಬೇಕಾಗಿದೆಯೊ ಅದನ್ನು ಸಮಸ್ತರೂ ನಿರ್ಧರಿಸತಕ್ಕದ್ದೆಂಬ ರೋಮನ್ ಗಾದೆಯನ್ನು ಮರೆಯಬಾರದು.

'ಸಂಯುಕ್ತತ್ವದಲ್ಲಿ ಅಂತರ್ಗತಗೊಂಡಿರುವ ಜೋಡಿ ವ್ಯವಸ್ಥೆ ರಾಜ್ಯಾಂಗೀಣ ನೈತಿಕತೆಯನ್ನೂ, ಸಂವಿಧಾನೋಕ್ತ ವಿಶಿಷ್ಟ ಸಂಗತಿಗಳನ್ನೂ ಗೌರವಿಸಬೇಕಾಗುತ್ತದೆ. ಭ್ರಷ್ಟ ರಾಷ್ಟ್ರಾಭಿಮಾನಿಗಳಲ್ಲಿ ಮತ್ತು ಮತ್ತೇರಿದ ವಾಗ್ಮಿಗಳಲ್ಲಿ ಈ ಗುಣ ಗೈರುಹಾಜರು. ಸಂಯುಕ್ತತ್ವ ಭಾರತೀಯ ಸಂವಿಧಾನದ ಮೂಲಭೂತಲಕ್ಷಣವೆಂದು ಬೊಮ್ಮಾಯಿ ಖಟ್ಲೆಯಲ್ಲಿ ವರಿಷ್ಠನ್ಯಾಯಾಲಯ ತೀರ್ಪು ನೀಡಿದೆ. ಸಂಯುಕ್ತತ್ವ ಕೋಟೆಯ ಮೇಲೆ ಕೇಂದ್ರಸರ್ಕಾರ ಧಾಳಿ ಮಾಡದಂತೆ ವರಿಷ್ಠ ನ್ಯಾಯಾಲಯ ರಾಜ್ಯಗಳನ್ನು ರಕ್ಷಿಸಬೇಕಾದ ಕಾಲವೀಗ ಒದಗಿಬಂದಿದೆ.

'ಒಮ್ಮೆ ಏಕಪ್ರಭುತ್ವ ವ್ಯವಸ್ಥೆಯೆಂದು, ಮತ್ತೊಮ್ಮೆ ಸಂಯುಕ್ತರಾಜ್ಯ ವ್ಯವಸ್ಥೆಯೆಂದು ಕೇಂದ್ರ ಸರ್ಕಾರ ಗೋಸುಂಬೆಯಂತೆ ವರ್ತಿಸುತ್ತಿದೆ. ಇದೀಗ ಇಲ್ಲಿ ಗಣರಾಜ್ಯ ವ್ಯವಸ್ಥೆಯೂ ಇಲ್ಲ, ಪ್ರಜಾಪ್ರಭುತ್ವವೂ ಇಲ್ಲ. ರಾಜ್ಯಾಂಗದ ಲೋಪವನ್ನು ದುರ್ಬಳಕೆಮಾಡಿಕೊಂಡು ಕೇಂದ್ರ ಭಾರತೀಯರಿಗೆ, ರಾಜ್ಯಗಳಿಗೆ ವಂಚನೆ ಅನರ್ಥಗಳನ್ನುಂಟು ಮಾಡುವ ಮೂಲಕ ಅಪರಿಹಾರ್ಯ ಪ್ರಮಾದಗಳನ್ನೆಸಗುತ್ತಿದೆ.

'ಕೇಂದ್ರ ಸಚಿವ ಮಂಡಲಿ ನಡಸುತ್ತಿರುವ ಮತ್ತೊಂದು ಅಪರಾಧವೆಂದರೆ ಪಾರ್ಲಿಮೆಂಟಿನ ಗಮನಕ್ಕೆ ತಾರದೆ, ರಾಜ್ಯಗಳಿಗೆ ತಿಳಿಸದೆ, ಸಾರ್ವಜನಿಕ ಚರ್ಚೆಗೂ ಅವಕಾಶಕೊಡದೆ, ತಾನೇ ಸಾರ್ವಭೌಮರೆಂದು ತಿಳಿದು ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವುದು. ಅಂಥ ಒಪ್ಪಂದಗಳಿಂದಾಗುವ ಹಾನಿಕಾರಕ ಪರಿಣಾಮಗಳು ಅಗಣಿತ. ಅವುಗಳಿಂದಾಗಿ ರಾಜ್ಯಗಳು ಬಲಿಪಶುಗಳಾಗುತ್ತವೆ; ಕೃಷಿ ಮತ್ತು ಸಣ್ಣಕೈಗಾರಿಕೆಗಳು ಮಣ್ಣುಗೂಡುತ್ತವೆ; ರಾಜ್ಯ ಖಜಾನೆಗಳು ದಿವಾಳಿಯಾಗುತ್ತವೆ; ಕೇಂದ್ರ ಸಚಿವ ಮಂಡಲಿ ತನ್ನ ಸಾರ್ವಭೌಮತ್ವವನ್ನು ಮತ್ತು ವ್ಯವಸ್ಥೆಗಳನ್ನು ವಿದೇಶೀಯ ಶಕ್ತಿಗಳಿಗೆ ಒಪ್ಪಿಸಿಕೊಡುತ್ತದೆ. ರಾಜ್ಯಾಧಿಕಾರದ ಪಟ್ಟಿಯಲ್ಲಿರುವ ಹಾಗೂ ಜೋಡಿಪಟ್ಟಿಯಲ್ಲಿರುವ ವಿಷಯಗಳನ್ನು ರಾಜ್ಯಗಳೊಡನೆ ಸಮಾಲೋಚನೆ ನಡಸದೆ ವಿದೇಶೀಯರಿಗೆ ಮಾರಾಟಮಾಡಬಹುದೆ? ಇಡೀ ದೇಶದ ಮೇಲೆ ಅಥವಾ ರಾಜ್ಯಗಳ ಮೇಲೆ ಆಘಾತವುಂಟು ಮಾಡುವ ಸಂಗತಿಗಳಿಗೆ ಸಂಸತ್ ಮತ್ತು ಶಾಸನ ಸಭೆಗಳ ಒಪ್ಪಿಗೆಯಿಲ್ಲದೆ,

ಅವುಗಳಿಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಕೇಂದ್ರ ಸರ್ಕಾರ ಸಹಿ ಹಾಕ ಕೂಡದು. ಸೆನೆಟ್‌ನ ಒಪ್ಪಿಗೆಯಿಲ್ಲದೆ, ಅಥವಾ ಅನುಮೋದನೆಯಿಲ್ಲದೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಕೇಂದ್ರ ಸಚಿವ ಮಂಡಲಿ ಅಂತರ ರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವಂತಿಲ್ಲ. ಸಂಯುಕ್ತ ವ್ಯವಸ್ಥೆ ವ್ಯವಹಾರ ಕಾಯಿದೆ ಮತ್ತು ಕೇಂದ್ರೀಯ ನ್ಯಾಯಗಳ ನಡುವೆ ಸಮನ್ವಯ ವನ್ನುಂಟುಮಾಡುವ ಅಗತ್ಯವಿದ್ದರೆ ವಿರಳವಾಗಿ ವೀಟೊ ಅಧಿಕಾರ ಬಳಸಬಹುದು.'

-ಇವು ಮುಖ್ಯವಾಗಿ ಕೃಷ್ಣ ಅಯ್ಯರ್ ಅವರ ಅಮೂಲ್ಯ ಅಭಿಪ್ರಾಯಗಳು. ದುರದೃಷ್ಟ ವಶಾತ್ ಈ ದೇಶದಲ್ಲಿ ಸ್ವತಂತ್ರವಾಗಿ ಚಿಂತನೆಮಾಡುವ ಮುಂದಾಳುಗಳು ಕಡಿಮೆ. ತಮ್ಮ ಸ್ವತಂತ್ರಾಭಿಪ್ರಾಯಗಳನ್ನು ಬಹಿರಂಗಗೊಳಿಸುವ ಧೈರ್ಯಶಾಲಿಗಳು ನಾಲ್ಕಾರು ಮಂದಿ ಸಿಕ್ಕಿದರೆ ಹೆಚ್ಚು. ಅವರಲ್ಲೊಬ್ಬರು ನ್ಯಾಯಮೂರ್ತಿ ಕೃಷ್ಣ ಅಯ್ಯರ್. ಈ ಪುಟ್ಟ ಲೇಖನದಲ್ಲವರು ಇಂಡಿಯಾ ದೇಶದ ಜಾತಕವನ್ನು ಬರೆದಿದ್ದಾರೆ. ಅದನ್ನು ನಾಯಕರು ಲಕ್ಷಿಸದಿದ್ದರೆ ಭವಿಷ್ಯದ ಅನಾಹುತ ಕಟ್ಟಿಟ್ಟ ಗಂಟು.

ಅಂಗಿಯ ಅಂದರೆ ಶರೀರದ ಬಲ ಅಂಗಾಂಗಗಳ ಶಕ್ತಿಯನ್ನವಲಂಬಿಸಿದೆ. ಅಂತೆಯೇ ರಾಷ್ಟ್ರದ ಬಲ ರಾಜ್ಯಗಳ ಬಲವನ್ನವಲಂಬಿಸಿದೆ. ಭಾರತದಂಥ ಬಾಹುಳ್ಯ ರಾಷ್ಟ್ರದಲ್ಲಿ, ಸಂಯುಕ್ತ ಸಂಸ್ಥಾನದಲ್ಲಿ ಎಂಥ ಪ್ರಜಾಪ್ರಭುತ್ವವಿರಬೇಕೋ ಅದಿಲ್ಲದಿರುವುದು ವಿಷಾದದ ಸಂಗತಿ. ಅತಿಕೇಂದ್ರೀಕರಣದ ಮೂಲಕ ದೆಹಲಿ ಮೊಗಲ್ ದರ್ಬಾರಿನ, ಸರ್ವಾಧಿಕಾರದ ಕೇಂದ್ರವಾಗಿದೆ. ಅದು ಔತ್ತರೇಯರ ಚಿಪ್ಪೋಡಾಗಿದೆ. ದಕ್ಷಿಣವನ್ನು ದುರ್ಬಲಗೊಳಿಸಿ, ದ್ರಾವಿಡ ಸಂಸ್ಕೃತಿಯನ್ನು ಹೇಳ ಹೆಸರಿಲ್ಲದಂತೆ ಅಳಿಸಿಬಿಡುವ ಸನ್ನಾಹ ನಡೆಯುತ್ತಿದೆ. ಪ್ರತಿರಾಜ್ಯದಲ್ಲಿಯೂ ಕೇಂದ್ರ ಸರ್ಕಾರ ಸಮಾನಾಂತರ ಆಡಳಿತ ನಡಸುತ್ತಿದೆ. ಕೇಂದ್ರ ಸರ್ಕಾರ ರಾಜ್ಯಗಳಲ್ಲಿ ಶಾಲೆಗಳನ್ನೇಕೆ ನಡಸಬೇಕು. ಟಿಸಿಎಚ್, ಬಿಎಡ್, ಎಲ್ಲ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವಾಗ ಕೇಂದ್ರದ ಅನುಮತಿಯನ್ನು ಪಡೆಯಬೇಕಾದ ನಾಚಿಕೆಗೇಡಿನ ವ್ಯವಸ್ಥೆಯನ್ನು ಪ್ರತಿಭಟಿಸುವ ಆತ್ಮಗೌರವವುಳ್ಳ ಗಂಡೆದೆಯ ನಾಯಕರು ದಕ್ಷಿಣದಲ್ಲಿಲ್ಲದ್ದು ದುರ್ದೈವ. ಸಮಾನಾಂತರ ಆಡಳಿತ ತಪ್ಪುವುದಾದರೆ, ಕೇಂದ್ರ, ರಾಜ್ಯಗಳ ನಡುವೆ ಸಾಮರಸ್ಯ ಸೌಹಾರ್ದ ಹೆಚ್ಚುವುದಲ್ಲದೆ, ಕೇಂದ್ರ ಸರ್ಕಾರದ ಅನಾವಶ್ಯಕವಾದ ಖರ್ಚು ಕಡಮೆಯಾಗುತ್ತದೆ. ಕೇಂದ್ರದ ಮಂತ್ರಿಗಳು ಯಾವಾಗಲೂ ತಂತಮ್ಮ ರಾಜ್ಯಗಳಲ್ಲಿ ಸುತ್ತಾಡುವುದರಿಂದ, ರಾಜಧಾನಿಯಲ್ಲಿ ಕೆಲಸ ಸಾಕಷ್ಟಿಲ್ಲವೆಂದು ತೋರುತ್ತದೆ. ಆದ್ದರಿಂದ ಮಂತ್ರಿಗಳ ಸಂಖ್ಯೆಯನ್ನು ಕನಿಷ್ಠ ಪ್ರಮಾಣಕ್ಕಿಳಿಸುವುದು ಸೂಕ್ತ. ಈಗ ಪ್ರತಿರಾಜ್ಯದಲ್ಲಿಯೂ ದ್ವಿಮುಖ ಪ್ರಭುತ್ವವಿದ್ದು, ರಾಜ್ಯಸರ್ಕಾರಗಳು ಕೇಂದ್ರ ಸರ್ಕಾರದ ಬಾಲಂಗೋಚಿಗಳಂತಿರಬೇಕಾಗಿದೆ ; ಭಿಕ್ಷುಕರಂತಿರಬೇಕಾಗಿದೆ. ದಿನ ಬೆಳಗಾದರೆ ನಾಲ್ಕಾರು ಮಂದಿ ಮಂತ್ರಿಗಳು ಮತ್ತು ಹತ್ತಾರು ಮಂದಿ ಅಧಿಕಾರಿಗಳು ಸಣ್ಣ ಪುಟ್ಟ ವಿಷಯಗಳಿಗೆ ದೆಹಲಿಗೆ ಹೋಗಬೇಕಾದ ಪರಿಸ್ಥಿತಿಯಿಂದ ರಾಜ್ಯಗಳ ಖಜಾನೆಗಳು ಬರಿದಾಗುತ್ತಿವೆ. ಬಡಬೋರೇಗೌಡನ ಹಣ ಪೋಲು ಸರ್ಕಾರದ ಕೆಲಸ ಹಾಳು. ಇದರ ಜತೆಗೆ ಮಂತ್ರಿಗಳು, ಮುಖ್ಯವಾಗಿ ಮುಖ್ಯಮಂತ್ರಿಗಳು ಪಕ್ಷದ ಧುರೀಣರು ಕರೆದಾಗಲೆಲ್ಲ ಉಸಿರುಕಟ್ಟಿಕೊಂಡು ದೆಹಲಿಗೆ ಓಡಬೇಕು; ಬಗ್ಗಿ ಸಲಾಮು ಹೊಡೆಯಬೇಕು ; ನಜರು ಮುಜಿರೆ ಒಪ್ಪಿಸಬೇಕು ; ರಾಜ್ಯಗಳ ಮಂತ್ರಿಗಳನ್ನು ನಂಬಲಾರದೆ ಎಲ್ಲ ಪಕ್ಷಗಳೂ ಮಂತ್ರಿಗಳ ಮೇಲೆ ಕಣ್ಣಿಡುವಂತೆ ದೆಹಲಿ ಮೂಲದ ಉಸ್ತುವಾರಿ

ನವಾಬರನ್ನು ನೇಮಿಸುತ್ತವೆ. ಅವರು ರಾಜ್ಯಗಳಿಗೆ ಬಿಜಯಂಗೈದಾಗ ಅತಿಥಿಸತ್ಕಾರ ನಡೆಯಬೇಕಲ್ಲವೆ? ಇದನ್ನೆಲ್ಲ ನೋಡಿದಾಗ ಈ ದೇಶದಲ್ಲಿ ಪ್ರಜಾಪ್ರಭುತ್ವವಿದೆಯೇ ಎಂದು ಯೋಚಿಸಬೇಕಾಗಿದೆ. ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಸಮ್ಮಿಶ್ರ ಸರ್ಕಾರಗಳ ಅನಿವಾರ್ಯತೆ ಮತ್ತು ಚುನಾವಣೆಗಳ ಅವಧಿಪೂರ್ವ ಪೌನಃ ಪುನ್ಯ- ಇವು ಮೇಲೆ ದಾಖಲಿಸಿರುವ ಪ್ರಮಾಣಗಳ ಪರಿಣಾಮವೆಂಬುದ ರಲ್ಲಿ ಸಂದೇಹವಿಲ್ಲ. ಇಂಥ ಪರಿಸ್ಥಿತಿಗೆ ರಾಜ್ಯನಾಯಕರ ಅಂತಃಕಲಹ , ಅನೈಕ್ಯತೆ , ಜಾತೀಯತೆ ಕಾರಣವಾಗಿರಬಹುದೆ?

ಅಧಿಕಾರ ಸ್ಥಾನಮಾನಗಳನ್ನು ಹಂಚುವಲ್ಲಿ ಉತ್ತರ-ದಕ್ಷಿಣವಲಯಗಳ ನಡುವೆ ಅಜಗಜಾಂತರ ತಾರತಮ್ಯವಿದೆ. ಕೇಂದ್ರಸರ್ಕಾರದ ಕಚೇರಿಗಳಲ್ಲಿ ಉತ್ತರ-ದಕ್ಷಿಣದವರು ಸಂಖ್ಯೆ ಸಮನಾಗಿದೆಯೆ? ರಾಯಭಾರಿ, ರಾಜ್ಯಪಾಲ ಮೊದಲಾದ ಉನ್ನತ ಹುದ್ದೆಗಳಲ್ಲಿ ದಕ್ಷಿಣದವರಿಗೆ ಸಮಪಾಲು ಸಿಗುತ್ತದೆಯೆ? ಉಪಪ್ರಧಾನಿಯ ಹುದ್ದೆಯೊಂದನ್ನು ಸೃಷ್ಟಿಸಿ, ಪರ್ಯಾಯ ಕ್ರಮದಿಂದ ಹುದ್ದೆಗಳನ್ನು ಭರ್ತಿಮಾಡಬಹುದಲ್ಲವೆ? ಈ ವ್ಯವಸ್ಥೆ ಸಾಧ್ಯವಿಲ್ಲವೆನ್ನುವುದಾದರೆ ಉತ್ತರ ದಕ್ಷಿಣ ವಲಯ ಸಂಯುಕ್ತ ಸಂಸ್ಥಾನಗಳೆಂದು ರಚನೆಗೊಂಡು, ಸೈನ್ಯ ರಕ್ಷಣೆ ನಾಣ್ಯ ವಿದೇಶಾಂಗ ವ್ಯವಹಾರ ಲೆಕ್ಕತಪಾಸಣೆ ಅಂತರರಾಜ್ಯ ವ್ಯವಹಾರಗಳಿಗೆ ಮಾತ್ರ ಸೀಮಿತವಾದ ಒಕ್ಕೂಟವನ್ನು ರೂಪಿಸಿಕೊಳ್ಳಬಹುದು . ಕೊನೆಯ ತ್ರಿಮುಖ ವ್ಯವಸ್ಥೆಗಿಂತ ಮೊದಲ ಏಕಮುಖ ವ್ಯವಸ್ಥೆಯೇ ಸರಿಯೆಂಬುದರಲ್ಲಿ ಅನುಮಾನವಿಲ್ಲ.

ಈ ಉತ್ತರ-ದಕ್ಷಿಣ ಭಾರತಗಳ ರಾಜಕೀಯ ಸಾಂಸ್ಕೃತಿಕ ಸಾಮಾಜಿಕ ಸ್ಪರ್ಧೆ ಯಾವಾಗಲೂ ಇದ್ದದ್ದೇ. ರಾಮಾಯಣದ ಕಾಲದಲ್ಲಂತು ಅದು ತೀವ್ರವಾಗಿತ್ತೆಂಬುದು ಅದನ್ನೋದಿದವರಿಗೆ ಗೊತ್ತಾಗುತ್ತದೆ. ಚಾಮರಸಾದಿ ಕವಿಗಳು ರಾಮಾಯಣ ಭಾರತಗಳನ್ನು ಜಾರಚೋರರ ಕತೆಗಳೆಂದು ಕರೆದಿದ್ದಾರೆ. ದಕ್ಷಿಣದವರನ್ನು ಉತ್ತರದವರು ದಸ್ಯುಗಳೆಂದು, ಕಪಿಗಳೆಂದು, ರಾಕ್ಷಸರೆಂದು ಕರೆದದ್ದುಂಟು. ಸೀತಾಪಹರಣಕ್ಕೋದ್ಯುಕ್ತನಾಗಿ ಹೊರಡುವ ರಾವಣ ಮಂಡೋದರಿಯರ ಸಂವಾದದಲ್ಲಿ ಉತ್ತರದವರು ದಕ್ಷಿಣದವರನ್ನು ನಿಂದಿಸುವ ಕ್ರೂರ ರೀತಿಯನ್ನು ಗಮನಿಸಬಹುದು (ಶ್ರೀರಾಮಾಯಣದರ್ಶನಂ ಮಹಾಕಾವ್ಯ, ಕುವೆಂಪು, ಕಿಷ್ಕಿಂಧಾ ಸಂಪುಟಂ, ಪು ೨೧೩-೨೧೪, ಪಂಕ್ತಿಗಳು ೭೫-೯೦) ವಿಷ್ಣು ದಶಾವತಾರಗಳನ್ನೆತ್ತಿದ್ದು ಉತ್ತರದ ನೆಲದಲ್ಲೆಂಬುದು ಅವರ ಜಂಬ. ಆದರೆ ದಕ್ಷಿಣದಲ್ಲಿ ಮೂವರು ಆಚಾರ್ಯರು ಜನ್ಮವೆತ್ತದಿದ್ದರೆ ಹಿಂದೂ ಸಂಸ್ಕೃತಿ [ಆದರೀಗ ವಿವಿಧ ಮತ ಜನಾಂಗಗಳು ಮಿಳಿತಗೊಂಡಿರುವುದರಿಂದ,ಹಿಂದೂ ಸಂಸ್ಕೃತಿ ಇತರ ಸಂಸ್ಕೃತಿಗಳಂತೆ ಜಡಶವವಾಗಿರದೆ , ಜೀವಂತ ಗತಿಶೀಲ ಸಂಸ್ಕೃತಿಯಾಗಿದೆ. ಜಗತ್ತಿನ ಎಲ್ಲ ಧರ್ಮಗಳ ಮೇಲೆ ಅದು ಪ್ರಭಾವ ಬೀರಿರುವಂತೆ, ಸಮಸ್ತ ಧರ್ಮಗಳ ಸಂಪರ್ಕದಿಂದ ಅದು ಪುಷ್ಟಿಗೊಂಡಿದೆ. ಅದರಿಂದಾಗಿ ಅದನ್ನು ಭಾರತೀಯ ಸಂಸ್ಕೃತಿಯೆನ್ನಬಹುದು. ಈ ಹೆಸರು ಎಲ್ಲ ಧರ್ಮದವರಿಗೂ ಇಷ್ಟವಾಗಬಹುದೆಂದು ತೋರುತ್ತದೆ] ಎಂದೋ ನಾಮಾವಶೇಷ ವಾಗುತ್ತಿತ್ತೆಂಬುದನ್ನು ಉತ್ತರದವರು ಅರಿಯಬೇಕಾಗಿದೆ.

ರಾಜ್ಯಾಂಗ ಪುನರವಲೋಕನ ಸಂದರ್ಭದಲ್ಲಿ ಮೇಲಣ ಸೂಚನೆಗಳ ಕಡೆಗೆ ಸಮಿತಿ ಗಮನ ಹರಿಸಲು ಸಾಧ್ಯವೆ? ರಾಜ್ಯಾಂಗ ರಚನೆಯಾದ ಅರ್ಧಶತಮಾನದ ನಂತರ ಅದರ ಪುನರವಲೋಕನ ತಪ್ಪಲ್ಲ. ರಾಜ್ಯಾಂಗ ಜಡವಸ್ತುವಾಗಬಾರದು; ಅದು ಕಾಲಾತೀತವಲ್ಲ ; ಅಣುವೇಗದಲ್ಲಿ

ಸಾಗುತ್ತಿರುವ ಜಗತ್ತಿನ ಆಯಾಯ ಕಾಲದ ಆಶೆಆಕಾಂಕ್ಷೆಗಳನ್ನದು ಪ್ರತಿಬಿಂಬಿಸುವಂತಿರಬೇಕು. ಕೇಸರೀಕರಣ ಅವಲೋಕನದ ಗುಪ್ತಕಾರ್ಯಕ್ರಮವಾಗುವುದಾದರೆ ಅಕ್ಷಮ್ಯ ಅಪರಾಧ ವಾಗುತ್ತದೆ. ಅದು ಯಾವಾಗಲೂ ಗತಿಶೀಲವಾಗಿರಬೇಕು, ಜನಪರವಾಗಿರಬೇಕು. ಐವತ್ತು ವರ್ಷ ಗಳ ಆಡಳಿತಾನುಭವದ ಹಿನ್ನೆಲೆಯಲ್ಲಿ ರಾಷ್ಟ್ರದ ಬೇಕು ಬೇಡಗಳೇನೆಂಬುದು ಸ್ಪಷ್ಟವಾಗುತ್ತದೆ. ತಮ್ಮ ನೆರಳಿನ ಭೂತವನ್ನು ಕಂಡು ಭಯಪಡುವ ಜನ ಭೂತಕಾಲದ ಕಡೆಗೆ ತಿರುಗಿ ನೋಡಲು ಹೆದರುತ್ತಾರೆ. ಕೆಲವು ನಿಬಂಧನೆಗಳು ಪ್ರಜಾಪ್ರಭುತ್ವ ತತ್ತ್ವಕ್ಕೆ ವಿರುದ್ಧವಾಗಿವೆಯೆಂಬುದಂತು ಸತ್ಯ. ಉದಾಹರಣೆಗೆ ೩೫೬ನೆಯ ನಿಬಂಧನೆ. ರಾಜ್ಯಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ , ಅವುಗಳ ಅಧಿಕಾರದ ಕಿಸೆಗೆ ಕತ್ತರಿ ಹಾಕುವ, ಅವುಗಳ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸದ ನಿಬಂಧನೆಗಳಿಂದ ಪ್ರಯೋಜನವೇನು? ರಾಷ್ಟ್ರದ ಸಾಂಸ್ಕೃತಿಕ ವೈವಿಧ್ಯಗಳನ್ನು ರಕ್ಷಿಸುವ ನಿಯಮಗಳ ಕೊರತೆ ಯಿದೆಯಲ್ಲವೆ, ಈಗಿರುವ ರಾಜ್ಯಾಂಗದಲ್ಲಿ ರಾಜ್ಯಗಳಿಗೆ ಮೀಸಲಾದ ಅಧಿಕಾರಗಳನ್ನು ಸಹ ಕೇಂದ್ರ ಕಿತ್ತುಕೊಳ್ಳುತ್ತಿದೆ. ಸಮಾನಾಧಿಕಾರಗಳ ಪಟ್ಟಿ ತೊಲಗಿ, ಎರಡೇ ಪಟ್ಟಿಗಳುಳಿಯಬೇಕು. ರಾಷ್ಟ್ರೀಯ ಏಕತೆಯ ರಕ್ಷಣೆಗೆ ಅತ್ಯಗತ್ಯವಾದ ಕನಿಷ್ಠ ಅಧಿಕಾರಗಳನ್ನು ಮಾತ್ರ ಕೇಂದ್ರಕ್ಕೆ ಉಳಿಸಬೇಕು. ಚುನಾಯಿತ ಅಧಿಕಾರಿಗಳಿಗೆ ಅವರವರ ಕ್ಷೇತ್ರಗಳಲ್ಲಿ ಪೂರ್ಣಾಧಿಕಾರವಿರಬೇಕು. ಅವರು ತಮ್ಮನ್ನು ಚುನಾಯಿಸಿದವರಿಗೆ ಮಾತ್ರ ಜವಾಬ್ದಾರರಾಗಿರತಕ್ಕದ್ದು, ಸ್ವಾಯತ್ತತೆ ಇಲ್ಲದೆ ಪ್ರಜಾಪ್ರಭುತ್ವ ಸಾರ್ಥಕವಾಗಲಾರದು. ಸಂಸತ್ ಮತ್ತು ಶಾಸನ ಸಭೆಗಳಿಗೆ ಕಾಲಾವಧಿಯನ್ನು ಕಡ್ಡಾಯಗೊಳಿಸುವ ಸಲಹೆ ಸಾಧುವಲ್ಲ. ಅಪರಾಧಿಗಳನ್ನು ಮಾತ್ರವಲ್ಲ, ಅವರೊಡನೆ ಸಂಪರ್ಕ ಹೊಂದಿರುವ ರಾಜಕಾರಣಿಗಳನ್ನು ಅಧಿಕಾರ ಸ್ಥಾನಗಳಿಂದ ದೂರವಿರಿಸುವಂಥ ನಿಬಂಧನೆಗಳು ಜರೂರಾಗಿ ಆಚರಣೆಗೆ ಬರಬೇಕಾಗಿದೆ. ಅಮೆರಿಕಾದಲ್ಲಿರುವಂತೆ ಮೇಲ್ಮನೆಗಳ ಅಧಿಕಾರವನ್ನು ಅಧಿಕ ಗೊಳಿಸಬೇಕು. ಸಾಮಾಜಿಕ ನ್ಯಾಯ, ಸ್ವಾಯತ್ತತೆ, ಸಂಯುಕ್ತತ್ವ ಮತ್ತು ಪ್ರಜಾಸತ್ತೆಗಳ ಸಮನ್ವಯ ವನ್ನು ಸಾಧಿಸಬೇಕಾಗಿದೆ. ನ್ಯಾಯ ವಿತರಣೆಯ ವಿಲಂಬವನ್ನು ತಪ್ಪಿಸಲು ಬೇಕಾದ ನಿಬಂಧನೆಗಳನ್ನು ರಾಜ್ಯಾಂಗದಲ್ಲಿ ಸೇರಿಸಬೇಕು. ಜಯಲಲಿತಾರವರ ಸಂಬಂಧದ ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿದ್ದರೆ ಇಂದಿನ ರಾಜಕೀಯ ಶಾಸನೀಯ ಬಿಕ್ಕಟ್ಟು ಮುಗ್ಗಟ್ಟುಗಳ ಕುಲುಮೆಯಲ್ಲಿ ಬೇಯ ಬೇಕಾಗಿರಲಿಲ್ಲ. ಅತಿಕೇಂದ್ರೀಕರಣ ಮತ್ತು ಅಧಿಕಾರಾಪಹರಣ ರಾಷ್ಟ್ರದ ಅನೈಕ್ಯಕ್ಕೆ ಮತ್ತು ವಿಚ್ಛಿದ್ರತೆಗೆ ಕಾರಣವಾಗುತ್ತವೆನ್ನುವುದನ್ನು ಅರಿಯ ಬೇಕಾದ್ದು ರಾಷ್ಟ್ರನಾಯಕರ ಆದ್ಯ ಕರ್ತವ್ಯವಾಗಬೇಕಾಗಿದೆ.

ಆಂಗ್ಲ ಕಾದಂಬರಿಕಾರ ಆರ್.ಕೆ.ನಾರಾಯಣ್ ಅವರ ಪಂಚತ್ವ

ವಿರಾಣ್ಮನದಲ್ಲಿ ನಿರಂತರವಾಗಿ ನಡೆಯುವ ಕ್ರಿಯೆ ಪ್ರಕ್ರಿಯೆಗಳಾಗಲಿ ಭವಿಷ್ಯದ್ಘಟನೆಗಳ ಸೂಚನೆಗಳಾಗಲಿ ಮೊದಲೇ ಮಾನವನ ಅರಿವಿಗೆ ಬರುವುದಿಲ್ಲ. ತಮಿಳುನಾಡಿನಲ್ಲಿ ಜನ್ಮತಾಳಿದರೂ, ಮಾಲ್ಗುಡಿಯ ಸೃಷ್ಟಿಕರ್ತ ಕರ್ನಾಟಕದಲ್ಲಿ ಬೆಳೆದು ವಿಶ್ವಕೀರ್ತಿಯನ್ನು ಸಂಪಾದಿಸಿದ್ದು ಆಕಸ್ಮಿಕ ಘಟನೆಯಲ್ಲ; ಅದು ಸೃಷ್ಟಿಸಂಕಲ್ಪದ ಫಲವಲ್ಲವೆ?

ಸ್ಥಳೀಯ ಪ್ರತಿಭೆಯ ದಕ್ಷತೆಯ ಅಭಾವದಿಂದಲೋ, ಕಾಲೋಚಿತವಾಗಿ ಸ್ಥಳೀಯ ಪ್ರತಿಭೆಯನ್ನು ಬೆಳೆಸದ ಪ್ರಭುತ್ವದ ನಿರ್ಲಕ್ಷ್ಯದಿಂದಲೋ ಅಥವಾ ಆಂಗ್ಲಸರ್ಕಾರದ

ಒತ್ತಾಯದಿಂದಲೋ ಪ್ರಾದೇಶಿಕ ಭಾಷೆ ಬರದ ಹೊರಗಿನವರನ್ನು ದಿವಾನರನ್ನಾಗಿ ಮೈಸೂರು ಸಂಸ್ಥಾನದ ಮಹಾರಾಜರು ನೇಮಕ ಮಾಡಿಕೊಳ್ಳುತ್ತಾರೆ. ಶೇಷಾದ್ರಿ ಅಯ್ಯರ್ ರಂಗಾಚಾರ್ಲು ಅಂಥವರು ತಮ್ಮ ಜತೆಯಲ್ಲಿ ತಮ್ಮ ಕಡೆಯವರ ದೊಡ್ಡ ದಂಡನ್ನೇ ಕರೆತರುತ್ತಾರೆ. ಇದರಿಂದಾಗಿ ಸ್ಥಳೀಯ ಮೇಧಾವಿಗಳಲ್ಲಿ ನಿರುತ್ಸಾಹ ಅಸಹನೆ ದ್ವೇಷ ಮಾತ್ಸರ್ಯಗಳು ಮೂಡುವುದು ಸಹಜ. ಆಡಳಿತದ ಅಧಿಕಾರಸ್ಥಾನಗಳಿಗೆ ಮಾತ್ರವಲ್ಲ, ವಿದ್ಯಾಭ್ಯಾಸ ಇಲಾಖೆಗೂ ತಮಿಳುನಾಡಿನವರೆ ಬರುತ್ತಾರೆ. ಪ್ರಾಯಶಃ ಆಂಗ್ಲ ಭಾಷೆಯ ಶಿಕ್ಷಣ ಅಲ್ಲಿ ಮೊದಲು ಶುರುವಾದದ್ದೇ ಕಾರಣ ವಿರಬಹುದು. ಇಲ್ಲಿ ಆಂಗ್ಲಮಾಧ್ಯಮ ಶಿಕ್ಷಣ ಪ್ರಾರಂಭವಾದಾಗ ಸಹಜವಾಗಿಯೇ ಅಲ್ಲಿಯ ಉಪಾಧ್ಯಾಯರನ್ನು ಆಮದುಮಾಡಿಕೊಂಡಿರಬೇಕೆಂದು ತೋರುತ್ತದೆ. ಸುದೈವದಿಂದ ಕನ್ನಡ ಮಾಧ್ಯಮದ ಪ್ರಾಥಮಿಕಶಾಲೆಗಳಿಗೆ ಹೊರಗಿನವರು ಬರಲಾಗಲಿಲ್ಲ.

ತಮಿಳುನಾಡಿನಿಂದ ಬಂದ ಪ್ರೌಢಶಾಲೆಯ ಉಪಾಧ್ಯಾಯರು ಸ್ಥಳೀಯರೊಡನೆ ಹೇಗೆ ವರ್ತಿಸುತ್ತಿದ್ದರೆಂಬುದನ್ನು ಶತಾಯುಷಿ ಎ.ಎನ್.ಮೂರ್ತಿರಾಯರು ವಿನೋದವಾಗಿ ವಿವರಿಸುತ್ತಾರೆ, ತಮ್ಮ ಆತ್ಮಕಥೆಯಲ್ಲಿ. ಅವರಾಗ ಮಹಾರಾಜರ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಉಪಾಧ್ಯಾಯರಾಗಿದ್ದರು. ಆಂಗ್ಲ ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದವರು ಆರ್.ವಿ.ಕೃಷ್ಣ ಸ್ವಾಮಿ ಅಯ್ಯರ್. ಅವರು ಚನ್ನಪಟ್ಟಣದಲ್ಲಿಯೂ ಕೆಲಕಾಲ ಇದ್ದರು. ಶಿಸ್ತಿನ ದಕ್ಷತೆಯ ಮೇಧಾವಿ ಮುಖ್ಯೋಪಾಧ್ಯಾಯರೆಂದವರು ಹೆಸರು ಪಡೆದಿದ್ದರು. ಆಗಾಗ್ಗೆ ಕನ್ನಡಿಗ ತಮಿಳರ ನಡುವೆ ವಿರಸದ ಹೊಗೆಯಾಡುತ್ತಿತ್ತು. 'ಈ ಜನ ನಮ್ಮ ದೇಶಕ್ಕೆ ಬಂದು ನಮ್ಮ ಅನ್ನದಿಂದ ಬದುಕಿ ನಮ್ಮ ಮೇಲೆ ಜೋರುಮಾಡುತ್ತಾರೆ' ಎಂಬುದಾಗಿ ಕನ್ನಡಿಗರು ಅಂಬೋಣ. 'ಮೈಸೂರಿನವರಿಗೆ ಬುದ್ಧಿಸಾಲದು. ಆದ್ದರಿಂದ ಅದನ್ನು ಮದರಾಸಿನಿಂದ ಆಮದುಮಾಡಿಕೊಂಡಿರಿ. ನಿಮ್ಮ ಅನ್ನದಿಂದ ನಾವು ಬದುಕಿರಬಹುದು, ನೀವು ಬದುಕಿರುವುದು ನಮ್ಮ ಬುದ್ಧಿಯಿಂದ' ಎಂದು ತಮಿಳರು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ'[1] 'ಅಯ್ಯರುಗಳು ಇಲ್ಲಿ ನೆಲಸಿದ ಮೇಲೆ, ನಾವೂ ಮೈಸೂರಿನವರು; ಕನ್ನಡಿಗರು ಎಂದುಕೊಂಡು ಇಲ್ಲಿಯವರೊಡನೆ ಸೌಹಾರ್ದದಿಂದ ಬೆರೆಯಬೇಕು.... ಕನ್ನಡಿಗರೂ ಅವರನ್ನು ನಮ್ಮವರು ಎಂದು ಕಾಣುತ್ತಿಲ್ಲ'. ಈ ಮಾತು ಇಂದಿಗೂ ಕರ್ನಾಟಕ ದಲ್ಲಿರುವ ಎಲ್ಲ ಅನ್ಯಭಾಷೀಯರಿಗೂ ಅನ್ವಯಿಸುತ್ತದೆ. ಎ.ಎನ್.ಮೂರ್ತಿರಾಯರ ಆತ್ಮಕಥೆ ಯಿಂದ ಉದ್ಧರಿಸಿದ ಈ ಸಂಗತಿಗಳಿಗೂ ಪ್ರಕೃತ ಲೇಖನಕ್ಕೂ ಸಂಬಂಧವೇನೆಂದು ಯಾರಾದರೂ ಕೇಳಬಹುದಲ್ಲವೆ?

ಪ್ರಶ್ನೆ ಸರಿಯಾದದ್ದೇ. ಹಿಂದೆ ಹೆಸರಿಸಿದ ಆರ್.ವಿ.ಕೃಷ್ಣಸ್ವಾಮಿ ಅಯ್ಯರ್ರೇ ರಾಸಿಪುರಂ ಕೃಷ್ಣಸ್ವಾಮಿ ಅಯ್ಯರ್ ನಾರಾಯಣ ಸ್ವಾಮಿಯವರ ತಂದೆ. ಆರ್.ಕೆ.ನಾರಾಯಣ್ ನಾರಾಯಣ ಸ್ವಾಮಿಯವರ ಸಂಕ್ಷಿಪ್ತನಾಮ, ಇಡೀ ಜಗತ್ತಿನಲ್ಲಿ ಪ್ರಸಿದ್ಧವಾದ ಶುಭನಾಮ; ಮೈಸೂರಿಗೆ ಕೀರ್ತಿಯನ್ನು ತಂದುಕೊಟ್ಟ ಪುಣ್ಯನಾಮ. ಅವರು ತಮಿಳುನಾಡಿನಲ್ಲಿಯೇ ತಮ್ಮ ಜೀವಮಾನ ವನ್ನು ಕಳೆದಿದ್ದರೆ ತಮಿಳಿನಲ್ಲಿಯೂ ಬರೆಯುತ್ತಿದ್ದರೋ ಏನೊ? ಕನ್ನಡ ನಾಡಿನಲ್ಲಿದ್ದರೂ ಕನ್ನಡದಲ್ಲಿ ಬರೆಯಲಿಲ್ಲ. ಆದರೆ ಮೈಸೂರಿನಲ್ಲಿಯೇ ವ್ಯಾಸಂಗ ಮುಗಿಸಿ, ಈ ನೆಲದ ಸಾರವನ್ನುಂಡು ಬದುಕಿ, ಇಲ್ಲಿಯೇ ವಿಶ್ವವಿಖ್ಯಾತರಾದದ್ದು ಸೃಷ್ಟಿಸಂಕಲ್ಪವೆಂಬುದಂತು ಸತ್ಯ.

---

[1] ಈ ಉದ್ಧರಣೆಗಳು 'ಸಂಜೆಗಣ್ಣಿನ ಹಿನ್ನೋಟದಿಂದ ಆಯ್ದವು, ಪು ೨೩೧, ೨೩೨,

ಆನುವಂಶಿಕ ಗುಣಗಳಿಗಿಂತ ಪರಿಸರ ಮಾನವನನ್ನು ವಿಶೇಷವಾಗಿ ರೂಪಿಸುತ್ತದೆಂಬುದು
ಜೀವವೈವಿಧ್ಯ ವಿಜ್ಞಾನಿಗಳ ಅಭಿಮತ. ಇದರಿಂದಾಗಿ ಅವರು ವ್ಯಾಸಂಗಮಾಡಿದ ಮಹಾರಾಜ
ಕಾಲೇಜು, ಸುತ್ತಮುತ್ತಣ ಸಮಾಜ, ಇಲ್ಲಿಯ ಗಾಳಿ ನೀರು ಬೆಳಕು ಹವಾಮಾನ, ಬುವಿ ಬಾನು
ಮುಗಿಲುಗಳು, ಅವರು ವಾಸಿಸುತ್ತಿದ್ದ ಲಕ್ಷ್ಮೀಪುರಂ, ಯಾದವಗಿರಿಯ ಮನೆಗಳು, ಅವರು
ವಾಯುಸಂಚಾರಕ್ಕೆಂದು ಹೋಗುತ್ತಿದ್ದ ಕುಕ್ಕರಹಳ್ಳಿಕೆರೆ, ಭೇಟಿನೀಡುತ್ತಿದ್ದ ಮಾರ್ಕೆಟ್ಟು ಅರಮನೆ,
ಚಾಮುಂಡಿ ಬೆಟ್ಟ, ಥಂಡಿ ಸಡಕ್, ನೂರಡಿ ರಸ್ತೆ, ಸಯ್ಯಾಜಿರಾವ್ ರೋಡ್, ಅಲ್ಲಿ ಎದುರಾಗು
ತ್ತಿದ್ದ ವರ್ತಕರು, ಶ್ರೀಮಂತರು, ಪ್ರವಾಸಿಗಳು, ಭಿಕ್ಷುಕರು, ಚಿಕ್ಕಂದಿನ ಕಾಲದ ಮಕ್ಕಳು-ಇಂಥ
ಹತ್ತು ಹಲವಾರು ದೃಶ್ಯಗಳು ಅವರ ಬದುಕನ್ನು ಚೈತನ್ಯವನ್ನು, ಪ್ರತಿಭಾ ಸಾಮರ್ಥ್ಯವನ್ನು ರೂಪಿಸಿವೆ,
ಸಾಹಿತ್ಯಸೃಷ್ಟಿಯನ್ನು ಪ್ರೇರಿಸಿವೆ ಎಂಬುದರಲ್ಲಿ ಅನುಮಾನವಿಲ್ಲ. ಬಹು ಹಿಂದಿನಿಂದ ಮೈಸೂರು
ಸಾಹಿತ್ಯಕಲೆಗಳ ತವರಾಗಿದೆಯೆಂಬುದು ಲೋಕಪ್ರಸಿದ್ಧ ಸಂಗತಿ. ಅವರು ಈ ಪರಿಸರದಲ್ಲಿಲ್ಲದೆ
ಬೇರೆ ಕಡೆ ಬದುಕು ಸಾಗಿಸಿದ್ದರೆ, ಪ್ರಸಿದ್ಧ ಸಾಹಿತಿಯಾಗುತ್ತಿದ್ದರೆ ಎಂಬುದು ಯೋಚಿಸಬೇಕಾದ
ಸಂಗತಿ. ೧೯೯೩ರ ತನಕ, ಅಂದರೆ ೮೭ ವರ್ಷಗಳ ಕಾಲ, ವಾರ್ಧಕ್ಯದಿಂದಾಗಿ ಮದ್ರಾಸಿನಲ್ಲಿ
ಬಂಧುಗಳೊಡನೆ ನೆಲಸುವವರೆಗೆ, ಮೈಸೂರಿನಲ್ಲಿ ವಾಸಿಸುತ್ತಿದ್ದರೆಂಬುದು, ಅವರ ಸಾಹಿತ್ಯಕೃಷಿ
ಸಿದ್ಧಿಗಳೆಲ್ಲ ಇಲ್ಲೇ ನಡೆದದ್ದೆಂಬುದನ್ನು ಗಮನಿಸಿದಾಗ, ಮೈಸೂರೇ ಮಾಲ್ಗುಡಿಯೆಂದೂ, ಆ
ನಾಮದಲ್ಲಿ ಕೃತಜ್ಞತೆಯ ಭಾವವಿದೆಯೆಂದೂ ಊಹಿಸಿದರೆ ತಪ್ಪಾಗಲಾರದು.

ಎಂಟ್ರೆನ್ಸ್ ಪರೀಕ್ಷೆಯಲ್ಲೊಮ್ಮೆ ಅವರು ಇಂಗ್ಲಿಷ್‌ನಲ್ಲಿ ಫೇಲಾದರೆಂಬುದು, ಬಿ.ಎ.ಪದವಿ
ಪಡೆಯಲು ಹೆಚ್ಚು ಕಾಲ ತೆಗೆದುಕೊಂಡರೆಂಬುದು, ಅನಂತರ ಇಂಗ್ಲಿಷ್ ಮೂಲಕ ಜಗತ್ತನ್ನು
ಮರುಳುಗೊಳಿಸಿದರೆಂಬುದು ಆಶ್ಚರ್ಯಕರ ಸಂಗತಿ. ಆದರವರು ತಮ್ಮ ವಿದ್ಯಾರ್ಥಿ ಜೀವನದ
ಕಾಲವನ್ನು ಇಂಗ್ಲಿಷ್ ಗ್ರಂಥಗಳ ಅಧ್ಯಯನಕ್ಕಾಗಿ ವಿನಿಯೋಗಿಸುತ್ತಿದ್ದರೆಂಬುದೂ ಗಮನಿಸ
ಬೇಕಾದ ವಿಷಯ. ಪದವೀಧರರಾದ ಮೇಲೆ ಕೆಲವು ದಿನ ಹೈಸ್ಕೂಲು ಉಪಾಧ್ಯಾಯರಾಗಿದ್ದದ್ದು
ಸಹಜವೇ. ಆದರೆ ಕೆಲವು ಕಾಲ ಈ ಅಯ್ಯರ್ ಮದ್ರಾಸಿನ ಶೂದ್ರಪರ 'ಜಸ್ಟಿಸ್' ಪತ್ರಿಕೆಯ
ಮೈಸೂರಿನ ಬಾತ್ಮೀದಾರರಾಗಿದ್ದುದೂ ಸೋಜಿಗದ ಸಂಗತಿ. ಇದು ಅವರ ಉದಾರಬುದ್ಧಿಗೂ
ವಿಶಾಲದೃಷ್ಟಿಗೂ, ಆ ಪತ್ರಿಕೆಯ ಧ್ಯೇಯಪರವಾದ ನಿಷ್ಠೆಗೂ ನಿದರ್ಶನವಾಗಿದೆ. ಆ ಎರಡು
ವೃತ್ತಿಗಳೂ ತಮಗಲ್ಲವೆಂಬ ಭಾವನೆ ಮೂಡಿ, ಸಾಹಿತ್ಯ ಕೃಷಿಯ ಕಡೆಗೆ , ಸಾರಸ್ವತ ತಪಸ್ಸಿನ
ಕಡೆಗೆ ಅವರ ಗಮನ ಹರಿದದ್ದು, ಅವರ ಬದುಕಿನ ಮಹಾದಿನ, ಭಾರತೀಯ ಸಾಂಸ್ಕೃತಿಕ
ಇತಿಹಾಸದ ಸುವರ್ಣಾಧ್ಯಾಯಾರಂಭದ ಸುಮುಹೂರ್ತ. ಆದರೆ ಬಾತ್ಮಿದಾರರಾಗಿದ್ದಾಗ
ಗಳಿಸಿದ ಅನುಭವ ವೈವಿಧ್ಯ ಸಂಪತ್ತು ಅವರ ಸಾಹಿತ್ಯ ರಚನೆಗೆ ನೆರವಾಗುತ್ತದೆ.

ನಾರಾಯಣ್ 'ನನ್ನ ಕಾಲ' ಎಂಬ ಆತ್ಮಕಥೆ ಬರೆದಿದ್ದಾರೆ. 'ಇಂಗ್ಲಿಷ್ ಉಪಾಧ್ಯಾಯ' ಎಂಬ
ಕಾದಂಬರಿಯೂ ಆತ್ಮಕಥಾನಕವೇ ಹೌದು. ಬೊಜ್ಜಣ್ಣ ರಸ್ತೆಯ ಮನೆಯೊಂದರಲ್ಲಿ ವಾಸಿಸು
ತ್ತಿದ್ದಾಗ, ವಿದ್ಯಾರ್ಥಿದಶೆಯಲ್ಲೇ ಅವರ ಕಣ್ಮನಗಳು ಹುಡುಗಿಯರ ಕಡೆಗೆ ಹರಿಯುತ್ತವೆ. 'ನನ್ನ
ಕಡೆಗೆ ದೃಷ್ಟಿಹರಿಸಿದ ಯಾವ ಹುಡುಗಿಯೇ ಆಗಲಿ, ಕೂಡಲೇ ನನ್ನ ಹೃದಯ ಸಖಿಯಾಗು
ತ್ತಿದ್ದಳು. ಬೇರೊಬ್ಬಳು ಅವಳ ಸ್ಥಾನವನ್ನಾಕ್ರಮಿಸಿಕೊಳ್ಳುವವರಿಗೆ ಅವಳು ನನ್ನ ಹೃದಯವಾಸಿ
ಯಾಗಿರುತ್ತಿದ್ದಳು' ಎಂದು ಹೇಳಿಕೊಳ್ಳುತ್ತಾರೆ. ಕೊಯಮತ್ತೂರಿನ ಅಕ್ಕನ ಮನೆಗೆ

ಹೋಗಿದ್ದಾಗಲೂ ನಿಷ್ಕರುಣಿ ಮನ್ಮಥ ಅವರ ಮೇಲೆ ಹೂಬಾಣಗಳನ್ನೆಸೆಯುತ್ತಾನೆ. ಕೊನೆಗೆ ಬೀದಿಯ ನಲ್ಲಿಯಲ್ಲಿ ನೀರು ಹಿಡಿದುಕೊಳ್ಳುತ್ತಿದ್ದ ಹುಡುಗಿಯೊಬ್ಬಳಲ್ಲಿ ಅವರಿಗೆ ಪ್ರಣಯಾಂಕುರವಾಗುತ್ತದೆ. ಅವಳೇ ರಾಜಂ. ಅವರಿಗೆ ಜೀವನಾಧಾರದ ನೌಕರಿಯಿಲ್ಲವಾಗಿ, ಗಂಡುಹೆಣ್ಣಗಳ ರಾಶಿಕೂಟ ಸರಿಬರಲಿಲ್ಲವಾಗಿ ಹುಡುಗಿಯ ತಂದೆ ಮದುವೆಗೊಪ್ಪುವುದಿಲ್ಲ. ತಾವು ಬರಹದಿಂದ ಜೀವನಯಾಪನೆ ಮಾಡುವುದಾಗಿಯೂ, ರಾಶಿಕೂಟದ ಬಗ್ಗೆ ತಲೆಕೆಡಿಸಿಕೊಳ್ಳಕೂಡದೆಂದೂ ಅವರು ವಾದಿಸುತ್ತಾರೆ. ಅಕ್ಕನ ಮನೆಯ ಮೂಲೆ ಸೇರಿ, ನಿರಾಶೆಯಿಂದ ಕೊರಗುತ್ತಾರೆ. ಕೊನೆಗೆ ಅವರ ಆಶೆಯೇ ನೆರವೇರುತ್ತದೆ. ಅವರ ಸಂಸಾರ ಅವಿಭಕ್ತ ಕುಟುಂಬದ ಒಂದು ಭಾಗವಾಗಿದ್ದರೂ ಆರ್ಥಿಕಾನುಕೂಲವಿಲ್ಲದಿದ್ದರೂ, ಆ ದಂಪತಿಗಳ ಬದುಕು ಹೂಸರವೆತ್ತಿದಂತೆ ಸಸಾರವಾಗಿ, ಸ್ನೇಹಮಯವಾಗಿ ಸಾಗುತ್ತದೆ. ಪತಿಗೊಬ್ಬಳು ಮಗಳನ್ನು ಕೊಟ್ಟು, ಗಂಡನ ವಿಶ್ವವ್ಯಾಪಿ ಕೀರ್ತಿಯನ್ನು ಹಾಗೂ ಆರ್ಥಿಕಾನುಕೂಲದ ಸುಖವನ್ನನುಭವಿಸುವ ಪುಣ್ಯವಿಲ್ಲದೆ, ಮದುವೆಯಾದ ಆರು ವರ್ಷದಲ್ಲಿಯೇ (೧೯೩೯) ರಾಜಂ ಸ್ವರ್ಗಸ್ಥೆಯಾಗಿ, ಪತಿಯನ್ನು ನಿರಂತರ ದುಃಖಕ್ಕೀಡು ಮಾಡುತ್ತಾಳೆ. ಬರವಣಿಗೆಯ ಮೂಲಕ ನಾರಾಯಣ್ ಆ ದುಃಖವನ್ನು ಸಂಯಮಿಸಿಕೊಳ್ಳುತ್ತಾರೆ. ಬರೆವಣಿಗೆಯಿಲ್ಲದಿದ್ದರೆ ಅದು ಅಸಹನೀಯವಾಗುತ್ತಿತ್ತು. ಬರೆವಣಿಗೆ ಅವರಿಗೆ ರಕ್ಷೆಯಾಗುತ್ತದೆ.

ರಾಜಂ ಅವರ ಕೈಹಿಡಿದ ನಂತರ ಮುಂದಿನ ಎರಡು ವರ್ಷಗಳ ಅವಧಿಯಲ್ಲಿ (೧೯೩೫) 'ಸ್ವಾಮಿ ಮತ್ತು ಸ್ನೇಹಿತರು' ಕಾದಂಬರಿ ಸಿದ್ಧವಾಗುತ್ತದೆ. ಒಂಬತ್ತು ವರ್ಷದೊಳಗಿನ ಮುಗ್ಧ ಮಕ್ಕಳ ಆಶೆ ಆಕಾಂಕ್ಷೆ ಸಾಹಸಗಳೇ ಈ ಕಾದಂಬರಿ ಕತೆಯ ಹೂರಣ. ಎಳೆಯ ವಯಸ್ಸಿನ ಮಾನಸಿಕ ಸ್ವರೂಪ ಸ್ವಭಾವಗಳ ಗತಿ ವಿಲಾಸದ ವೈಭವವಿಲ್ಲಿದೆ. ಮಕ್ಕಳು ಸದಾ ಕ್ರಿಯಾಶೀಲರು, ಕಲ್ಪನಾ ವಿಹಾರಿಗಳೆನ್ನುವ ಸಂಗತಿಯೂ, ಚಿಕ್ಕಂದಿನಲ್ಲಿ ಅವರಿಗೆ ಸರಿಯಾದ ವಾತಾವರಣವನ್ನು ಕಲ್ಪಿಸಿದ್ದಾದರೆ, ಅವರು ಉತ್ತಮ ನಾಗರಿಕರಾಗುತ್ತಾರೆನ್ನುವ ವೈಜ್ಞಾನಿಕವಿಶ್ಲೇಷಣೆಯೂ ಇಲ್ಲಿ ಹೊಳಲು ಗೊಡುತ್ತವೆ. ಸ್ವಾಮಿನಾಥನ್, ಕೋಚ್‌ಮನ್, ಮಣಿ ಇಲ್ಲಿಯ ಪ್ರಧಾನ ಪಾತ್ರಗಳು. ಪ್ರೊ.. ಗ್ರಹಾಂಗ್ರೀನ್‌ರ ಸಹಾಯದಿಂದಾಗಿ ಇದನ್ನು ಇಂಗ್ಲೆಂಡಿನ ಹ್ಯಾಮಿಷ್ ಹ್ಯಾಮಿಲ್ಟನ್ ಪ್ರಕಾಶನ ಪ್ರಕಟಿಸುತ್ತದೆ.

ಅನಂತರ ಒಂದರಮೇಲೊಂದರಂತೆ, ಸುಮಾರು ೪,೫ ವರ್ಷಗಳ ಅವಧಿಯಲ್ಲಿ ೧೪ ಕಾದಂಬರಿಗಳು ಪ್ರಕಟವಾಗುತ್ತವೆ . ಅವುಗಳ ಪೈಕಿ ದಿ ಗೈಡ್, ದಿ ಮ್ಯಾನ್ ಈಟರ್ ಆಫ್ ಮಾಲ್ಗುಡಿ, ದಿ ವೆಂಡಾರ್ ಆಫ್ ಸ್ವೀಟ್ಸ್ ವಿಶ್ವವಿಖ್ಯಾತಿಯನ್ನು ಪಡೆದಿವೆ; ಎ ಹಾರ್ಸ್ ಅಂಡ್ ಟು ಗೋಟ್ಸ್, ಅಣ್ಣಾಮಲೆ ಮೊದಲಾದ ಆರು ಕಥಾ ಸಂಗ್ರಹಗಳು ಬಂದಿವೆ; ಅಷ್ಟೇ ಅಲ್ಲ, ಆತ್ಮಕಥೆ, ಪ್ರಬಂಧಗಳು, ಭಾರತೀಯ ಇತಿಹಾಸ ಕಾವ್ಯ ಭಾಗಗಳ ಭಾಷಾಂತರಗಳು, ಪ್ರವಾಸ ಕಥನಗಳು ಭಾರತೀಯಾಂಗ್ಲ ಸಾಹಿತ್ಯವನ್ನು ಸಮೃದ್ಧಗೊಳಿಸಿವೆ. ದಕ್ಷಿಣಭಾರತದ ಜೀವನ ದೃಶ್ಯ ಚಿತ್ರಣಗಳು ಇಲ್ಲಿ ಸರ್ವಾಂಗ ಸುಂದರವಾಗಿ ಕನ್ನಡಿಗೊಂಡಿವೆ. ಈ ಕಾದಂಬರಿಗಳ ಸರಳ ಸುಸ್ಪಷ್ಟ ಲಲಿತ ಕೋಮಲ ಶೈಲಿಯಿಂದಾಗಿ, ಜೀವಂತ ಕ್ರಿಯಾಶೀಲ ಪಾತ್ರಗಳ ವರ್ಣಮಯ ಮೆರೆವಣಿಗೆಯಿಂದಾಗಿ, ಮಿಗಿಲಾಗಿ ಭಾರತೀಯ ಸಾಮಾಜಿಕ ಸಾಂಸ್ಕೃತಿಕ ಸಂಪತ್ತಿನ ಅಭಿವರ್ಣನೆಯಿಂದಾಗಿ ಅಡೆತಡೆಯಿಲ್ಲದ ಕಥೆಯ ನಿರರ್ಗಳ ಪ್ರವಹನ ಶಕ್ತಿಯಿಂದಾಗಿ ವಿನೂತನ ವಸ್ತು ಪ್ರಕರಣ

ಪ್ರಕಾರಗಳಿಂದಾಗಿ ನಾರಾಯಣನ್ ಅವರ ಕಥೆ ಕಾದಂಬರಿಗಳು ನೂತನ ಪಾಶ್ಚಾತ್ಯ ಜಗತ್ತಿಗೆ ಅಯಸ್ಕಾಂತ ವಾಗುತ್ತವೆ. ಮೊತ್ತಮೊದಲಿಗೆ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಸಾಮ್ರಾಜ್ಯಶಾಹಿ ಶ್ರೀಮಂತ ಪಾಶ್ಚಾತ್ಯ ರಾಷ್ಟ್ರಗಳನ್ನು ಮೋಹಿಸಿದ, ರಮಿಸಿದ ಭಾರತಾಂಗ್ಲ ಸಾಹಿತಿಗಳ ಪೈಕಿ ಪ್ರಾಯಶಃ ಮುಲ್ಕ್‌ರಾಜ್ ಆನಂದರೊಂದಿಗೆ ಅಗ್ರವೀಳ್ಯ ನಾರಾಯಣ್ ಅವರಿಗೆ ಸಲ್ಲುತ್ತದೆ. ವಿದೇಶಗಳಲ್ಲಿ ಭಾರತೀಯರ ಗೌರವವನ್ನು ರಕ್ಷಿಸಿದ ಯಶಸ್ಸು ಟ್ಯಾಗೋರ್ ಬಂಕಿಮರ ನಂತರ ಮುಲ್ಕ್‌ರಾಜ್, ನಾರಾಯಣ್ ಮತ್ತು ರಾಜಾರಾಯರಿಗೆ ಸೇರುತ್ತದೆ. ಇವರ ಪೈಕಿ ನಾರಾಯಣ್ ಮತ್ತು ರಾಜಾರಾವ್ ಕನ್ನಡಿಗರೆಂಬುದು (ನಾರಾಯಣರ ಮಾತು ತಮಿಳಾದರೂ, ಕನ್ನಡದ ನಡುವೆ ಬೆಳೆದು, ಕನ್ನಡದ ನೆಲದಿಂದ ಸ್ಫೂರ್ತಿ ಪಡೆದು, ಸಾಹಿತ್ಯರಚನೆ ಮಾಡಿದವರು) ಹೆಮ್ಮೆಯ ಸಂಗತಿ. 'ಅವರ ಇಡೀ ಬರಹಗಳ ರಾಶಿಯಲ್ಲಿ ಒಂದಾದರೂ ಮಿಂಚಿನಂಥ ಗದ್ಯ ವಾಕ್ಯವಿಲ್ಲ. ಒಂದು ಸಾಲನ್ನಾದರೂ ಉದ್ಧರಿಸಲಾಗದು' ಎಂಬ ಕುಷ್ವಂತ್ ಸಿಂಗರ ಅಭಿಪ್ರಾಯ(ದಿ ವೀಕ್ ೨೭.೫.೨೦೦೧) ವಿಚಾರಣೀಯ.

ಇಡೀ ಕನ್ನಡ ಸಾಹಿತ್ಯದ ಕಾಲಮಾನದಲ್ಲಿ ಇಪ್ಪತ್ತನೆಯ ಶತಮಾನ ಸುಪುಷ್ಟ ಸರ್ವಾಂಗ ಸುಂದರ ಸುಸಮೃದ್ಧ ಸುವರ್ಣಯುಗವೆಂಬ ಘೋಷಣೆ ಸಾರ್ವತ್ರಿಕವಾಗಿ ಹರಡಿತ್ತು; ಪರ್ವತಕಂದರ ನದಿವನಗಳಲ್ಲಿ, ಬುವಿಬಾನುಗಳಲ್ಲಿ ಅನುರಣನಗೈಯುತ್ತಿತ್ತು. ಜಗತ್ತಿನ ಮಹಾಸಾಹಿತಿಗಳಿಗೆಣೆಯಾದ ಮೇರುಸದೃಶ ಸಾಹಿತಿಗಳ ನಡುವೆ ಇದ್ದೂ, ನಾರಾಯಣ್ ಇಲ್ಲದವರಂತಿದ್ದರೆಂಬ ಮಾತೊಂದಿದೆ. ಅವರ ಕೃತಿಗಳೆಲ್ಲವೂ ಕನ್ನಡಕ್ಕೆ ಭಾಷಾಂತರವಾಗದಿರುವುದೊಂದು ಚೋದ್ಯ. ಕಾರಂತ, ಕುವೆಂಪು, ಮಾಸ್ತಿಯವರ ಮಹಾ ಕಾದಂಬರಿಗಳ ಮಾತಂತಿರಲಿ, ಅನಕೃ, ಕೃಷ್ಣಮೂರ್ತಿಪುರಾಣಿಕ, ತರಾಸು, ಬಸವರಾಜ ಕಟ್ಟೀಮನಿ, ಭೈರಪ್ಪ ಮೊದಲಾದ ಶ್ರೇಷ್ಠ ಕಾದಂಬರಿಕಾರರ ಕೃತಿಗಳೊಡನೆ ನಾರಾಯಣರ ಕಾದಂಬರಿಗಳ ತೌಲನಿಕ ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಸಮಾನ ಪ್ರತಿಭೆಯ ಸಾಹಿತಿಗಳ ಕೃತಿ ಮೌಲ್ಯನಿರ್ಣಯ ಕಷ್ಟಸಾಧ್ಯವೂ ಹೌದು, ಆತಂಕಕಾರಿಯೂ ಹೌದು. ಆದರೂ ತೌಲನಿಕ ಸಾಹಸದ ಬೆಲೆಯನ್ನು ಕಡೆಗಣಿಸುವಂತಿಲ್ಲ.

೨೭.೫.೨೦೦೧ನೆಯ ದಿನಾಂಕದ ಪ್ರಜಾವಾಣಿಯ ಪುರವಣಿಯಲ್ಲಿ ಪ್ರೊ. ಡಿ. ಎ. ಶಂಕರ್ ಅವರು ಬರೆದಿರುವ 'ಆರ್.ಕೆ.ನಾರಾಯಣ್ 'ಮಾಲ್ಗುಡಿಯ ಮಾಯೆ' ಎಂಬ ಲೇಖನದಿಂದ ಕೆಲವು ಪಂಕ್ತಿಗಳನ್ನುದ್ಧರಿಸಿದ್ದಾದರೆ, ಅಂದಿನ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ನಾರಾಯಣ್ ಸಾಹಿತ್ಯದ ಇತಿಮಿತಿ ವ್ಯಾಪ್ತಿಗಳನ್ನು ಮತ್ತು ವಾಸ್ತವಿಕತೆಗಳನ್ನು ಪರಿಚಯಿಸಿದಂತಾಗುತ್ತದೆ. 'ನಾರಾಯಣ್ ಅವರಿಗೆ ವಿಮರ್ಶೆ ವಿದ್ವತ್ ಬರೆವಣಿಗೆಯ ಬಗ್ಗೆ ಅಂಥ ಗೌರವವೇನೂ ಇರಲಿಲ್ಲ. ತಮ್ಮ ಕೃತಿಗಳ ಬಗ್ಗೆ ಬಂದ ವಿಮರ್ಶೆಯ ಬಗ್ಗೆ ಅವರಿಗೆ ಒಳಗೊಳಗೆ ಒಂದು ರೀತಿಯ ತಿರಸ್ಕಾರವಿತ್ತು....' ಹೀಗಾಗಿ ನಮ್ಮ ಪ್ರಾದೇಶಿಕ ಸಾಹಿತ್ಯದಲ್ಲಿ ಎದ್ದು ಕಾಣುವ ಜೀವನ ವಿವರಗಳ ಸಾಂದ್ರತೆ, ಇದರಿಂದ ಸಹಜವಾಗಿ ಹೊಮ್ಮುವ ನೈಜತೆಯ ಸೊಗಡು, ಭಾರತೀಯ ಇಂಗ್ಲಿಷ್ ಲೇಖಕರಲ್ಲಿ ಇಲ್ಲ. ಆದ್ದರಿಂದಲೇ ಸಾಮಾಜಿಕ ಅನುಭವದ ಸಾಂದ್ರತೆ ಇಲ್ಲದ ಈ ಬರೆಪಣಿಗೆ ತೆಳುವಾಗಿ, ಕಾದಂಬರಿ ಮುಖ್ಯವಾಗಿ ಎಲ್ಲಿ ಶಕ್ತಿಯುತವಾಗಿರಬೇಕೋ ಅಲ್ಲಿ ದುರ್ಬಲವಾಗಿ ಕಾಣುತ್ತದೆ.' ಡಿಕನ್ಸ್, ಡೀಫೊ, ಥಾಮಸ್‌ಹಾರ್ಡಿ, ಟಾಲ್‌ಸ್ಟಾಯ್, ಕುವೆಂಪು, ಕಾರಂತ,

ಮಾಸ್ತಿಯವರ ಕಾದಂಬರಿಗಳನ್ನೋದಿದವರಿಗೆ ಶಂಕರ್ ಅವರ ಪರಿಣತಾಭಿಪ್ರಾಯ ಸರಿಯೆಂದು ತೋರದಿರದು. 'ನಾರಾಯಣ್ ಅವರನ್ನು ನಮ್ಮ ನಡುವಿನ ಹಾಗೂ ವಿಶ್ವದ ಶ್ರೇಷ್ಠ ಲೇಖಕರಲ್ಲಿ ಒಬ್ಬರನ್ನಾಗಿಸುವ ಸಾಧನೆಯ ಮಹತ್ವದ ಕಡೆಗೂ ನಾವು ಗಮನಕೊಡಬೇಕು. ಅದು ನಾರಾಯಣ್ ಸೃಷ್ಟಿಸಿರುವ ಮಾಲ್ಗುಡಿ, ಆ ಮಾಲ್ಗುಡಿಯ ವೈವಿಧ್ಯಮಯ, ತಾಜಾ ಭಾರತೀಯ ಪ್ರಪಂಚ.' ಇದು ವಿದ್ವಾಂಸನೊಬ್ಬ ನಾರಾಯಣ್ ಅವರಿಗೆ ಸಲ್ಲಿಸಬಹುದಾದ ಸ್ಮಾರಕ ಸಂದೇಶ.

ತಮ್ಮ ಭಾಷೆಯ ಮೋಡಿಯಿಂದ ಪಾಶ್ಚಾತ್ಯ ಸಾಹಿತಿ ಸಹೃದಯರ ಮೆಚ್ಚುಗೆಯನ್ನು ಏಕಪ್ರಕಾರವಾಗಿ ಪಡೆದು, ಭಾರತೀಯರ ಹೆಮ್ಮೆಗೆ ಪಾತ್ರರಾದ ನಾರಾಯಣರು ಮಾತುಗಾರರಲ್ಲ; ಸಭೆ ಸಮಾರಂಭಗಳೆಂದರೆ ಅವರಿಗಾಗದು. ಯಾವಾಗಲೂ ಬರೆಹದಲ್ಲಿ ತೊಡಗಿಕೊಂಡಿರುತ್ತಿದ್ದ ಅವರಿಗೆ ಭಾಷಣಕಲೆಯ ಅಭ್ಯಾಸ ಪರಕೀಯವಾಗುಳಿಯಿತೆಂದೇ ತೋರುತ್ತದೆ. ಅವರ ಮಿತ್ರಬಳಗವೂ ದೊಡ್ಡದಿರಲಾರದು. ಅವರೊಂದು ರೀತಿಯಲ್ಲಿ ದಂತಗೋಪುರವಾಸಿಯಾಗಿದ್ದರೂ, ರಾಜಮನೆತನದ ಮಹಾಸಾಹಿತಿಗಳ ನೆಲೆಬೀಡಾದ ಮೈಸೂರು ನಗರದ ಪರಿಸರ ಸೌಂದರ್ಯ ರಕ್ಷಣೆಯಲ್ಲಿ ಆಗಾಗ್ಗೆ ಔತ್ಸುಕ್ಯವನ್ನು ವ್ಯಕ್ತಪಡಿಸುತ್ತಿದ್ದರು. ನಾನವರನ್ನು ದೂರದಿಂದ ನೋಡಿದ್ದೇನೇ ಹೊರತು, ಅವರ ನಿಕಟಪರಿಚಯ ನನಗೊದಗಿರಲಿಲ್ಲ. ನಾನು ಕುಲಪತಿಯಾಗಿದ್ದಾಗ, ಕುಕ್ಕರಹಳ್ಳಿಕೆರೆಯ ದುಃಸ್ಥಿತಿಯ ಬಗ್ಗೆ ನನಗೊಂದು ಪತ್ರ ಬರೆದಿದ್ದರು. ನಾನವರಿಗೆ ಸೂಕ್ತ ಉತ್ತರ ಬರೆದಿದ್ದೆನಲ್ಲದೆ, ಕೆರೆಯ ಆವರಣವನ್ನು ಸುಂದರಗೊಳಿಸಲು ಪ್ರಯತ್ನಿಸಿದ್ದೆ. ಅಲ್ಲಿ ನಡೆದ ತೋಟಗಾರಿಕೆಯೆಲ್ಲ ನನ್ನ ಕಾಲದ್ದೇ. ಆದರೂ ಆಗಬೇಕಾದ ಕೆಲಸ ಇನ್ನೂ ಇದೆ.

ಮೊದಮೊದಲು ಪ್ರಕಟಗೊಂಡ ಅವರ ಕಾದಂಬರಿಗಳಿಂದ ರಾಯಧನ ಸಾಕಷ್ಟು ಸಿಗದೆ, ಆರ್ಥಿಕ ಮುಗ್ಗಟ್ಟನಿಂದವರು ತರಹರಿಸಿದರೂ, ದಿ ಗೈಡ್ ಮೊದಲಾದ ಕೊನೆ ಕೊನೆಯ ಕಾದಂಬರಿಗಳಿಂದವರಿಗೆ ಕಿಸೆ ತುಂಬ ಹಣ ಬಂದು, ಸಂತೃಪ್ತರಾಗಿದ್ದರೆಂದು ಅವರ ಮಿತ್ರರು ಹೇಳುತ್ತಾರೆ. ಅಂತೆಯೇ ಮೈಸೂರು, ದೆಹಲಿ ಮತ್ತು ಲೀಡ್ಸ್ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟೊರೇಟ್ ಪದವಿಯನ್ನು ನೀಡಿ ಗೌರವಿಸಿವೆ. ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿದ್ದಲ್ಲದೆ, ೧೯೮೬ರಲ್ಲಿ ಅವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ ನಾಮಕರಣ ಮಾಡುತ್ತದೆ.

ಒಬ್ಬಳೇ ಒಬ್ಬಳೇ ಮಗಳು ಹೇಮಾಳನ್ನೂ ಹಿಂದೆಯೇ ಕಳೆದುಕೊಂಡ ಅವರು ಅನಾಥ ಪರಿಸ್ಥಿತಿಯನ್ನೆದುರಿಸುತ್ತಾರೆ. ಲೇಖನಿಯ ಸ್ನೇಹಬಂಧುತ್ವಗಳಿಲ್ಲದಿದ್ದರೆ, ಅವರು ದುಃಖ ಭರಿತರಾಗಿ ಮೊದಲೇ ಅಸುನೀಗಬೇಕಾಗುತ್ತಿತ್ತು. ತಮ್ಮ ವೃದ್ಧಾಪ್ಯವನ್ನು ಚೆನ್ನೈನಲ್ಲಿ ಅಳಿಯ ಚಂದ್ರಶೇಖರ್ ಅವರ ಮನೆಯಲ್ಲಿ ಕಳೆಯುತ್ತಾರೆ. ಸರಸ್ವತಿಯ ಕೃಪೆಯಿಂದಾಗಿ, ಪುಸ್ತಕ ಸಂತಾನ ನೀಡುತ್ತಿದ್ದ ಖುಷಿಯಿಂದಾಗಿ ಅವರು ೯೫ ವರ್ಷದಷ್ಟು ದೀರ್ಘವಾಗಿ ಸಾರ್ಥಕ ಜೀವನವನ್ನು ನಡಸುತ್ತಾರೆ. (೧೯೦೬-೨೦೦೧). ೧೩.೫.೨೦೦೧ನೆಯ ತೇದಿಯಂದು ಮೊದಲೇ ಸ್ವರ್ಗವನ್ನು ಸೇರಿದ್ದ ಪತ್ನಿ ರಾಜಂ ಅವರನ್ನೂ, ಪುತ್ರಿ ಹೇಮಾಳನ್ನೂ ಒಡಗೂಡುತ್ತಾರೆ.

ಶತಮಾನದ ಸಾಹಿತ್ಯ ಪ್ರಕಾರ ಸಂಕಲನಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪರವಾಗಿ ಆರು ಮಂದಿ ವಿದ್ವಾಂಸರು ಸಂಪಾದಿಸಿ, ಸಿದ್ಧಪಡಿಸಿರುವ ಆರು ಸಂಪುಟಗಳನ್ನು ಬಿಡುಗಡೆ ಮಾಡುವ ಅವಕಾಶ ನನಗೆ ದೊರೆತದ್ದು

(೧.೬.೨೦೦೧) ಸಂತೋಷದ ಸಂಗತಿ. ಈ ಅವಕಾಶವನ್ನು ನನಗೊದಗಿಸಿದ ಸಜ್ಜನರೂ ವಿಮರ್ಶಕರೂ ಅಕಾಡೆಮಿಯ ಅಧ್ಯಕ್ಷರೂ ಆದ ಡಾ. ಗಿರಡ್ಡಿ ಗೋವಿಂದರಾಜರೂ, ಈ ಸಂಪುಟಗಳ ಯೋಜನಾ ಸಂಪಾದಕರೂ, ನಾಡಿನ ಹೆಮ್ಮೆಯ ಕವಿಗಳೂ ಆದ ಡಾ. ಜಿ. ಎಸ್. ಶಿವರುದ್ರಪ್ಪನವರೂ ಈ ಶ್ರೇಷ್ಠ ಯೋಜನೆಯ ಸಫಲ ಸಿದ್ಧಿಗಾಗಿ ಅಭಿನಂದನಾರ್ಹರಾಗಿದ್ದಾರೆ.

ಒಂದು ಸಾಹಿತ್ಯದ ಔನ್ನತ್ಯಕ್ಕೆ ಮಹಾಕಾವ್ಯ, ಕಾದಂಬರಿ, ನಾಟಕ, ಭಾಷಾಂತರ ಮತ್ತು ಜೀವನ ಚರಿತ್ರೆಗಳೂ ಕಾರಣ. ಅವುಗಳಿಂದ ಒಂದೊಂದು ಅಧ್ಯಾಯವನ್ನಾದರೂ ಆಯ್ದು ಪ್ರತಿ ಪ್ರಕಾರದ ಒಂದೊಂದು ಸಂಪುಟವನ್ನು ಸಿದ್ಧಪಡಿಸಬಹುದಿತ್ತು. ಇದು ಈ ಯೋಜನೆಯ ಕೊರತೆಯೆಂದೇ ಹೇಳಬಹುದು. ಇವನ್ನು ಕೈಬಿಡಲು ಹಣದ ಅಭಾವವೂ ಕಾರಣವಾಗಿರಬಹುದು.

ಇಂಥ ಸಂಪುಟ ಸಂಪಾದಕರ ಜವಾಬ್ದಾರಿ ಗುರುತರವಾದದ್ದು. ಇಂಥ ಸಂದರ್ಭದಲ್ಲಿ ವೈಯಕ್ತಿಕ ಸಂಸ್ಕಾರಾಭಿರುಚಿ ಮನೋಧರ್ಮ ಪಕ್ಷಪಾತಬುದ್ಧಿ ಪೂರ್ವಾಗ್ರಹ ದುರಾಗ್ರಹ ಸಂಕುಚಿತ ದೃಷ್ಟಿ ಮತ್ತು ಅರೆವಿದ್ವತ್ತುಗಳಿಂದ ಸಂಪಾದಕರು ಮುಕ್ತರಾಗಿರಬೇಕಾದ್ದು ಅತ್ಯಂತಾವಶ್ಯಕ; ಜಾತಿಗಾರಿಕೆ ಗುಂಪುಗಾರಿಕೆಗಳನ್ನೂ ಮರೆಯಬೇಕು. ಪರಿಚಯಸ್ತರಿಗೆ, ಸ್ನೇಹಿತರಿಗೆ, ಸ್ವಜಾತಿಯವರಿಗೆ ವಿಶೇಷ ಮೀಸಲಾತಿ ನೀಡಲಾಗದು. ವಿವಿಧ ಸಂಪುಟಗಳನ್ನು ಸಂಕಲಿಸುವಲ್ಲಿ ಏಕರೂಪತಾ ನಿಯಮಗಳಿರಬೇಕು. ಹಿಂದಿನ ಸಂಕಲನಗಳಲ್ಲಿ ಬಂದವನ್ನು- ವಿಶೇಷ ಸಂದರ್ಭ ವಿನಾ -ಮತ್ತೆ ಪುನರಾವರ್ತಿಸಬಾರದು. ಲೇಖನ ಅಥವಾ ಕವಿತೆಗಳನ್ನು ಆರಿಸುವಾಗ ಒಂದು ತತ್ವ ಅಥವಾ ನಿಯಮಕ್ಕೆ ಬದ್ಧವಾಗಿರಬೇಕು. ಸಂಪಾದನೆಯನ್ನು ಕೇವಲ ಒಬ್ಬ ವ್ಯಕ್ತಿಯ ಸ್ವಭಾವ ವೈಚಿತ್ರ್ಯಕ್ಕೆ ಅಥವಾ ಪಕ್ಷಪಾತ ಮನೋಧರ್ಮಕ್ಕೊಪ್ಪಿಸುವ ಬದಲಿಗೆ, ಸಾಮೂಹಿಕ ವ್ಯವಸ್ಥೆಗೊಪ್ಪಿಸುವುದು ಮೇಲೆಂದು ತೋರುತ್ತದೆ. ನಿರ್ದಿಷ್ಟ ಕ್ಷೇತ್ರದಲ್ಲಿ ಕೆಲಸಮಾಡಿರುವವರಿಗೆಲ್ಲ ಅವಕಾಶ ನೀಡುವ ಮೂಲಕ ಸಮತೋಲನವನ್ನು ಸಾಧಿಸಬೇಕಾದ್ದು ಸಂಪಾದಕನ ಧರ್ಮ. ಒಬ್ಬ ವ್ಯಕ್ತಿಯ ಕೃತಿಗಳ ಪೈಕಿ ಒಂದು ಅಥವಾ ಎರಡಕ್ಕಿಂತ ಹೆಚ್ಚು ಆರಿಸಬಾರದು. ಹಾಗೆ ಆರಿಸುವುದಾದರೆ ಹಲವರಿಗೆ ಅನ್ಯಾಯವಾಗಿ, ಸಮತೋಲನ ತಪ್ಪುತ್ತದೆ. ತಾರತಮ್ಯ ಗುಟುರು ಹಾಕುತ್ತದೆ. ಖಾಸಗಿ ಸಂಸ್ಥೆಗಳು ಸಿದ್ಧಪಡಿಸುವ ಇಂಥ ಸಂಕಲನಗಳಲ್ಲಿ ಸ್ವಲ್ಪ ಏರುಪೇರಾದರೂ ಸಹ್ಯ; ಆದರೆ ಸರ್ಕಾರೀ ಇಲಾಖೆಗಳು ತಯಾರಿಸುವ ಸಂಕಲನಗಳಲ್ಲಿ ಸಂಭವಿಸುವ ಅಸಮತೋಲನ ಅಕ್ಷಮ್ಯ.

ಮೇಲಿನ ಸಂಪಾದನಾತತ್ತ್ವಗಳ ಹಿನ್ನೆಲೆಯಲ್ಲಿ ಆರು ಪ್ರಕೃತ ಸಂಪುಟಗಳನ್ನವಲೋಕಿಸಬಹುದು. 'ಶತಮಾನದ ಮಕ್ಕಳ ಸಾಹಿತ್ಯ' ವೆಂದ ಮೇಲೆ, ಗೋವಿನ ಹಾಡಿಗಾಗಲಿ, ಪಂಚತಂತ್ರ ಕಥಾ ಸರಿತ್ಸಾಗರಗಳ ಕಥೆಗಳಿಗಾಗಲಿ ಅವಕಾಶವಿರಬಾರದಾಗಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಆಸ್ಥೆಯಿಂದ ದುಡಿದು, ನಾನಾಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ಕೃತಿರಚನೆ ಮಾಡಿರುವ ಎಂಆರ್‌ಶ್ರೀಗಳಿಗೆ ಇಲ್ಲಾಗಲಿ, ಬೇರೆಡೆಯಲ್ಲಾಗಲಿ ಅವಕಾಶ ನೀಡಬಹುದಿತ್ತು. ಕನ್ನಡದಲ್ಲಿ ಪ್ರಕಟವಾಗಿರುವ ಸಾವಿರಾರು ಕತೆಗಳ ಪೈಕಿ ಮುನ್ನೂರನ್ನು ಮಾತ್ರ ಓದಿ, ನಲವತ್ತೈದನ್ನು ಮಾತ್ರ ಆರಿಸಿಕೊಂಡಿದ್ದೇನೆಂದು ಕಥಾವಿಭಾಗದ ಸಂಪಾದಕರು ತಮ್ಮ ಪ್ರಾಮಾಣಿಕತೆಯನ್ನು ಮೆರೆದಿದ್ದಾರಾದರೂ, ಒಬ್ಬೊಬ್ಬ ಕತೆಗಾರರ ಒಂದೊಂದೇ ಕತೆಯನ್ನಾಯ್ದುಕೊಂಡು ಸಮತೋಲನವನ್ನು

ಸಾಧಿಸಿದ್ದಾರೆಂದು ಹೇಳಬಹುದಾದರೂ, ಕೆಲವು ಒಳ್ಳೆಯ ಕತೆಗಾರರ ಕತೆಗಳು ಬಿಟ್ಟುಹೋಗಿವೆಯೆಂಬುದಂತು ನಿಜ. ಲಲಿತ ಪ್ರಬಂಧಗಳ ಸಂಕಲನದ ಬಗ್ಗೆಯೂ ಇದೇ ಮಾತು ಹೇಳಬಹುದು.

ಕಾವ್ಯ ಮತ್ತು ವಿಮರ್ಶೆಯ ಸಂಕಲನಗಳಲ್ಲಿ ಸಾಕಷ್ಟು ಕೊರತೆಗಳು ಎದ್ದು ಕಾಣಿಸುತ್ತವೆ. ಮಲ್ಲಿಕಾಘಂಟಿ, ಲತಾರಾಜಶೇಖರ್ , ಏ.ಎಸ್.ರಾಮಾನುಜಂ, ಅಕ್ಬರ್ ಅಲಿ, ಸಾ.ಶಿ. ಮರುಳಯ್ಯನವರ ಕವಿತೆಗಳು ಸಂಪಾದಕರ ಕಣ್ಣಿಗೆ ಬೀಳದಿರುವುದು ದುರ್ದೈವ. ಸುಮಾರು ೬೦ ಗ್ರಂಥಗಳನ್ನು ಪ್ರಕಟಿಸಿರುವ, ಮಹಾ ಕಾವ್ಯವನ್ನು ಬರೆದಿರುವ, ೧೫೦೦ಕ್ಕೂ ಮಿಕ್ಕು ಕವಿತೆಗಳನ್ನು ಸೃಷ್ಟಿಸಿರುವ, ನೂರಾರು ಕತೆಗಳನ್ನು ಬರೆದಿರುವ ಹಿರಿಯ ತಲೆಮಾರಿನ ಮಲ್ಲಿಕಾ ಒಬ್ಬ ಸಂಪಾದಕನ ಕಣ್ಣಿಗಾದರೂ ಬೀಳದಿರುವುದು ಅನ್ಯಾಯ. ನಿಡುಮಾಮಿಡಿ ಮಠದ ಸ್ವಾಮಿಗಳಿಬ್ಬರು ಸಾಹಿತ್ಯ ಲೋಕದಲ್ಲಿ ಪ್ರಸಿದ್ಧರು. ಅವರಿಗೆ ಈ ಸಂಕಲನಗಳಲ್ಲಿ ಸ್ಥಳವಿಲ್ಲ. ಕೊನೆಗೆ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮಿಗಳ 'ಸುಳ್ಳು ಸೃಷ್ಟಿಗಳು' ಎಂಬ ಕವನ ಸಂಕಲನದಿಂದ ಒಂದನ್ನಾದರೂ ಆಯ್ದುಕೊಳ್ಳಬಹುದಿತ್ತು. ಕಾವ್ಯಾನಂದರ ಕವಿತೆಗಳಿಂದ ಒಂದನ್ನಾದರೂ ಆರಿಸಿಕೊಳ್ಳದೆ, ಅವರ ವಚನಗಳನ್ನಾರಿಸಿಕೊಳ್ಳಲಾಗಿದೆ. ಅಂದಮೇಲೆ ಎಸ್.ವಿ ರಂಗಣ್ಣ, ದೊಡ್ಡನಗೌಡ, ಭೈರವಮೂರ್ತಿ ಮೊದಲಾದವರನ್ನು ಮರೆತದ್ದು ಸರಿಯೆ? ವಿಮರ್ಶಾ ಸಂಕಲನದ ಕತೆ ಇದರಿಂದ ಭಿನ್ನವಾಗಿಲ್ಲ. ಸಾವಿರಾರು ಪುಟಗಳ ವಿಮರ್ಶೆಯನ್ನು ಬರೆದಿರುವ ವಿದ್ವಾಂಸರು ಈ ಸಂಪಾದಕರ ಕಣ್ಣಿಗೆ ಬೀಳದಿರುವುದೇ ಆಶ್ಚರ್ಯ. ಆರ್.ಸಿ. ಹಿರೇಮಠ, ಕೆ.ಎಸ್. ಭಗವಾನ್, ಲಕ್ಕಪ್ಪಗೌಡ, ಡಿಎಲ್ಎನ್, ಮಾಳವಾಡ, ಸಿಪಿಕೆ, ಹಂಪನಾ ಮೊದಲಾದವರನ್ನು ಮರೆತು ಕೆಲವು ವಿಮರ್ಶಕರಲ್ಲದವರ ವಿಮರ್ಶೆಯನ್ನು ಸೇರಿಸಿರುವುದು ಸರಿಯೆ? ಒಬ್ಬರೇ ಬರೆದ ವಿಮರ್ಶೆಗಳನ್ನು ಒಂದೆರಡಕ್ಕಿಂತ ಹೆಚ್ಚಾಗಿ ಸೇರಿಸ ಬಾರದಿತ್ತು. ಸೇರಿಸಿರುವ ಕಡೆಯೂ ತಾರತಮ್ಯವುಂಟು. ಬೇಂದ್ರೆಯವರ ವಿಮರ್ಶೆಗಳು ಐದಾದರೆ, ಡಿ.ಆರ್.ನಾಗರಾಜರವು ಆರು, ಯು.ಆರ್.ಅನಂತಮೂರ್ತಿಯವರವು ಐದು, ಕುವೆಂಪುರವು ಮೂರೇ ಮೂರು, ಈ ತಾರತಮ್ಯವೇಕೆ? ಪ್ರಾಯಶಃ ಈ ಸಂಕಲನಗಳ ಪೈಕಿ ಹೆಚ್ಚು ಕೊರತೆ ಎದ್ದು ಕಾಣುವುದು ಇಲ್ಲಿಯೇ.

ಸಂಶೋಧನೆ ವಿಭಾಗದಲ್ಲಿಯೂ ಅಸಮರ್ಪಕತೆಯಿದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಸಂಶೋಧನೆಯ ಹೆಸರಿನಲ್ಲಿ ನನ್ನದೇ ಆದ 'ಜೀವನ ಚರಿತ್ರೆಯನ್ನು ಕುರಿತು' ಎಂಬೊಂದು ಲೇಖನವನ್ನು ಸಂಪಾದಕರು ಆರಿಸಿಕೊಂಡಿದ್ದಾರೆ. ಸಂಶೋಧನೆ ಮತ್ತು ವಿಮರ್ಶೆ ಅವಳಿಜವಳಿಗಳಾದ್ದರಿಂದ ಆಯ್ಕೆ ಕಷ್ಟ ನಿಜ. ವಿಮರ್ಶೆಯಲ್ಲಿ ಸಂಶೋಧನೆ, ಸಂಶೋಧನೆಯಲ್ಲಿ ವಿಮರ್ಶೆ ಹುದುಗಿರುತ್ತದೆಯೆಂಬುದೂ ಸತ್ಯ. ನನ್ನ ಲೇಖನ ವಿಮರ್ಶಾವಿಭಾಗದಲ್ಲಿ ಬರಬೇಕಿತ್ತೇ ಹೊರತು, ಸಂಶೋಧನಾ ವಿಭಾಗದಲ್ಲಲ್ಲ. ಯಾವುದೋ ಕವಿಯ ಬಗ್ಗೆ ಪೂರ್ವಿಕರು ನಡಸಿದ ಸಂಶೋಧನೆ ಯನ್ನು ನಿರ್ಲಕ್ಷಿಸಿ, ಆ ಕವಿಯ ಬಗ್ಗೆ ತಾವೇ ಮೊದಲು ಸಂಶೋಧನೆಯನ್ನು ನಡಸಿದ್ದು ಎಂದು ಭುಜ ತಟ್ಟಕೊಂಡು, ಭಾವಚಿತ್ರ ತೆಗೆಸಿಕೊಂಡು , ಪತ್ರಿಕೆಗಳಲ್ಲಿ ಪ್ರಕಟಿಸುವ, ಪ್ರದರ್ಶನ ಪ್ರಚಾರ ಪ್ರಿಯರು ಸಹ ಇದ್ದಾರೆ. ಆದರೆ ಈ ಭಾಗದಲ್ಲಿ ಹಲವು ಸಮರ್ಥರ ಲೇಖನಗಳಿವೆ.

'ಈ ಸಂಕಲನಗಳಿಗೆ ಬರೆಹಗಳನ್ನು ಆಯ್ಕೆ ಮಾಡುವಾಗ ಅನುಸರಿಸಬೇಕಾದ ಮೂಲಮಾನ ಯಾವುದು ಎಂಬುದನ್ನು ನಿರ್ಧರಿಸುವುದು ಸುಲಭವಾದ ಸಂಗತಿಯಲ್ಲ' ಎಂಬ ಯೋಜನಾ ಸಂಪಾದಕರ ಮಾತು ನಿಜವಾದರೂ, ಅವರು ಸಾರ್ವಕಾಲಿಕ ಕೆಲವು ಮೂಲಮಾನಗಳನ್ನು ಸೂಚಿಸಿದ್ದಾರೆ. ಆದರೆ ಆ ಸೂಚನೆಗಳನ್ನು ಎಲ್ಲ ಸಂಪಾದಕರು ಕರಾರುವಾಕ್ಕಾಗಿ ಅನುಸರಿಸಿ ದಂತಿಲ್ಲ. 'ಪ್ರತಿಯೊಂದು ಸಂಕಲನದೊಳಗಿನ ಬರೆಹಗಳ ಆಯ್ಕೆಯ ಸ್ವಾತಂತ್ರ್ಯವನ್ನು ತಾವೇ (ಸಂಪಾದಕರೇ) ಕಾಯ್ದು ಕೊಂಡಿದ್ದಾರೆ' ಎಂದು ಯೋಜನಾ ಸಂಪಾದಕರು ಹೇಳಿ ಜವಾಬ್ದಾರಿ ಯಿಂದ ಬಚಾವಾಗಿದ್ದಾರೆ. ಈ ಆಯ್ಕೆಯಲ್ಲಿ ಅರೆಕೊರೆಗಳಿವೆಯೆಂದು ಅವರು ಒಪ್ಪಿಕೊಂಡಿ ದ್ದಾರೆ. ಇವು 'ಪ್ರಾತಿನಿಧಿಕ' (?) ಬರಹಗಳ ಸಂಕಲನವೆಂದು ಹೇಳುವಾಗ ವಿಶೇಷ ಮೀಸಲಾತಿಗೂ ಅವಕಾಶವಿರಬಾರದೆ ? ಜತೆಗೆ ಈ ಪ್ರಾತಿನಿಧ್ಯ ರಾಜಕೀಯ ಪ್ರಾತಿನಿಧ್ಯವಾಗಬಾರದಷ್ಟೆ.

ಯಾರೇ ಆಗಲಿ, ನಾನೇ ಆಗಲಿ ಇಂಥ ಸಂಕಲಗಳನ್ನು ಸಿದ್ಧಪಡಿಸುವಾಗ ಕೊರತೆಗಳು ಉಳಿದೇ ಉಳಿಯುತ್ತವೆ. ಈ ಮಾತನ್ನೊಪ್ಪಿಕೊಳ್ಳುವುದಾದರೆ, ಈ ಸಂಕಲನಗಳು ಸ್ವಾಗತಾರ್ಹ ವೆಂದು, ಸಂಪಾದಕರ ಶ್ರಮ ಸಾರ್ಥಕವಾಗಿದೆಯೆಂದು, ಅಕಾಡೆಮಿಯ ಅಧ್ಯಕ್ಷರ ಪ್ರಯತ್ನ ಶ್ಲಾಘ್ಯವೆಂದು ಹೇಳಬಹುದಾಗಿದೆ. ಅಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ಮುಂದಿನವರಿಗೆ ಮಾರ್ಗದರ್ಶಿಯಾಗಬಹುದಾದ ಕಾರ್ಯವನ್ನು ಸಾಧಿಸಿದ್ದಾರೆ. ಈ ಸಂಕಲನಗಳಿಗೆ ಪೂರಕ ವಾಗಬಹುದಾದ ಸಂಪುಟಗಳನ್ನು ಮುಂದಿನ ಅಧ್ಯಕ್ಷರು ಆಯೋಜಿಸಿದ್ದಾದರೆ ಈಗಿನ ಕೊರತೆ ಗಳನ್ನು ನಿವಾರಿಸಬಹುದೆಂದು ತೋರುತ್ತದೆ.

ದೇಜಗೌ

ಅನುವಾದಕರಿಗೆ ಸೂಚನೆ

'ರೀಡರ್ಸ್ ಡೈಜಸ್ಟ್' ನಿಂದ ನೀವು ಅನುವಾದಿಸಬೇಕೆಂದು ಅಪೇಕ್ಷಿಸುವ ಲೇಖನದ ಮತ್ತು ಆ ಲೇಖಕನದ ಹೆಸರು, ಮತ್ತು ಸಂಚಿಕೆಯ ವಿವರವನ್ನು ನಮಗೆ ಬರೆದು ತಿಳಿಸಿ ; ನಮ್ಮ ಲಿಖಿತ ಒಪ್ಪಿಗೆ ತಲಪಿದ ಬಳಿಕ ಅನುವಾದ ಕಾರ್ಯ ಮುಂದುವರಿಸಿ. ಈಚಿನ ದಿನಗಳಲ್ಲಿ ಒಂದೇ ಲೇಖನದ ಹಲವಾರು ಅನುವಾದಗಳು ಬರುತ್ತಿರುವುದರಿಂದ ಈ ಏರ್ಪಾಡು ಮಾಡಿದೆ.

ಸಂಪಾದಕರು 'ಪುಸ್ತಕ ಪ್ರಪಂಚ'

ಮೈಸೂರಿನಲ್ಲಿ ವಯಸ್ಕರ ಶಿಕ್ಷಣ

ಸಾ. ಮಂಚಯ್ಯ
ನಿವೃತ್ತ ನಿರ್ದೇಶಕರು
ಮನೆ ನಂ. ೧೯೯/೨, ೩೫ ಎ ಕ್ರಾಸ್
೨೮ನೇ ಮೈನ್, ೯ನೇ ಬ್ಲಾಕ್
ಜಯನಗರ, ಬೆಂಗಳೂರು.

ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪ್ರಗತಿಸಾಧಿಸಲು ಶಿಕ್ಷಣ ಸಹಕಾರಿ. ಕೇವಲ ಸಹಕಾರಿ ಅಷ್ಟೆ ಅಲ್ಲ ಅಕ್ಷೇಪಗಳ ಪ್ರಗತಿಯನ್ನು ತ್ವರಿತಗೊಳಿಸುವುದು. ವಿಪುಲವಾಗಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಗತಿಯ ಹಾದಿಯಲ್ಲಿ ಮುನ್ನಡೆಯಲು ಮಾನವಶಕ್ತಿ ಅಗತ್ಯ. ಈ ಮಾನವ ಶಕ್ತಿಯುತರಬೇಕು. ವ್ಯವಸ್ಥಿತ ರೀತಿಯ ಶಿಕ್ಷಣದಿಂದ ಆಗಬೇಕು. ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಈ ಸತ್ಯ ತಿಳಿಯುವುದು. ಆರ್ಥಿಕಾಭಿವೃದ್ಧಿ ಮತ್ತು ಶಿಕ್ಷಣಕ್ಕೆ ನಿಕಟ ಸಂಬಂಧ ಇದೆ. ಒಂದರ ಪ್ರಗತಿ ಮತ್ತೊಂದರ ಮೇಲೆ ಪರಿಣಾಮ ಬೀರುವುದು. ಆರ್ಥಿಕಾಭಿವೃದ್ಧಿಯಿಂದ ದೇಶದ ಆದಾಯ ಹೆಚ್ಚಿ ಅದು ಶಿಕ್ಷಣಕ್ಕೆ ಹೆಚ್ಚು ಹಣ ಒದಗಿಸಿ ಅದರಿಂದ ಉತ್ತಮ ಫಲ ದೊರೆಯುವಂತೆ ಮಾಡುವುದು.

ಆರ್ಥಿಕ ಪ್ರಗತಿಗೆ ಶಿಕ್ಷಣ ಅಗತ್ಯ; ಶಿಕ್ಷಣ ಪಡೆದ ಜನರು ಸರ್ಕಾರದ ಕಾರ್ಯಕ್ರಮಗಳನ್ನು ಅರ್ಥಮಾಡಿಕೊಂಡು ಅವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವರು; ಯೋಜನೆಗಳು ಯಶಸ್ವಿಗಳಿಸುವುವು ಎಂಬ ಸತ್ಯ ಮೈಸೂರಿನ ಆಡಳಿತ ಸೂತ್ರ ಹಿಡಿದಿದ್ದವರಿಗೆ ಬಹು ಹಿಂದೆಯೇ ಅರಿವಾಗಿತ್ತು. ಆ ಅರಿವು ಕೇಂದ್ರ ಸರ್ಕಾರಕ್ಕೂ ಆಗಿತ್ತು.

ಮೈಸೂರು ರಾಜ್ಯದಲ್ಲಿ ವಯಸ್ಕರ ಶಿಕ್ಷಣ :

೧೮೬೮ರಲ್ಲಿ ಹೋಬಳಿ ಶಾಲಾ ಯೋಜನೆಗೆ ಅನುಮತಿ ನೀಡುತ್ತ ಗೌರ್ನರ್ ಜನರಲ್ ಅವರು ವಯಸ್ಕರ ಶಿಕ್ಷಣದ ಬಗ್ಗೆಯೂ ಒಂದು ವಾಕ್ಯ ಸೇರಿಸಿದ್ದರು. ಅದು ದುಡಿಮೆಯ ಕಾಲದಲ್ಲಿ ಶಾಲೆಗೆ ಬಂದು ಶಿಕ್ಷಣ ಪಡೆಯಲು ಅನುಕೂಲವಿಲ್ಲದವರಿಗಾಗಿ ರಾತ್ರಿ ಶಾಲೆಗಳನ್ನು ಪ್ರಾರಂಭಿಸಬೇಕು. ಶಿಕ್ಷಕರ ಹೆಚ್ಚಿನ ಕೆಲಸಕ್ಕಾಗಿ ಸಂಭಾವನೆ ಕೊಡಲು ಮತ್ತು ದೀಪದ ಖರ್ಚನ್ನು ಭರಿಸಲು ಅವರಿಗೆ ಅಲ್ಪ ಪ್ರಮಾಣದ ಶುಲ್ಕ ವಿಧಿಸಬೇಕು'' ಎಂದು ಹೇಳಿದ್ದುದು ತನ್ನ ಪ್ರಜೆಗಳಿಗೆ ಕನಿಷ್ಠ ಶಿಕ್ಷಣ ಅಗತ್ಯ ಎಂಬ ಅರಿವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

೧೮೭೪-೭೫ರಲ್ಲಿ ಆರಕ್ಷಕ ಉಪ ಮಹಾ ನಿರೀಕ್ಷಕರ ಕೋರಿಕೆಯಂತೆ ನಿರಕ್ಷರರಾದ ಕಾನ್ಸ್‌ಟೇಬಲ್‌ಗಳಿಗೆ ಓದು ಬರಹ ಕಲಿಸುವ ವ್ಯವಸ್ಥೆ ಮಾಡಿದರು. ಹೋಬಳಿ ಶಾಲೆಗಳಲ್ಲಿ ಮತ್ತು ಕೆಲವು ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ವಯಸ್ಕರು ಶಿಕ್ಷಣ ಪಡೆಯುತ್ತಿದ್ದರು. ಕಾನ್ಸ್‌ಟೇಬಲ್‌ಗಳೂ ಕೂಡ ತಮ್ಮ ಬಿಡುವಿನ ವೇಳೆಯಲ್ಲಿ ಹೋಬಳಿ ಶಾಲೆಗಳಲ್ಲಿ ಓದುಬರಹ ಕಲಿಯುತ್ತಿದ್ದರು.

೧೮೬೮-೬೯ರಲ್ಲಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ೨೦೦ ಖೈದಿಗಳು ಓದುಬರಹ ಕಲಿಯುತ್ತಿದ್ದರು. ಕಲಿಕೆಯ ಅವಧಿ ಕೇವಲ ಅರ್ಧಗಂಟೆ. ಅದೂ ಅವರ ದೈನಂದಿನ ಕೆಲಸ ಮುಗಿದ ಮೇಲೆ. ೧೮೭೨-೭೩ರಲ್ಲಿ ೬೯೬ ಖೈದಿಗಳು ಓದುಬರಹ ಕಲಿಯುತ್ತಿದ್ದರು. ಹಾಜರಾತಿ ಕಡ್ಡಾಯವಾಗಿರಲಿಲ್ಲ. ಈ

ಕಾರ್ಯಕ್ರಮ ಖೈದಿಗಳ ಮೇಲೆ ಉತ್ತಮ ಪರಿಣಾಮ ಉಂಟುಮಾಡಿ ಶಿಸ್ತು ಮೂಡಿಸಿತ್ತು ಮತ್ತು ಬಿಡುವಿನ ವೇಳೆಯಲ್ಲಿ ಅವರ ಮನಸ್ಸಿಗೆ ಸ್ವಲ್ಪ ಕೆಲಸ ಕೊಟ್ಟಿತ್ತು. ಈ ಖೈದಿಗಳು ಬಿಡುಗಡೆ ಹೊಂದಿ ಹೊರಹೋಗುವಾಗ ಅವರ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಪುಸ್ತಕ ಬೇಡುತ್ತಿದ್ದರು. ಬಹುಶಃ ಇದು ಅವರ ಸಂಬಂಧಿಕರು ಮತ್ತು ಗೆಳೆಯರ ಮುಂದೆ ಹೆಮ್ಮೆಯಿಂದ ಪ್ರದರ್ಶಿಸುವುದಕ್ಕಾಗಿ ಇರಬಹುದು.

೧೮೮೦-೮೧ರಲ್ಲಿ ಬೆಂಗಳೂರಿನ ಕೇಂದ್ರ ಬಂದೀಖಾನೆ ಬಾಲಾಪರಾಧಿಗಳ ಸುಧಾರಣಾ ಶಾಲೆಯಲ್ಲಿ, ಮೈಸೂರು ಮತ್ತು ಶಿವಮೊಗ್ಗ ಬಂದೀಖಾನೆಗಳಲ್ಲಿ ೯೪೭ ಗಂಡಸರು ಮತ್ತು ೨೭ ಮಹಿಳಾ ಖೈದಿಗಳು ಓದು ಬರಹ ಕಲಿಯುತ್ತಿದ್ದರು.

ವಯಸ್ಕರ ಶಿಕ್ಷಣ ರಾತ್ರಿ ಶಾಲೆಗಳು :

೧೮೮೬-೮೭ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನ ಸಹಾಯಕ ಶಿಕ್ಷಕರಾದ ಶ್ರೀ ಎಂ.ಶಾಮರಾವ್ ಅವರು ರಾತ್ರಿ ಶಾಲೆ ಪ್ರಾರಂಭಿಸಿದರು. ಅದರಲ್ಲಿ ಆ ವರ್ಷ ಕೇವಲ ಇಬ್ಬರು ವಿದ್ಯಾರ್ಥಿಗಳಿದ್ದರು. ೧೮೯೦ರಲ್ಲಿ ಆ ಶಾಲೆಯಲ್ಲಿ ೧೨೯ ವಯಸ್ಕರು ಓದು ಬರಹ ಕಲಿಯುತ್ತಿದ್ದರು. ಅವರು ಜೀವನಕ್ಕಾಗಿ ಬೇರೆ ಬೇರೆ ವೃತ್ತಿ ಅವಲಂಭಿಸಿದ್ದರು. ಆ ಶಾಲೆಯಲ್ಲಿ ನಾಲ್ಕು ಜನ ಶಿಕ್ಷಕರಿದ್ದು ಮುಖ್ಯೋಪಾಧ್ಯಾಯರು ಎಫ್.ಎ. ಪರೀಕ್ಷೆ ಪಾಸು ಮಾಡಿದ್ದರು. ಆರೋಗ್ಯ ಶಾಸ್ತ್ರ ಕಡ್ಡಾಯ ಕಲಿಕೆಯ ವಿಷಯವಾಗಿತ್ತು. ಈ ಶಾಲೆಗೆ ಸರ್ಕಾರದ ಮತ್ತು ಪೌರಸಭೆಯ ಅನುದಾನ ದೊರಕುತ್ತಿತ್ತು. ಈ ಶಾಲೆಯಲ್ಲಿ ಒಬ್ಬ ವಯಸ್ಕನಿಂದ ತಿಂಗಳಿಗೆ ಒಂದು ಆಣೆ ಶುಲ್ಕ ವಸೂಲ್ಮಾಡುತ್ತಿದ್ದರು.

೧೮೮೭ರಲ್ಲಿ ಮೇಲುಕೋಟೆಯಲ್ಲಿ ಹೋಬಳಿ ಶಾಲೆಯ ಮುಖ್ಯೋಪಾಧ್ಯಾಯರು ತನ್ನ ಇಬ್ಬರು ಸಹ ಶಿಕ್ಷಕರ ನೆರವಿನಿಂದ ವಯಸ್ಕರಿಗಾಗಿ ರಾತ್ರಿ ಶಾಲೆ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಈ ಶಾಲೆಯ ಸಾದಿಲ್ವಾರು ಖರ್ಚನ್ನೂ ಅವರೇ ಭರಿಸುತ್ತಿದ್ದರು. ಈ ಶಾಲೆಯಲ್ಲಿ ಶುಲ್ಕ ವಿಧಿಸುತ್ತಿರಲಿಲ್ಲ. ೧೮೮೯-೯೦ ರಲ್ಲಿ ಸರ್ಕಾರ ಈ ಶಾಲೆಗೆ ಮಾಸಿಕ ೧೫ರೂ ಅನುದಾನ ನೀಡಿತು.

೧೯೧೧ರ ಜನಗಣತಿಯಂತೆ ಆಗ ರಾಜ್ಯದಲ್ಲಿ ಶೇಕಡ ೯೭.೮ ಅನಕ್ಷರಸ್ಥರಿದ್ದರು. ಈ ಸ್ಥಿತಿ ರಾತ್ರಿ ಶಾಲೆಗಳ ಅಗತ್ಯವನ್ನು ಒತ್ತಿ ಹೇಳಿತು. ೧೯೧೮ ರಾತ್ರಿ ಶಾಲೆಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಿ ಅನುದಾನ ಕೊಡಲು ತೀರ್ಮಾನಿಸಿದುದರಿಂದ ೧೯೧೯-೨೦ ಮತ್ತು ೧೯೨೪-೨೫ರ ಅವಧಿಯಲ್ಲಿ ರಾತ್ರಿ ಶಾಲೆಗಳ ಸಂಖ್ಯೆ ಹೆಚ್ಚಿತು. ಈ ನಿಯಮಗಳು ಖಾಸಗಿ ಶಾಲೆಗಳಿಗೂ ಅನ್ವಯವಾಗುವಂತೆ ಸರ್ಕಾರ ಆದೇಶ ಹೊರಡಿಸಿತು. ಹದಿನೈದು ವರ್ಷ ಮೇಲ್ಪಟ್ಟವರಿಗೆ ಲೌಕಿಕ ಶಿಕ್ಷಣ ಕೊಡುತ್ತಿದ್ದ ಶಾಲೆಗಳೇ ರಾತ್ರಿ ಶಾಲೆಗಳು. ವಯಸ್ಸಿನ ಬಗೆ ಗ್ರಾಮದ ಶಾಲಾ ಸಮಿತಿಯಿಂದ ಅರ್ಹತಾ ಪತ್ರ ಪಡೆಯಬೇಕಾಗಿತ್ತು.

ನಿಯಮಗಳು

೧. ಪ್ರತಿದಿನ ಸರಾಸರಿ ಹತ್ತು ಜನರ ಹಾಜರಿ ಇರಬೇಕು;

೨. ಎಲ್ಲ ನಿಗದಿತ ವಹಿಗಳನ್ನೂ ಇಟ್ಟಿರಬೇಕು;

೩. ೬ ವಾರದಲ್ಲಿ ೫ ದಿನಗಳು ಪ್ರತಿದಿನವೂ ಎರಡು ಗಂಟೆಗಳ ಕಾಲ ಬೋಧಿಸಬೇಕು.

೪. ಇಲಾಖೆಯ ವಾರ್ಷಿಕ ತಪಾಸಣೆಗೆ ಬದ್ಧರಾಗಿರಬೇಕು;

೫. ಹಗಲು ಶಾಲೆಗೆ ಹೋಗುತ್ತಿದ್ದವರನ್ನು ಸೇರಿಸಿಕೊಳ್ಳಬಾರದು.

ಸರಾಸರಿ ಹಾಜರಾತಿಯ ಮೇಲೆ ಒಬ್ಬನಿಗೆ

ಒಂದೂವರೆ ರೂನಂತೆ ಒಂದು ಶಾಲೆಗೆ ವಾರ್ಷಿಕ ೪೫ರೂಗಳಿಗೆ ಮೀರಿದಂತೆ ಅನುದಾನ ದೊರಕುತ್ತಿತ್ತು. ಪಠ್ಯವಸ್ತುವೂ ನಿಗದಿಯಾಗಿತ್ತು.

೧೯೧೪-೧೫ರಲ್ಲಿ ಸರ್ಕಾರ ೧೬೮೦೦ ರೂಗಳ ಖರ್ಚಿನಲ್ಲಿ ೧೦೦ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸುವುದಕ್ಕೆ ಆದೇಶ ನೀಡಿತು. ೧೯೧೮ರಲ್ಲಿ ರಾಜ್ಯದಲ್ಲಿ ೨೬೭೧ ವಯಸ್ಕರ ಶಿಕ್ಷಣ ಕೇಂದ್ರಗಳು ೪೩,೨೦೫ ವಯಸ್ಕರಿಗೆ ಶಿಕ್ಷಣ ಕೊಡುತ್ತಿದ್ದುವು. ಅಲ್ಲಿಂದಾಚೆಗೆ ಇವುಗಳ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತ ಬಂದು ೧೯೩೯-೪೦ರಲ್ಲಿ ಕೇವಲ ೭೬ ಇದ್ದು ೧೯೬೦ ವಯಸ್ಕರಿಗೆ ಶಿಕ್ಷಣ ಕೊಡುತ್ತಿದ್ದುವು.

೧೯೩೩ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ವರದಿಯಲ್ಲಿ ''ಈ ಶಾಲೆಗಳಿಗಳ ಸ್ಥಿತಿ ಸಾಮಾನ್ಯವಾಗಿ ತೃಪ್ತಿಕರವಾಗಿರಲಿಲ್ಲ; ಅನೇಕ ವೇಳೆ ಈ ಕೇಂದ್ರಗಳಿಗೆ ಬರುತ್ತಿದ್ದವರು ಹಗಲು ವೇಳೆ ಪ್ರಾಥಮಿಕ ಶಾಲೆಗಳಿಗೆ ಹೋಗಲಾಗದ ಮಕ್ಕಳು ಬರುತ್ತಿದ್ದರು. ವಯಸ್ಕರ ಶಿಕ್ಷಣದ ಬಗ್ಗೆ ಆರ್ಥಿಕ ಸಂಪನ್ಮೂಲಗಳು ದೊರೆತಾಗ ಪುನರಾಲೋಚಿಸಬಹುದು'' ಎಂದು ಹೇಳಿದೆ.

ಅದಕ್ಕೂ ಮೊದಲು ೧೯೩೧-೩೨ರ ವರದಿಯಲ್ಲಿ ''ದೇಶ ರಾಜಕೀಯ ಕ್ಷೇತ್ರದಲ್ಲಿ ಶೀಘ್ರಗತಿಯಲ್ಲಿ ಪ್ರಗತಿ ಸಾಧಿಸುತ್ತಿರುವಾಗ ಮತದಾರರು ಪೌರರ ಕರ್ತವ್ಯಗಳನ್ನು ನಿರ್ವಹಿಸುವಂತೆ ಅವರಿಗೆ ಶಿಕ್ಷಣ ಕೊಡುವುದು ಅಗತ್ಯ. ವಯಸ್ಕರ ಶಿಕ್ಷಣ ಎಂದರೆ ಸಾಮಾನ್ಯವಾಗಿ ಕೇವಲ ಓದು ಬರಹ ಕಲಿಸುವುದಕ್ಕೆ ಸೀಮಿತಗೊಳಿಸಿ ಅದರ ಅರ್ಥವನ್ನು ಸಂಕುಚಿತಗೊಳಿಸುತ್ತೇವೆ. ಅದರ ಇನ್ನೂ ವಿಶಾಲವಾಗಿದ್ದು ಆರೋಗ್ಯ ವಿಷಯಗಳು, ನೈರ್ಮಲ್ಯ ಮತ್ತು ಸಹಕಾರ ತತ್ವದ ಸಾಮಾನ್ಯ ನಿಯಮಗಳನ್ನೂ ಒಳಗೊಂಡಿದೆ. ಕಲಿಕಾ ಪದ್ಧತಿಯಲ್ಲೂ ಸುಧಾರಣೆ ಆಗಬೇಕು. ಚಲನಚಿತ್ರ, ಆಕಾಶವಾಣಿ ಮುಂತಾದವುಗಳನ್ನೂ ಉಪಯೋಗಿಸಿಕೊಳ್ಳಬೇಕು'' ಎಂದು ತಿಳಿಸಿದೆ. ಅಂದರೆ ಸರ್ಕಾರಕ್ಕೆ ವಯಸ್ಕರ ಶಿಕ್ಷಣ ಮಹತ್ವದ ಅರಿವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುವುದು.

ಗ್ರಾಮೀಣ ಪ್ರದೇಶದಲ್ಲಿ ಅನುದಾನ ೩ರೂನಿಂದ ೮ರೂಗಳವರೆಗೂ ತಾಲ್ಲೂಕು ಪ್ರದೇಶಗಳಲ್ಲಿ ೪ರೂನಿಂದ ೧೪ರೂಗಳ ವರೆಗೂ ಅನುದಾನ ದೊರಕುತ್ತಿತ್ತು. ಗ್ರಾಮೀಣ ಪ್ರದೇಶದಲ್ಲಿ ಒಂದೇ ತರಗತಿ ಇದ್ದು ಓದುಬರಹ ಲೆಕ್ಕಾಚಾರ ಕಲಿಸುತ್ತಿದ್ದರು. ತಾಲ್ಲೂಕು ಶಾಲೆಗಳಲ್ಲಿ ಎರಡು ತರಗತಿಗಳಿದ್ದು ಓದು ಬರಹದ ಜೊತೆಗೆ ಸ್ವಲ್ಪ ಹೆಚ್ಚಿನಮಟ್ಟದ ಜ್ಞಾನ ತಿಳಿಸುತ್ತಿದ್ದರು. ಯಾವುದೇ ರೀತಿಯ ತಪಾಸಣೆ ವ್ಯವಸ್ಥೆ ಇಲ್ಲದಿದ್ದುದರಿಂದ ಈ ಶಾಲೆಗಳ ಕೆಲಸದ ಮೌಲ್ಯಮಾಪನ ಮಾಡುವುದು ಸಾಧ್ಯವಿಲ್ಲ.

ಈ ಶಾಲೆಗಳ ಗುಣಮಟ್ಟ

ಈ ಶಾಲೆಗಳ ಸಂಖ್ಯೆ ಶೀಘ್ರಗತಿಯಲ್ಲಿ ಬೆಳೆದುದರಿಂದ ಈ ಶಾಲೆಗಳು ಉತ್ತಮ ಕೆಲಸ ಮಾಡುತ್ತಿವೆ ಎಂಬ ಭಾವನೆ ಹುಟ್ಟಿಸಿ ಈ ಪ್ರಯೋಗ ಯಶಸ್ಸುಗಳಿಸಿದೆ ಎಂಬ ನಂಬಿಕೆ ಹುಟ್ಟುವಂತೆ ಮಾಡಿತು. ಆದರೆ, ಕೂಲಂಕಷವಾಗಿ ಪರಿಶೀಲಿಸಿದರೆ ಈ ಶಾಲೆಗಳು ಗುರುತರವಾದ ಲೋಪದೋಷಗಳಿಂದ ಕೂಡಿದ್ದುವು. ಈ ಶಾಲೆಗಳ ಹೆಚ್ಚಳಕ್ಕೆ ಕಾರಣ ಶಿಕ್ಷಕರು ತಮ್ಮ ಆದಾಯಕ್ಕೆ ಪೂರಕವಾಗಿ ಸ್ವಲ್ಪ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಇವುಗಳನ್ನು ಪ್ರಾರಂಭಿಸಿದರೇ ವಿನಹ ವಯಸ್ಕರಲ್ಲಿ ಶಿಕ್ಷಣ ಪ್ರಸಾರ ಮಾಡುವ ಉದ್ದೇಶದಿಂದಲ್ಲ. ಈ ಶಿಕ್ಷಕ[illegible] ಹಗಲು ವೇಳೆಯ ಶಾಲೆಗಳಲ್ಲಿ

ಸೇವೆ ಸಲ್ಲಿಸುತ್ತಿದ್ದು ರಾತ್ರಿಶಾಲೆ ನಡೆಸಲು ಕೊಡುತ್ತಿದ್ದ ಸಂಭಾವನೆ ಗಣನೀಯ ಪ್ರಮಾಣದಲ್ಲಿದ್ದು ಈ ಶಿಕ್ಷಕರನ್ನು ರಾತ್ರಿ ಶಾಲೆ ಪ್ರಾರಂಭಿಸಲು ಉತ್ತೇಜಿಸಿತು. ಈ ಶಾಲೆಗಳಲ್ಲಿ ಹಾಜರಾತಿ ಕ್ರಮಬದ್ಧವಾಗಿರಲಿಲ್ಲ. ಇದಕ್ಕೆ ಕಾರಣಗಳು: ೧. ಅನುಕ್ರಮವಲ್ಲದ ಪ್ರವೇಶಗಳು ೨. ವಯಸ್ಕರಲ್ಲಿ ಶಿಸ್ತು ನಿಯಂತ್ರಣ ಸಾಧ್ಯವಿಲ್ಲದಿದ್ದುದು ೩. ಕೊಯ್ಲು ಮತ್ತಿತರ ಋತುಮಾನಗಳಲ್ಲಿ ವಯಸ್ಕರು ತರಗತಿಗೆ ಹಾಜರಾಗದಿದ್ದುದು ೪. ಜಾತ್ರೆಗಳು ಮತ್ತು ಸ್ಥಳೀಯ ಸಂತೆಗಳ ಆಕರ್ಷಣೆ ೫. ದೈಹಿಕ ಶ್ರಮದ ಆಯಾಸದಿಂದಾಗಿ ವಯಸ್ಕರಲ್ಲಿ ಆಸಕ್ತಿಯಲ್ಲಿ ವ್ಯತ್ಯಯವಾಗುತ್ತಿದ್ದುದು. ಇವುಗಳ ಜೊತೆಗೆ ಈ ಶಾಲೆಗಳ ಪಠ್ಯಕ್ರಮವು ಪ್ರಾಯೋಗಿಕವಾಗಿರದೆ ಸಾಹಿತ್ಯವಾಗಿದ್ದು ಅದರಿಂದ ವಯಸ್ಕರಿಗೆ ಯಾವ ಪ್ರಯೋಜನವೂ ಇರಲಿಲ್ಲ. ವಯಸ್ಕರಿಗೆ ಸೂಕ್ತವಾದ ಪಠ್ಯಪುಸ್ತಕಗಳೂ ಇರಲಿಲ್ಲ. ಈ ಶಾಲೆಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತ ಬಂದು ೧೯೩೯-೪೦ರಲ್ಲಿ ಕೇವಲ ಬೆರಳೆಣಿಕೆಯಷ್ಟಿದ್ದು ಅನಂತರ ಕಣ್ಮರೆಯಾದುವು.

೧೯ನೇ ಶತಮಾನದ ದ್ವಿತೀಯಾರ್ಧದ ಪ್ರಾರಂಭದಲ್ಲಿ ಪ್ರಾರಂಭಿಸಿದ ಪ್ರಯೋಗ ಯಶಸ್ಸುಗಳಿಸಲು ವಿಫಲವಾದುದಕ್ಕೆ ಮೇಲೆ ತಿಳಿಸಿದ ಕಾರಣಗಳ ಜೊತೆಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಅಳವಡಿಸಬೇಕಾದ ಬೋಧನಾಕ್ರಮ, ಕಲಿಕಾ ಸಾಮಗ್ರಿಗಳ ರಚನೆ, ಶಿಕ್ಷಕರ ಮತ್ತು ಮೇಲ್ವಿಚಾರಕರ ತರಬೇತಿಗೆ ಸಂಬಂಧಿಸಿದ ವಿಷಯಗಳಲ್ಲಿ ಅಗತ್ಯ ಪರಿಶ್ರಮವಾಗಲಿ ಪರಿಣತಿಯಾಗಲಿ ಇಲ್ಲದಿದ್ದುದೂ ಕಾರಣ.

೧೯ನೇ ಶತಮಾನದ ಇಪ್ಪತ್ತರ ದಶಕದಲ್ಲಿ ಭಾರತದ ರಾಜಕೀಯದಲ್ಲಿ ಹೊಸ ಚೈತನ್ಯ ಉಂಟಾಯಿತು. ಗಾಂಧೀಜಿ ರಾಜಕೀಯ ಹೋರಾಟದ ನೇತೃತ್ವ ವಹಿಸಿದರು. ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪ ತಾಳಿತು. ಈ ಹೋರಾಟದ ನಡುವೆಯೂ ಗಾಂಧೀಜಿ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣದ ಕಡೆ ತಮ್ಮ ಗಮನ ಹರಿಸಿದರು. ಭಾರತದ ಶಿಕ್ಷಣ ಪದ್ಧತಿಗೆ ಅವರ ಅಮೂಲ್ಯ ಕೊಡುಗೆ ಮೂಲಶಿಕ್ಷಣ ಪದ್ಧತಿ. ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರು ಅಧಿಕ ಸಂಖ್ಯೆಯ ಅನಕ್ಷರಸ್ಥರಿರುವುದು ಭಾರತಕ್ಕೊಂದು ಕಳಂಕ; ಅದನ್ನು ತೊಡೆದು ಹಾಕಬೇಕೆಂದು ಸಾರಿದರು. ಈ ಕರೆ ಭಾರತ ಹಲವು ಕಡೆ ಸ್ವಯಂಸೇವಾ ಸಂಘಗಳು ಪ್ರಾಂತ್ಯಗಳು ಮತ್ತು ದೇಶೀಯ ಸಂಸ್ಥಾನಗಳಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲು ಉತ್ತೇಜನ ನೀಡಿತು.

ಮೈಸೂರು ರಾಜ್ಯದಲ್ಲಿ ೧೯ನೇ ಶತಮಾನದ ಕೊನೆಯಲ್ಲಿ ಅಂದು ಮೈಸೂರಿನ ದಿವಾನರಾಗಿದ್ದ ಶೇಷಾದ್ರಿಯವರು ರಾತ್ರಿ ಶಾಲೆಗಳನ್ನು ಪ್ರಾರಂಭಿಸಿದರೂ ಅವು ಜನಪ್ರಿಯತೆ ಗಳಿಸಲು ವಿಫಲವಾದುದರಿಂದ ಆ ಯೋಜನೆ ಕೈಬಿಟ್ಟರು.

ಎಂ. ವಿಶ್ವೇಶ್ವರಯ್ಯ ಅವರು ಜನರ ಪ್ರಗತಿಗೆ ಶಿಕ್ಷಣವೇ ಮದ್ದು ಎಂದು ನಂಬಿದ್ದರು. ಅವರು ಮೈಸೂರಿನ ದಿವಾನರಾಗಿದ್ದಾಗ ೧೯೧೭ರಲ್ಲಿ ಶ್ರೀ ಸಾಮಾನ್ಯರಲ್ಲಿ ಜಾಗೃತಿ ಉಂಟುಮಾಡುವ ಉದ್ದೇಶದಿಂದ ಸಂಸ್ಥಾನಾದ್ಯಂತ ಸಾಕ್ಷರತಾ ಪ್ರಚಾರ ಯೋಜನೆ ಪ್ರಾರಂಭಿಸಿ ೭೦೦೦ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿದರು. ಈ ಯೋಜನೆಗೆ ಪೂರಕವಾಗಿ ಸಂಚಾರಿ ಪುಸ್ತಕ ಭಂಡಾರಗಳೂ ಪ್ರಾರಂಭವಾದವು. ಶ್ರೀ ಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಮತ್ತು ಅವರು ಅವಲಂಬಿಸಿದ ವ

ವಿವಿಧ ವೃತ್ತಿಗಳಿಗೆ ಸಂಬಂಧಿಸಿ ಅವುಗಳನ್ನು ಹೆಚ್ಚು ಲಾಭದಾಯಕವಾಗಿ ಮಾಡಲು ಅಗತ್ಯ ಮಾಹಿತಿ ನೀಡುವ ಉದ್ದೇಶದಿಂದ "ವಿಜ್ಞಾನ" ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿದರು. ಈ ಕಾರ್ಯಕ್ರಮವು ಯಶಸ್ಸುಗಳಿಸಲಿಲ್ಲ. ಇಂತಹ ಯೋಜನೆ ರೂಪಿಸಿಕೊಂಡು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದು ಅದರಿಂದ ಪೂರ್ಣ ಲಾಭಪಡೆಯಲು ಅಗತ್ಯವಾದ ಭೂಮಿಕೆ ಸಿದ್ಧಪಡಿಸಿರಲಿಲ್ಲ.

ಕಡ್ಡಾಯ ಪ್ರಾಥಮಿಕ ಶಿಕ್ಷಣ :

ದೇಶದಲ್ಲಿ ಅಪಾರ ಸಂಖ್ಯೆಯ ಅನಕ್ಷರತೆಯನ್ನು ತೊಡೆದು ಹಾಕಲು ಎರಡು ರಂಗದಲ್ಲಿ ಹೋರಾಟ ನಡೆಸಬೇಕು. ಮೊದಲನೆಯದು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅನುಷ್ಠಾನ; ಎರಡನೆಯದು ವಯಸ್ಕರ ಶಿಕ್ಷಣ ಯೋಜನೆಯ ಅನುಷ್ಠಾನ. ಮೊದಲನೆಯದಕ್ಕೆ ಸಂಬಂಧಿಸಿದಂತೆ ಇಪ್ಪತ್ತನೆಯ ಶತಮಾನದ ೧೯೧೯ರಿಂದ ೧೯೩೦ರ ನಡುವೆ ಬ್ರಿಟಿಷ್‌ರ ಆಡಳಿತಕ್ಕೆ ಒಳಪಟ್ಟಿದ್ದ ಪ್ರಾಂತ್ಯಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ವಿವಿಧ ರೀತಿಯಲ್ಲಿ ಅನುಷ್ಠಾನಕ್ಕೆ ಬಂದರೂ ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ದೃಢಸಂಕಲ್ಪ ಇಲ್ಲದುದರಿಂದ ಅದು ಯಶಸ್ಸು ಗಳಿಸಲಿಲ್ಲ. ಸ್ವಾತಂತ್ರ್ಯಗಳಿಸಿ ಅರ್ಧ ಶತಮಾನ ಕಳೆದಿದ್ದರೂ ಆ ಯೋಜನೆಯ ಅನುಷ್ಠಾನದಲ್ಲಿ ಗುರಿ ಮುಟ್ಟಲು ವಿಫಲರಾಗಿದ್ದೇವೆ. ಹಳೆ ಮೈಸೂರು ರಾಜ್ಯದಲ್ಲಿ ೧೯೧೩ರಲ್ಲಿ ಕೆಲವು ಆಯ್ದ ಕೇದ್ರಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ತರಲು ಕಾಯಿದೆ ತಂದರು. ಈ ಯೋಜನೆ ೧೯೪೨ರವರೆಗೆ ವಿವಿಧ ರೀತಿಯಲ್ಲಿ ಬದಲಾವಣೆ ಆಗಿ ಅನುಷ್ಠಾನದಲ್ಲಿದ್ದರೂ ಅದರಿಂದ ನಿರೀಕ್ಷಿತ ಫಲಮಾತ್ರ ದೊರೆಯಲಿಲ್ಲ. ಆ ಯೋಜನೆಯ ಬಗ್ಗೆ ಹೆಚ್ಚು ಆಸಕ್ತಿಯನ್ನೂ ತೋರುತ್ತಿರಲಿಲ್ಲ. ೧೯೬೧ರಲ್ಲಿ ಹೊಸ ಕಡ್ಡಾಯ ಪ್ರಾಥಮಿಕ ಶಿಕ್ಷಣಕಾಯಿದೆ ಅನುಷ್ಠಾನಕ್ಕೆ ಬಂದಿದ್ದರೂ ಹಲವಾರು ಲೋಪದೋಷಗಳಿಂದ ಇನ್ನೂ ಸುಮಾರು ೧೫ಲಕ್ಷಬಾಲಕ ಬಾಲಕಿಯರು ಶಾಲೆಯ ಹೊರಗೇ ಉಳಿದಿದ್ದಾರೆ. ಇದೇ ಯಾವುದಕ್ಕೂ ಜಗ್ಗದ ಮುಖ್ಯ ಗುಂಪು ಈ ಯೋಜನೆಯ ಯಶಸ್ಸಿನ ಅವಧಿಯನ್ನು ಇನ್ನೂ ಮುಂದೂಡಿಕೊಂಡು ಹೋಗುತ್ತಿದ್ದೇವೆ.

ಮೈಸೂರಿನಲ್ಲಿ ವಯಸ್ಕರ ಶಿಕ್ಷಣ :

೨೦ನೇಯ ಶತಮಾನದ ಮೂರನೇ ದಶಕದಲ್ಲಿ ಬ್ರಿಟಿಷರ ಆಡಳಿತವಿದ್ದ ಪ್ರಾಂತ್ಯಗಳಲ್ಲಿ ಮತ್ತು ದೇಶೀಯ ಸಂಸ್ಥಾನಗಳಲ್ಲಿ ವಯಸ್ಕರ ಶಿಕ್ಷಣ ಚಟುವಟಿಕೆಗಳು ಪ್ರಾರಂಭವಾದವು . ಅದರಲ್ಲೂ ೧೯೩೭ರಲ್ಲಿ ಪ್ರಾಂತ್ಯಗಳಿಗೆ ಸ್ವಯಂ ಆಡಳಿತ ಕೊಟ್ಟಮೇಲೆ ವಯಸ್ಕರ ಶಿಕ್ಷಣ ಕಾರ್ಯಕ್ರಮ ಇನ್ನೂ ಚುರುಕುಗೊಂಡಿತು. ೧೯೩೮ರಲ್ಲಿ ವಯಸ್ಕರ ಶಿಕ್ಷಣ ಕಾರ್ಯಕರ್ತರು ಸಂಘಟನೆಗೊಂಡು ಅಖಿಲಭಾರತ ವಯಸ್ಕರ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಿದರು. ಈ ಮಂಡಳಿ ಪ್ರತಿವರ್ಷವೂ ಸಮ್ಮೇಳನ ನಡೆಸುತ್ತಿದೆ.

ಅಕ್ಷರ ಪ್ರಚಾರ ಕಾರ್ಯ ತನ್ನ ಕರ್ತವ್ಯ ಎಂದು ಭಾವಿಸಿ ಕೇಂದ್ರ ಶಿಕ್ಷಣ ಮಂಡಳಿ ೧೯೩೮ರಲ್ಲಿ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯವಿಧಾನ ಸಲಹೆ ಮಾಡಲು ಒಂದು ಉಪಸಮಿತಿ ರಚಿಸಿತು. ಇದು ವಯಸ್ಕರ ಶಿಕ್ಷಣದಲ್ಲಿ ಒಂದು ಮೈಲಿಗಲ್ಲು. ಆ ಉಪಸಮಿತಿಯ ವರದಿಯಲ್ಲಿ ಅತಿ ಮುಖ್ಯವಾದವುಗಳು ಕೇವಲ ಸಾಕ್ಷರತಾ ಪ್ರಚಾರವೇ ವಯಸ್ಕರ ಶಿಕ್ಷಣ ಅಲ್ಲ; ಅದು ಅದರ ಒಂದು ಭಾಗ; ವಯಸ್ಕರಿಗೆ ಸೂಕ್ತ ಪಠ್ಯವಸ್ತು ಮತ್ತು ಸಾಹಿತ್ಯ ರಚನೆ ಆಗಬೇಕು; ೧೨ ವರ್ಷ

ದೊಳಗಿನವರನ್ನು ಮತ್ತು ಶಾಲೆಗೆ ಹೋಗುತ್ತಿರುವವರನ್ನು ಈ ಕೇಂದ್ರಗಳಿಗೆ ಸೇರಿಸಬಾರದು. ಈ ಕಾರ್ಯಕ್ರಮ ಕೈಗೊಂಡ ಸ್ವಯಂ ಸೇವಾ ಸಂಸ್ಥೆಗಳು ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಾರದು. ದೃಕ್ ಶ್ರವಣ ಮಾಧ್ಯಮಗಳನ್ನು ಉಪಯೋಗಿಸಿ ಕೊಳ್ಳಬೇಕು. ಪುಸ್ತಕಭಂಡಾರಗಳನ್ನು ಪ್ರಾರಂಭಿಸಬೇಕು. ಇವೇ ಮುಂತಾದ ಸಲಹೆಗಳನ್ನು ನೀಡಿತು. ಸಮಿತಿಯ [illegible] ಸಲಹೆ ಎಂದರೆ ಸರ್ಕಾರ ಹೆಚ್ಚು ಹಣವನ್ನು ಈ ಕಾರ್ಯಕ್ಕಾಗಿ ಮೀಸಲಿಡಬೇಕೆಂಬುದು.

ಮೈಸೂರು ರಾಜ್ಯದ ಕೆಲವು ಗ್ರಾಮಗಳಲ್ಲಿ ದೇವುಡು ನರಸಿಂಹಶಾಸ್ತ್ರಿಯವರು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿದರು ಎಂಬುದಕ್ಕೆ ಯಾವುದೇ ಆಧಾರ ಇಲ್ಲ. ೧೯೪೧ಕ್ಕಿಂತ ಮೊದಲು ಶಿಕ್ಷಣ ಇಲಾಖೆ ಪ್ರಾರಂಭಿಸಿದ ರಾತ್ರಿ ಶಾಲೆಗಳಲ್ಲದೆ ಆ ಕ್ಷೇತ್ರದಲ್ಲಿ [illegible]ವಾಗಿ ಪ್ರಯತ್ನವೇನೂ ಇರಲಿಲ್ಲ.

ಮೈಸೂರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಪ್ರಯತ್ನ:

ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ನಡೆಯುತ್ತಿದ್ದ ಸಾಕ್ಷರತಾ ಪ್ರಚಾರಕಾರ್ಯಕ್ರಮಗಳು ಮೈಸೂರಿನ ಮಹಾರಾಜ ಕಾಲೇಜಿನ ಕೆಲವು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಆಕರ್ಷಿಸಿ ಅವರು ತಾವೂ ಏಕೆ ಅಂತಹ ಕಾರ್ಯಕ್ರಮದಲ್ಲಿ ತೊಡಗಬಾರದು ಎಂಬ ಆಲೋಚನೆ ಹುಟ್ಟಿ ಅವರು ಕಾರ್ಯೋನ್ಮುಖರಾದರು. ವಿದ್ಯಾರ್ಥಿಗಳು ಈ ಕಾರ್ಯಕ್ರಮ ರೂಪಿಸಿಕೊಂಡು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿ ನಡೆಸಲು ಮಾರ್ಗದರ್ಶನ ನೀಡಿದವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶ್ರೀ ಬಿ.ಎಂ.ಶ್ರೀಕಂಠಯ್ಯನವರು ಮತ್ತು ಪ್ರೊ.ಈಗಲ್‌ಟನ್‌ರವರು. ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಬೆಂಗಳೂರು ಕೇಂದ್ರದಲ್ಲಿಯೂ ವಯಸ್ಕರ ಶಿಕ್ಷಣ ಕಾರ್ಯಕ್ರಮ ಪ್ರಾರಂಭ ಆಯಿತು. ಈ ಕಾರ್ಯಕ್ರಮದ ಯಶಸ್ಸು ಮೈಸೂರು ಬೆಂಗಳೂರಿನ ಹೊರಗಿನ ಕಾರ್ಯಕರ್ತರನ್ನೂ ಆಕರ್ಷಿಸಿತು. ಇದರ ಫಲವಾಗಿ ಈ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಪ್ರಾರಂಭಿಸುವ ಉದ್ದೇಶದಿಂದ ೧೯೪೧ರಲ್ಲಿ ರಾಜ್ಯದ ಶಿಕ್ಷಣ ಸಚಿವರು ಕಾರ್ಯಕರ್ತರ ಸಭೆ ಕರೆದರು (ಅಕ್ಟೋಬರ್‌ನಲ್ಲಿ). ಈ ಸಭೆಯ ನಿರ್ಧಾರದಿಂದಾಗಿ ಮೈಸೂರು ಅಕ್ಷರ [illegible] ಸಮಿತಿ ಜನ್ಮತಾಳಿತು. ಈ ಸಮಿತಿ ಮುಖ್ಯ ಉದ್ದೇಶ ರಾಜ್ಯಾದ್ಯಂತ ಸಾಕ್ಷರತಾ ಚಳುವಳಿ ಪ್ರಾರಂಭಿಸಿ ಶಿಬಿರ ಕೇಂದ್ರಗಳನ್ನು ಪ್ರಾರಂಭಿಸಿ ನಡೆಸಿಕೊಂಡು ಹೋಗುವುದು. ಇದು ವಯಸ್ಕರ ಶಿಕ್ಷಣದ ಸಂಕುಚಿತ ಅರ್ಥ. ಬಹುಶಃ ವಯಸ್ಕರು ಅಕ್ಷರಸ್ಥರಾದರೆ ಉಳಿದ ಉದ್ದೇಶಗಳನ್ನು ನಂತರ ಸಾಧಿಸಬಹುದೆಂಬುದು ಸಮಿತಿಯ ಉದ್ದೇಶವಾಗಿದ್ದಿರಬಹುದು.

ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು ರಾಜ್ಯದಲ್ಲಿ ಸಾಕ್ಷರತಾ ಪ್ರಚಾರ ಕಾರ್ಯ ವ್ಯವಸ್ಥಿತ ರೀತಿಯಲ್ಲಿ ೧೯೪೨ನೇ ಇಸವಿ ಜನವರಿ ಒಂದರಿಂದ ಪ್ರಾರಂಭವಾಯಿತೆನ್ನಬಹುದು. ೧೯೪೫ರ [illegible] ಬದಲಾವಣೆ ಆಗಿ "ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ" ಎಂದು ನಾಮಕರಣಗೊಂಡು ತನ್ನ ಕಾರ್ಯಕ್ರಮವನ್ನು ವಿಸ್ತರಿಸಿ ಕೊಂಡಿತು. ಅಲ್ಲಿಯವರೆಗೂ ಶಿಕ್ಷಣ ಇಲಾಖೆ ನಡೆಸುತ್ತಿದ್ದ [illegible] ರಾತ್ರಿ ಶಾಲೆಗಳನ್ನೂ ವಯಸ್ಕರ ಶಿಕ್ಷಣ ಸಮಿತಿಗೆ

ವರ್ಗಾಯಿಸಿದರು. ಸಮಿತಿ ತನ್ನ ಕಾರ್ಯಕ್ರಮಗಳ ಖರ್ಚನ್ನು ಭರಿಸಲು ಸರ್ಕಾರದ ಅನುದಾನದ ಜೊತೆಗೆ ಗ್ರಾಮಪಂಚಾಯಿತಿಗಳು, ಪುರಸಭೆಗಳು, ಜಿಲ್ಲಾ ಬೋರ್ಡ್‌ಗಳಿಂದಲೂ ವಂತಿಗೆ ರೂಪದಲ್ಲಿ ಹಣ ಪಡೆಯುತ್ತಿತ್ತು. ಈ ಸಮಿತಿಗೆ ಸರ್ಕಾರದ ಧನಸಹಾಯ ಹೆಚ್ಚುತ್ತಾ ಬಂದಿತು. ೧೯೪೧-೪೨ ರಲ್ಲಿ ೫೫೦೦೦ರೂ ಇದ್ದದ್ದು ೧೯೪೩-೪೪ರಲ್ಲಿ ೧೦೦,೦೦೦ ಆಯಿತು, ೧೯೪೬-೪೭ರಲ್ಲಿ ೫೦೦,೦೦೦ರೂಗಳಾಯಿತು. ಇದು ಸಮಿತಿಯ ಕಾರ್ಯಕ್ಷಮತೆ ಮತ್ತು ಜನಪ್ರಿಯತೆಯನ್ನು ಎತ್ತಿತೋರಿಸುತ್ತದೆ.

ವಿಶ್ವ ವಯಸ್ಕರ ಶಿಕ್ಷಣ ಆಂದೋಳನದ ನಾಯಕರಲ್ಲೊಬ್ಬರಾದ ಲಾಬಾಕ್‌ರವರ ೧೯೪೦ ಭೇಟಿ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಮತ್ತಷ್ಟು ಉತ್ತೇಜನ ನೀಡಿತು. ಆತನ ಪುಸ್ತಕ ''ಭಾರತೀಯರು ಸಾಕ್ಷರರಾಗಬೇಕು'' "India shall be Literate"ಮತ್ತು ಆತನ ಘೋಷಣೆ ''ಪ್ರತಿಯೊಬ್ಬ ಅಕ್ಷರಸ್ಥನೂ ಒಬ್ಬ ಅನಕ್ಷರಸ್ಥನನ್ನು ಅಕ್ಷರಸ್ಥನನ್ನಾಗಿ ಮಾಡಿ''(Each one Teach one) ವಯಸ್ಕರ ಶಿಕ್ಷಣ ಕಾರ್ಯದಲ್ಲಿ ನಿರತರಾಗಿದ್ದ ಸಂಘ ಸಂಸ್ಥೆಗಳು ಮತ್ತು ಕಾರ್ಯಕರ್ತರನ್ನು ಹುರಿದುಂಬಿಸಿದುವು.

ಸಮಿತಿಯ ಆಡಳಿತ ವ್ಯವಸ್ಥೆ :

ಸಮಿತಿ ಅದರ ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾ ಸಮಿತಿಗಳ ಮೂಲಕ ಆಡಳಿತ ನಡೆಸುತ್ತಿತ್ತು. ಬಿ.ಎಂ. ಶ್ರೀಕಂಠಯ್ಯನವರು ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದರು. ಅನಂತರ ಎನ್. ಬಾಲಕೃಷ್ಣಯ್ಯ ಅಧ್ಯಕ್ಷರಾಗಿಯೂ ಡಬ್ಲ್ಯೂ.ಜಿ. ಈಗಲ್‌ಟನ್ ಅವರು ಕಾರ್ಯಕಾರಿಸಮಿತಿಯ ಅಧ್ಯಕ್ಷರಾಗಿಯೂ ಆಯ್ಕೆಯಾದರು. ಅವರು ಉಪಾಧ್ಯಕ್ಷರಾಗಿಯೂ ಇದ್ದರು. ಶಿಕ್ಷಣ ಇಲಾಖೆ ಮೂವರು ಪರಿಶ್ರಮವಿರುವ ಅಧಿಕಾರಿಗಳನ್ನು ಸಮಿತಿಯ ಕೆಲಸಗಳನ್ನು ವ್ಯವಸ್ಥೆ ಮಾಡಲು ಎರವಲು ಕೊಟ್ಟಿತು. ಜಿಲ್ಲಾ ಸಮಿತಿಗಳು ಆಗಾಗ್ಗೆ ಸಭೆ ಸೇರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ವಯಸ್ಕರ ಶಿಕ್ಷಣ ಕೇಂದ್ರಗಳ ಕೆಲವನ್ನು ಪರಿಶೀಲಿಸುತ್ತಿದ್ದರು. ಜಿಲ್ಲೆಗಳಲ್ಲಿ ನಡೆಯುತ್ತಿದ್ದ ವಯಸ್ಕರ ಶಿಕ್ಷಣ ಕೇಂದ್ರಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವುದಕ್ಕಾಗಿ ೪೦ ಕೇಂದ್ರಗಳಿಗೆ ಒಬ್ಬರಂತೆ ಮೇಲ್ವಿಚಾರಕರನ್ನೂ ನೇಮಕಮಾಡಿದ್ದರು. ಸಮಿತಿಯ ಉದ್ದೇಶ ಕೇವಲ ಓದುಬರಹ ಕಲಿಸುವದಷ್ಟೆ ಆಗಿರಲಿಲ್ಲ. ಸಮಿತಿಯ ಉದ್ದೇಶ ವಯಸ್ಕರಲ್ಲಿ ಕ್ರಿಯಶೀಲ ಸಾಕ್ಷರತೆಯನ್ನು ಬೆಳೆಸಬೇಕೆಂಬುದಾಗಿತ್ತು ಆ ನಿರ್ಧಾರದಿಂದಾ ಗಿಯೇ ಸಮಿತಿ ತನ್ನ ಹೆಸರನ್ನು ಮೈಸೂರು ಅಕ್ಷರ ಪ್ರಚಾರ ಸಮಿತಿ ಎಂದಿದ್ದುದ್ದನ್ನು ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಎಂದು ೧೯೪೫ರಲ್ಲಿ ಬದಲಾಯಿಸಿಕೊಂಡಿತು.

ಈ ವೇಳೆಗಾಗಲೇ ಸಮಿತಿ ಅಕ್ಷರ ಪ್ರಚಾರ ಕಾರ್ಯದಲ್ಲಿ ಸಾಕಷ್ಟು ಅನುಭವಗಳಿಸಿತ್ತು. ಅದರ ಪ್ರಕಾರ ಒಬ್ಬ ವಯಸ್ಕನನ್ನು ಅಕ್ಷರಸ್ಥನನ್ನಾಗಿ ಮಾಡಲು ಬೇಕಾಗುವ ಕಾಲ ೧೦೮ ಗಂಟೆಗಳು. ಅನಂತರ ಪ್ರಕಟವಾದ ಅಖಿಲ ಭಾರತ ಶಿಕ್ಷಣ ಸಲಹಾ ಸಮಿತಿಯ ವರದಿಯೂ ಇದನ್ನೇ ಪುಷ್ಟೀಕರಿಸಿತು. ಅದರ ಸಲಹೆಯಂತೆ ೧೦೦ ಗಂಟೆಗಳು ಸಾಕು. ಅಕ್ಷರ ಪ್ರಚಾರ ಸಮಿತಿಯ ಅಂದಾಜಿನಂತೆ ಒಬ್ಬ ವಯಸ್ಕನನ್ನು ಅಕ್ಷರಸ್ಥನನ್ನಾಗಿ ಮಾಡಬೇಕಾದರೆ ಕನಿಷ್ಠ ೫ರೂಪಾಯಿಗಳು ಖರ್ಚಾಗುವುದು. ಸಮಿತಿ ರಾಜ್ಯದಲ್ಲಿ ೧೨ ರಿಂದ ೪೦ ವರ್ಷ ವಯೋಮಿತಿಯ ಅನಕ್ಷರಸ್ಥರನ್ನು ಗೊತ್ತುಪಡಿಸಿಕೊಂಡು ಅವರೆಲ್ಲರನ್ನೂ ಸಾಕ್ಷರರನ್ನಾಗಿ ಮಾಡಲು ೧೫ ವರ್ಷಗಳ ಸಾಕ್ಷರತಾ

ಯೋಜನೆಯನ್ನು ಸಮಿತಿ ಸಿದ್ಧಪಡಿಸಿತು.

ಸಮಿತಿ ಮಾಡಿದ ಮೊದಲ ಕೆಲಸ ವಯಸ್ಕರಿಗಾಗಿ ಪಠ್ಯಪುಸ್ತಕ ಸಿದ್ಧಪಡಿಸಿದುದು. ಸಮಿತಿಯ ಗಮನಕ್ಕೆ ಬಂದ ಮತ್ತೊಂದು ಮುಖ್ಯ ಅಂಶ ಸಮಿತಿ ಪ್ರಾರಂಭಿಸಿದ ಕೆಲವು ಕೇಂದ್ರಗಳಲ್ಲಿದ್ದ ಕೆಲವು ವಯಸ್ಕರು ಹಿಂದೆ ತರಗತಿಗೆ ಹೋಗುತ್ತಿದ್ದು ಆಗ ಕಲಿತದ್ದೆಲ್ಲವನ್ನೂ ಮರೆತಿದ್ದುದು. ಅವರಿಗೆ ಕಲಿತ ಓದುಬರಹ ಶಕ್ತಿಯನ್ನು ಬೆಳೆಸಿಕೊಂಡು ಹೋಗಲು ಅಗತ್ಯವಾದ ನವಸಾಕ್ಷರರಿಗೆ ಸೂಕ್ತವಾದಂತಹ ರೀತಿಯಲ್ಲಿ ರಚಿಸಿದ ಸಾಹಿತ್ಯ ಲಭ್ಯವಿಲ್ಲದುದು. ಆದುದರಿಂದ ಆ ಕೊರತೆಯನ್ನು ನೀಗುವ ಉದ್ದೇಶದಿಂದ ನವಸಾಕ್ಷರರಿಗೆ ಸೂಕ್ತವಾದ ಸಾಹಿತ್ಯ ಸೃಷ್ಟಿಯ ಅಗತ್ಯವನ್ನೂ ಮನಗಂಡಿತು.

ವಯಸ್ಕರ ಶಿಕ್ಷಣದ ಅರ್ಥ :

ವಯಸ್ಕರ ಶಿಕ್ಷಣ ಅನೇಕ ರೂಪಗಳನ್ನು ಅಥವಾ ವ್ಯಾಖ್ಯೆಯನ್ನು ಹೊಂದಿದೆ. ಅತ್ಯಂತ ಮುಂದುವರಿದ ರಾಷ್ಟ್ರಗಳಲ್ಲಿಯೂ ವಯಸ್ಕರ ಶಿಕ್ಷಣ ವ್ಯವಸ್ಥೆ ಇದೆ. ಅದು ಆದೇಶಗಳಲ್ಲಿ ಮುಂದುವರಿದ ಶಿಕ್ಷಣ ಎನಿಸಿಕೊಂಡಿದೆ. ಕಡ್ಡಾಯ ಶಾಲಾ ಅವಧಿಯ ನಂತರ ಮಕ್ಕಳು -ಅವರು ಮಕ್ಕಳಲ್ಲಿ ಹದಿವಯಸ್ಸಿನವರು ಅಂದರೆ ಕೌಮಾರ್ಯಾವಸ್ಥೆಯನ್ನು ದಾಟಿ ಯೌವನಾಕ್ಕೆ ಕಾಲಿಡುತ್ತಿರುವ ವಯೋಮಾನದವರು -ನೇರವಾಗಿ ಜೀವನರಂಗ ಪ್ರವೇಶಿಸುವರು. ಅವರು ತಮಗೆ ಸೂಕ್ತವಾದ ವೃತ್ತಿಯನ್ನು ಆಯ್ದು ಕೊಳ್ಳಲು. ಹಾಗೆ ಆಯ್ದು ಕೊಂಡ ಉದ್ಯೋಗಕ್ಕೆ ಅಗತ್ಯವಾದ ಕೌಶಲಗಳನ್ನು ಕಲಿತುಕೊಳ್ಳಲು ಮತ್ತು ಆ ಕ್ಷೇತ್ರಕ್ಕೆ ಸಂಬಂಧಿಸಿದ ಇನ್ನೂ ಹೆಚ್ಚಿನ ಜ್ಞಾನಗಳಿಸಿಕೊಂಡು ತಮ್ಮ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಹಕಾರಿಯಾದಂತಹ ವಯಸ್ಕರ ಶಿಕ್ಷಣ ಅಥವಾ ಮುಂದುವರಿದ ಶಿಕ್ಷಣ ವ್ಯವಸ್ಥೆ ಮಾಡಿದ್ದಾರೆ. ಈ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಸಂಜೆವೇಳೆಯ ಶಿಕ್ಷಣ ಸಂಸ್ಥೆಗಳು, ಅಂಚೆತೆರಪಿನ ಶಿಕ್ಷಣ ವ್ಯವಸ್ಥೆ ಮತ್ತು ಜನತಾ ಶಿಕ್ಷಣ ಸಂಸ್ಥೆಗಳೂ ಇವೆ.

ಸಮಿತಿಯ ವಿಸ್ತರಗೊಂಡ ಕಾರ್ಯಕ್ರಮಗಳು:

ಸಮಿತಿ ವಿಶ್ವದ ಬೇರೆ ಬೇರೆ ದೇಶಗಳಲ್ಲಿದ್ದ ವ್ಯವಸ್ಥೆಯನ್ನು ಅರಿತುಕೊಂಡು ತನ್ನ ಕಾರ್ಯವಿಧಾನವನ್ನು ವಿಸ್ತರಿಸಿಕೊಂಡಿತು. ಪರಿಷ್ಕಾರಗೊಂಡ ಕಾರ್ಯಕ್ರಮದಂತೆ ಸಮಿತಿ ತನ್ನ ಕಾರ್ಯಕ್ರಮವನ್ನು ಕೇವಲ ಸಾಕ್ಷರತಾ ಪ್ರಚಾರಕ್ಕೇ ಸೀಮಿತಗೊಳಿಸದೆ ತನ್ನ ಕಾರ್ಯಕ್ರಮದಲ್ಲಿ ಶ್ರೀಸಾಮಾನ್ಯರಲ್ಲಿ ಅರಿವು ಮೂಡಿಸುವುದು ಮತ್ತು ಕ್ರಿಯಾಶೀಲತೆಯನ್ನೂ ಅಳವಡಿಸಿಕೊಂಡಿತು. ಈ ಉದ್ದೇಶ ಸಾಧನೆಗಾಗಿ ಸಮಿತಿ ನವಸಾಕ್ಷರರಿಗಾಗಿ ಸಾಹಿತ್ಯ ರಚನೆ, ಪುಸ್ತಕ ಪ್ರಕಟಣೆ, ಗ್ರಾಮೀಣ ಪ್ರದೇಶಗಳಲ್ಲಿ ಪುಸ್ತಕ ಭಂಡಾರಗಳ ಪ್ರಾರಂಭ, ಸಾಮಾಜಿಕ, ರಾಜಕೀಯ, ಆರ್ಥಿಕ, ವೈಜ್ಞಾನಿಕ ಮತ್ತಿತರ ಮುಖ್ಯ ವಿಷಯಗಳನ್ನು ಕುರಿತಂತೆ ಪ್ರಚಾರೋಪನ್ಯಾಸಗಳ ವ್ಯವಸ್ಥೆ ಮತ್ತು ಜಾನಪದ ಕಲೆಗಳಮೇಳ ವ್ಯವಸ್ಥೆ ಮಾಡುವುದರ ಮೂಲಕ ಜಾನಪದ ಕಲೆಗಳ ಬಗೆ ಗ್ರಾಮೀಣ ಪ್ರದೇಶದ ಜನರಲ್ಲಿ ಬಾಡಿ ಹೋಗುತ್ತಿರುವ ಆಸಕ್ತಿಯನ್ನು ಪುನಶ್ಚೇತನಗೊಳಿಸುವ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿತು. ಈ ರೀತಿಯ ವಿಸ್ತೃತಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದ ಜನರಲ್ಲಿ ಸಾಕಷ್ಟು ಅರಿವು ಮೂಡಿಸಿದುದಲ್ಲದೆ ಅವರು ತೊಡಗಿದ್ದ ಅನೇಕ ವೃತ್ತಿಗಳಿಗೆ ಸಂಬಂಧಿಸಿದಂತೆ ಅವರು ಆ ವೃತ್ತಿಗಳನ್ನು ಆಧುನಿಕ ರೀತಿಯಲ್ಲಿ ಮಾಡಿ ಅವುಗಳಿಂದ ಹೆಚ್ಚುಲಾಭ ಗಳಿಸುವಂತೆ ಮಾಡಿದುವು. ಸಮಿತಿ ಪ್ರಕಟಿಸಿರುವ ಪುಸ್ತಕಗಳು ಉತ್ತಮಗುಣಮಟ್ಟದವು

ಗಳು. ನವಸಾಕ್ಷರರು ಸುಲಭವಾಗಿ ಓದುಬಹುದಾದ ಸರಳ ಭಾಷೆಯ 'ಬೆಳಕು' ವಾರಪತ್ರಿಕೆಯನ್ನೂ ಪ್ರಾರಂಭಿಸಿತು. ಅಲ್ಲದೆ ಇಂಗ್ಲಿಷ್‌ನ 'ರೀಡರ್ಸ್ ಡೈಜೆಸ್ಟ್'ನ ಮಾದರಿಯಲ್ಲಿ 'ಪುಸ್ತಕ ಪ್ರಪಂಚ' ಎಂಬ ಹೆಸರಿನ ಮಾಸಿಕವನ್ನೂ ಪ್ರಕಟಿಸುತ್ತಿದೆ. ಇದು ಜನಪ್ರಿಯವಾಗಿದೆ.

ಸಂಶೋಧನೆ: ಅಕ್ಷರ ಪ್ರಚಾರ ಚಳುವಳಿ ಪ್ರಾರಂಭವಾದಾಗ ವಯಸ್ಕರಿಗೆ ಯಾವ ರೀತಿಯ ಪಠ್ಯ ಪುಸ್ತಕ ರಚಿಸಬೇಕು, ಬೋಧನಾ ಪದ್ಧತಿ ಹೇಗಿರ ಬೇಕು, ಮೌಲ್ಯಮಾಪನ ಹೇಗೆ ಮಾಡಬೇಕು ಎಂಬ ವಿಷಯಗಳಿಗೆ ಸಂಬಂಧಿಸಿದಂತೆ ಸಮಿತಿಯ ಕಾರ್ಯಕರ್ತರುಗಳಿಗೆ ಯಾವುದೆ ಹಿನ್ನೆಲೆ ಇರಲಿಲ್ಲ. ಉಪಾಧ್ಯಾಯರ ತರಬೇತನ್ನೂ ಯೋಚಿಸಿರಲಿಲ್ಲ. ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವುದರ ಅಗತ್ಯವನ್ನು ಸಮಿತಿ ಮನಗಂಡಿತು. ಈ ವಿಷಯಗಳ ಬಗ್ಗೆ ಸಂಶೋಧನೆ ಪ್ರಾರಂಭಿಸಿ ದರು.

ವಯಸ್ಕರಿಗೆ ಪದಸಂಪತ್ತಿದೆ. ಅಂದರೆ ಅವರ ವೃತ್ತಿಗೆ ಸಂಬಂಧಿಸಿದ ಸುತ್ತಲಿನ ಸಮಾಜ, ಹಬ್ಬಹರಿದಿನಗಳು, ಸಮಾಜದ ಇತರರೊಡನೆಯ ಸಾಮಾನ್ಯ ವ್ಯವಹಾರಕ್ಕೆ ಸಂಬಂಧಿಸಿದ ಪದಗಳ ಪರಿಚಯ ಇದೆ. ಆ ಪದಗಳನ್ನು ಬರೆದಾಗ ಅಥವಾ ಅವುಗಳನ್ನು ಪುಸ್ತಕಗಳಲ್ಲಿ ಅಚ್ಚು ಮಾಡಿದಾಗ ಆ ಅಕ್ಷರ ರೂಪದ ಸಂಕೇತಗಳನ್ನು ಗುರುತಿಸಲಾರ. ಉದಾಹರಣೆಗೆ ಹಸು, ಕರು, ನೇಗಿಲು, ಕೂರಿಗೆ, ಗಾಡಿ, ನೊಗ, ರಾಗಿ, ತೆನೆ ಮುಂತಾದ ಅನೇಕ ಪದಗಳ ಪರಿಚಯ ವಯಸ್ಕರಿಗೆ ಇದೆ. ವಯಸ್ಕರ ಶಿಕ್ಷಣದ ಮೂಲಕ ನಾವು ಅವರಿಗೆ ಕಲಿಸಬೇಕಾದುದು ಈ ಸಂಕೇತಗಳಿಗೂ ಅವುಗಳ ಶಬ್ದಕ್ಕೂ ಸಂಬಂಧ. ಇದು ಅರಿತರೆ ಅವರಿಗೆ ಓದು ಬರಹ ಕಲಿಸುವುದು ಸುಲಭ.

ಮೈಸೂರಿನಲ್ಲಿ ಈ ತತ್ವವನ್ನೇ ಅನುಸರಿಸಿ ವಯಸ್ಕರಿಗೆ ಪಠ್ಯವಸ್ತು ಮತ್ತು ಪಠ್ಯಪುಸ್ತಕ ರಚಿಸಲು ಶ್ರಮಿಸಿದರು. ಇದಕ್ಕೂ ಮೊದಲು ಕೆ.ಎಸ್. ಆಚಾರ್ಲು, ದೇವುಡು ನರಸಿಂಹ ಶಾಸ್ತ್ರಿ ಜೆ.ಬಿ.ಮಲ್ಲಾರಾಧ್ಯ ಮತ್ತು ಎಂ.ಆರ್. ಶ್ರೀನಿವಾಸಮೂರ್ತಿಗಳು ವಯಸ್ಕರರಿಗೆ ಪಠ್ಯಪುಸ್ತಕ ರಚಿಸಿದ್ದರು ಎಂಬ ಬಗ್ಗೆ ಕೆಲವು ಕಡೆ ಉಲ್ಲೇಖ ಇದೆಯೇ ಹೊರತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ಆಧಾರ ಇಲ್ಲ. ಈ ಪುಸ್ತಕಗಳ ಪಾಠಗಳು ಕಾಗುಣಿತ ಮತ್ತು ಒತ್ತಕ್ಷರಗಳಿಲ್ಲದ ಪದಗಳಿಂದ ಪ್ರಾರಂಭವಾಗಿ ಕೊನೆಕೊನೆಯಲ್ಲಿ ಕಾಗುಣಿತ, ಸಜಾತೀಯ ಮತ್ತು ವಿಜಾತೀಯ ಒತ್ತಕ್ಷರಗಳಿಂದ ಕೂಡಿದ ಪದಗಳನ್ನು ಪರಿಚಯಿಸುತ್ತವೆ. ಸಮಿತಿ ಅನುಸರಿಸಿದುದು ಪ್ರಯೋಗ ಪರೀಕ್ಷಾವಿಧಾನ (Trial and Eror Method) ೧೯೪೧ರಲ್ಲಿ ಎಂ. ಆರ್. ಶ್ರೀನಿವಾಸಮೂರ್ತಿ ಅವರು ರಚಿಸಿದ ಮೂರು ಪಠ್ಯಪುಸ್ತಕಗಳು ಉಪಯೋಗದಲ್ಲಿದ್ದುವು. ಪ್ರಾರಂಭದಲ್ಲಿ ಉಪಯೋಗದಲ್ಲಿದ್ದ ಪಠ್ಯಪುಸ್ತಕಗಳು ಪರಿಷ್ಕಾರಗೊಂಡು ಹೊಸ ಪಠ್ಯಪುಸ್ತಕಗಳು ರಚನೆಯಾದುವು. ಅವುಗಳು ೧. ಬಾ ಅಣ್ಣ ಓದು ಕಲಿ ೨. ಇದನ್ನು ಓದಣ್ಣ, ಮತ್ತು ೩. ವಯಸ್ಕರ ಓದುವ ಪುಸ್ತಕ.

ಈ ಪುಸ್ತಗಳಲ್ಲಿ ವಯಸ್ಕರು ತಮ್ಮ ಪರಿಸರದಲ್ಲಿ ದಿನನಿತ್ಯದ ಜೀವನದಲ್ಲಿ ಬಳಸುವ ಪದಗಳನ್ನೆ ಉಪಯೋಗಿಸಿ ಅಂದರೆ ಸರಳಪದಗಳನ್ನು ಉಪಯೋಗಿಸಿದ ಪಾಠಗಳು ಇವೆ. ಇದು ವಯಸ್ಕರ ಶಿಕ್ಷಣ ಸಮಿತಿಯ ನಿರಂತರ ಆಲೋಚನೆ ಮತ್ತು ಸಂಶೋಧನೆಯ ಫಲ.

೧೯೫೨ರ ವೇಳೆಗಾಗಲೇ ಸಮಿತ್ತಿಯ

ಕಾರ್ಯ ಚಟುವಟಿಕೆಗಳು ವಿಸ್ತೃತ ಪ್ರಚಾರ ಪಡೆದು ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ ರಾಷ್ಟ್ರಮಟ್ಟದಲ್ಲಿ ಖ್ಯಾತಿಗಳಿಸಿದ್ದುವು. ಅಂದು ಸಮಿತಿಯ ಅಧ್ಯಕ್ಷರಾಗಿದ್ದ ಟಿ. ಮಾದಯ್ಯ ಗೌಡರು ದೆಹಲಿ ಒಕ್ಕೂಟದಲ್ಲಿ 'ನವಸಾಕ್ಷರರಿಗೆ ಸಾಹಿತ್ಯ ರಚನೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಂಕಿರಣ ವ್ಯವಸ್ಥೆ ಮಾಡಿದರು. ಕೇವಲ ಸಾಕ್ಷರರಾದರೆ ಸಾಲದು ಸಾಕ್ಷರತೆಯನ್ನು ಉಳಿಸಿಕೊಂಡು ಹೋಗುವುದೂ ಮುಖ್ಯ. ಆದುದರಿಂದ ಅದಕ್ಕೆ ಸಹಕಾರಿಯಾಗುವ ಸಾಹಿತ್ಯವನ್ನೂ ರಚಿಸಿ ಒದಗಿಸುವುದು ಅಗತ್ಯ ಎಂಬುದನ್ನು ಮನಗಂಡುದರ ಫಲ ಇದು. ವಯಸ್ಕರ ಕಲಿಕೆಗೆ ಸಂಬಂಧಿಸಿದಂತೆ ಮನಶ್ಶಾಸ್ತ್ರ ಕಲಿಕೆಯ ಸಾಮಗ್ರಿಗಳು, ಬೋಧನಾ ಪದ್ಧತಿ ಇವುಗಳನ್ನು ಕುರಿತು ಅಧ್ಯಯನ ನಡೆದು ಅದರ ಆಧಾರದ ಮೇಲೆ ಕಲಿಕೆಯ ಸಾಮಗ್ರಿಗಳನ್ನು ಸಿದ್ಧಪಡಿಸಿ ಕಾರ್ಯಕ್ರಮ ಹಮ್ಮಿಕೊಂಡುದರಿಂದ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಹೊಸ ರೂಪ ಬಂದು ಜನಪ್ರಿಯವಾಯಿತು.

ವಯಸ್ಕರ ಶಿಕ್ಷಣದ ಗುರಿಗಳು :

ಕೇವಲ ಅಕ್ಷರ ಪ್ರಚಾರವೇ ವಯಸ್ಕರ ಶಿಕ್ಷಣದ ಗುರಿಯಲ್ಲ. ಅಕ್ಷರ ಪ್ರಚಾರ ಕಾರ್ಯಕ್ರಮ ವಯಸ್ಕರ ಶಿಕ್ಷಣ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಒಂದು ಸಾಧನ ಮಾತ್ರ. ಅದರ ಗುರಿ ಇನ್ನೂ ಭೂಮವಾದುದು; ವ್ಯಾಪಕವಾದುದು. ಅದು ಸಾಕ್ಷರತೆಯ ಜೊತೆಗೆ ಅರಿವು ಮತ್ತು ಕ್ರಿಯಾಶೀಲತೆಯನ್ನೂ ಒಳಗೊಂಡಿದೆ. ವಯಸ್ಕರ ಶಿಕ್ಷಣ ಯೋಜನೆಯ ಪ್ರಥಮ ಹಂತವಾದ ಸಾಕ್ಷರತಾ ಪ್ರಚಾರ ಕಾರ್ಯಕ್ರಮದಲ್ಲಿ ಗಳಿಸಿದ ಓದು ಬರಹ ಶಕ್ತಿಯನ್ನು ಉಳಿಸಿ ಬೆಳೆಸಿಕೊಂಡು ಸಾಕ್ಷರ ವಯಸ್ಕ ತನ್ನ ವೃತ್ತಿಗೆ ಸಂಬಂಧಿಸಿದ ವಿಷಯ ಗಳನ್ನು ಕುರಿತ ಪ್ರಚಾರಕ್ಕಾಗಿ ಮುದ್ರಿಸಿದ ಕರಪತ್ರಗಳು, ಪುಸ್ತಿಕೆಗಳು ಮತ್ತು ಪುಸ್ತಕಗಳನ್ನು ಓದಿ ತನ್ನ ವೃತ್ತಿಯನ್ನು ಉತ್ತಮವಾಗಿ ಮತ್ತು ಆಧುನಿಕ ರೀತಿಯಲ್ಲಿ ಮಾಡಿ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಆ ಮೂಲಕ ಹೆಚ್ಚು ಆದಾಯ ಸಂಪಾದಿಸಿ ತನ್ನ ಜೀವನ ಮಟ್ಟ ಉತ್ತಮಪಡಿಸಿಕೊಳ್ಳುವನು. ಇಷ್ಟೇ ಅಲ್ಲ; ಓದು ಬರಹ ಬಲ್ಲವನು ಸರ್ಕಾರ ಶ್ರೀಸಾಮಾನ್ಯರ ಅಭಿವೃದ್ಧಿಗಾಗಿ ರೂಪಿಸಿಕೊಳ್ಳುವ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪಾಲ್ಗೊಂಡು ಆ ಯೋಜನೆಗಳ ಯಶಸ್ವಿ ಅನುಷ್ಠಾನದ ಫಲ ಪಡೆದುಕೊಳ್ಳುವನು. ಈ ಕಾರ್ಯಕ್ರಮಗಳನ್ವಯ ತನಗೆ ದೊರೆಯಬಹುದಾದ ಸೌಲಭ್ಯಗಳನ್ನು ನೇರವಾಗಿ ಅಂದರೆ ಮಧ್ಯವರ್ತಿಗಳ ನೆರವಿಲ್ಲದೆಯೇ ಪಡೆದುಕೊಳ್ಳಲು ಶಕ್ತನಾಗುವನು.

ಸಾಕ್ಷರ ವಯಸ್ಕ ಓದುಬರಹ ಕಲಿಯುವುದರಿಂದ ಆತನ ಅರಿವು ಹೆಚ್ಚುವುದು. ಆತ ತಾನೊಬ್ಬ ಪೌರನಾಗಿ ಸಮಾಜದ ಸದಸ್ಯನಾಗಿ, ಸಂಪತ್ತಿನ ಉತ್ಪಾದಕನಾಗಿ, ಒಬ್ಬ ಪ್ರಜೆಯಾಗಿ, ಮಗನಾಗಿ, ತಂದೆಯಾಗಿ ತನ್ನ ಕರ್ತವ್ಯ ಏನೆಂಬುದನ್ನು ಅರಿತು ತನ್ನ ಜವಾಬ್ದಾರಿ ನಿರ್ವಹಿಸುವನು.

ಮೈಸೂರು ವಯಸ್ಕರ ಶಿಕ್ಷಣ ಸಮಿತಿ ಈ ಮೂರೂ ಗುರಿಗಳ ಪ್ರಾಮುಖ್ಯವನ್ನು ಮನಗಂಡು ಅವುಗಳನ್ನು ಸಾಧಿಸುವ ಉದ್ದೇಶದಿಂದ ತನ್ನ ಚಟುವಟಿಕೆಗಳನ್ನು ರೂಪಿಸಿಕೊಂಡಿತು. ಸಾಕ್ಷರ ಪ್ರಚಾರ, ಚಲನಚಿತ್ರ ಪ್ರದರ್ಶನ, ಪ್ರಚಾರೋಪನ್ಯಾಸಗಳು, ಗ್ರಾಮೀಣ ಪುಸ್ತಕ ಭಂಡಾರಗಳ ಪ್ರಾರಂಭ, ಪುಸ್ತಕ ಪ್ರಕಟಣೆ ವಾರಪತ್ರಿಕೆಯ ಪ್ರಾರಂಭ- ಈ ಎಲ್ಲ ಕಾರ್ಯಕ್ರಮಗಳ ಮೂಲಕ ಗುರಿ ಸಾಧಿಸಲು ಶ್ರಮಿಸಿತು. ಈ ಎಲ್ಲ ಕಾರ್ಯಕ್ರಮಗಳ ಜೊತೆಗೆ ವಿದ್ಯಾಪೀಠಗಳ ಕಾರ್ಯಕ್ರಮಗಳೂ ಈ ಮೂಲ ಉದ್ದೇಶಗಳಿಗೆ ಪೂರಕವಾಗಿವೆ.

(ಸಶೇಷ)

ಬಾಡಿಗೆ ತಾಯಿ

ಎಚ್. ಆರ್. ಚಂದ್ರವದನ ರಾವ್
೩೭೦, ೧೬ನೇ ಅಡ್ಡರಸ್ತೆ
೧೨ನೇ ಮುಖ್ಯರಸ್ತೆ, ೫ನೇ ಹಂತ
ಜೆ.ಪಿ. ನಗರ, ಬೆಂಗಳೂರು-೭೮

ಉದಯಗಿರಿ ನಗರದ ಹೊಸ ಬಡಾವಣೆಯಲ್ಲಿದ್ದರೂ ಅಲ್ಲಿ ಜನರ ಓಡಾಟ ಕಡಿಮೆ. ಇದಕ್ಕೆ ಕಾರಣ ಹೆಚ್ಚು ಕಡಿಮೆ ಅಲ್ಲಿರುವವರೆಲ್ಲಾ ಶ್ರೀಮಂತರು. ಅವರು ವಾಸಿಸುತ್ತಿರುವುದು ವಿಶಾಲ ಕಾಂಪೌಂಡಿರುವ ಬಂಗ್ಲೆಗಳಲ್ಲಿ ಎಲ್ಲರ ಬಳಿಯೂ ಕಾರು ಅಥವಾ ಸ್ಕೂಟರ್ ಇವೆ. ಮನೆ ಕಾಯಲು ನಾಯಿಯಿದೆ. ಅಂತಹ ಒಂದು ಮನೆಯಲ್ಲಿ ಕಸಮುಸುರೆ ಮಾಡುತ್ತಿದ್ದಳು ಮಾದೇವಿ.

ಅಂದು ಸಂಜೆ ಲಾಲ್ ಮನೆಯಿಂದ ಮಾದೇವಿ ಕೊಪ್ಪಲಿನಲ್ಲಿರುವ ತನ್ನ ಮನೆಗೆ ಹೋಗುತ್ತಿದ್ದಾಗ ತಿರುವಿನಲ್ಲಿ ಇದ್ದಕ್ಕಿದ್ದ ಹಾಗೆ ಕೆಲವು ಧಾಂಡಿಗರು ಅವಳ ಮೇಲೆರಗಿ ನಾಲ್ಕಾರು ಬಾರಿ ಅವಳನ್ನು ಚಾಕುವಿನಲ್ಲಿ ತಿವಿದು ಹೊರಟು ಹೋದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವಳನ್ನು ಜನ ಬಂದು ನೋಡುವುದರೊಳಗೆ ಅವಳು ಸತ್ತು ಹೋಗಿದ್ದಳು. ಪೋಲೀಸರು ಬಂದರು, ಜಾಗವನ್ನು ತಲಾಷ್ ಮಾಡಿದರು. ಹೆಣವನ್ನು ವೈದ್ಯಕೀಯ ಪರೀಕ್ಷೆ ಮಾಡಿಸಲು ತಮ್ಮ ವಶಕ್ಕೆ ತೆಗೆದುಕೊಂಡರು. ಅವಳ ಗಂಡ ವಾಚ್‌ಮನ್ ಮಲ್ಲಪ್ಪನನ್ನು ಪೋಲೀಸ್ ಠಾಣೆಗೆ ಕರೆಸಿ ಕೊಲೆ ಬಗ್ಗೆ ವಿಚಾರಿಸಿದರು. , ಹೆದರಿಸಿದರು, ಕೊಲೆಯನ್ನು ಏಕೆ ಮಾಡಿದರು, ಯಾರು ಮಾಡಿದರು ಎಂಬ ಬಗ್ಗೆ ಯಾರ ಮೇಲಾದರೂ ಅನುಮಾನವಿದೆಯೇ ಎಂದು ವಿಚಾರಿಸಿದರು. ನಂತರ ಹೆಣವನ್ನು ದಫನ್ ಮಾಡಲು ಮಲ್ಲಪ್ಪನಿಗೆ ಒಪ್ಪಿಸಿ, ಅವನಿಂದ ಸ್ವಲ್ಪ ಹಣ ಕಿತ್ತರು. ಪೋಲೀಸರು ಕೊಲೆಗಡುಕರನ್ನು ಹಿಡಿಯಲು ಹೆಚ್ಚೇನೂ ಮುತುವರ್ಜಿ ವಹಿಸಲಿಲ್ಲ. ಹೆಚ್ಚು ನಿಗಾ ವಹಿಸಿದರೆ ಅವರಿಗಾಗುವ ಲಾಭವಾದರೂ ಏನು? ಮಾದೇವಿ ಸಾವಿಗೆ ಅತ್ತವರು ಅವಳ ಗಂಡ, ಬಂಧು ಬಳಗದವರು, ಅವಳ ಇಬ್ಬರು ಮಕ್ಕಳ ಜೊತೆಗೆ ಒಂದು ವರ್ಷದ ಕಿಷನ್.

ಕಿಷನ್ ಮೋಹನ್ ಲಾಲ್ ಮತ್ತು ಧರಿತ್ರೀ ದೇವಿಯವರ ಪುತ್ರ. ಮೋಹನ್ ಲಾಲ್ ಒಬ್ಬ ಜವಳಿ ಸಗಟು ವ್ಯಾಪಾರಿ. ನಗರದ ಮಧ್ಯಭಾಗದಲ್ಲಿ ಎರಡು ಅಂಗಡಿಗಳು, ಬಂಗ್ಲೆ, ಕಾರು, ಫೋನು, ಎಲ್ಲವೂ ಇರುವ ಶ್ರೀಮಂತ ಮೋಹನ್. ಆದರೆ ಅವರ ತಂದೆ ಇಲ್ಲಿಗೆ ಬಂದಾಗ ಒಬ್ಬ ನಿರಾಶ್ರಿತ. ೧೯೪೭ರಲ್ಲಿ ದೇಶದ ವಿಭಜನೆ ಕಾಲಕ್ಕೆ ಲಾಹೋರಿನಲ್ಲಾದ ಮತೀಯ ಗಲಭೆಯಿಂದ ರತನ್‌ಲಾಲ್ ಹೆಂಡತಿ ಗೋಮತಿ ಸಣ್ಣ ಮಗು ಮೋಹನನೊಡನೆ ತಮ್ಮೆಲ್ಲಾ ಆಸ್ತಿಯನ್ನು ಅಲ್ಲೇ ಬಿಟ್ಟು ಇಲ್ಲಿಗೆ ಬಂದರು; ವ್ಯಾಪಾರ ಪ್ರಾರಂಭಿಸಿದರು. ಈಗ ಅವರಿಗೆ ೭೫ ವರ್ಷ. ವ್ಯವಹಾರವೆಲ್ಲಾ ಮಗನಿಗೆ ಈಗ ನೋಡಿಕೊಳ್ಳಲು ಬಿಟ್ಟಿದ್ದಾರೆ. ಆದರೆ ಅವರಿಗೆ ಒಂದೇ ಚಿಂತೆ ಮಗನಿಗೆ ಮದುವೆಯಾಗಿ... ಹತ್ತು ಹದಿನೈದು ವರ್ಷವಾದರೂ ಮಕ್ಕಳಿಲ್ಲ. ಸೊಸೆ ಧರಿತ್ರೀ ದೇವಿ ಮದುವೆ ಕಾಲಕ್ಕೆ ತೆಳ್ಳಗೆ ಬೆಳ್ಳಗಿದ್ದಳು. ಹೊಳಪು ಕಣ್ಣುಗಳು, ನೀಳ ನಾಸಿಕ, ಐದು ಅಡಿ ಎರಡು ಅಂಗಲ ಎತ್ತರ, ಮೃದು ಮಾತು. ಒಮ್ಮೆ ನೋಡಿದವರು ಪುನಃ ಪುನಃ ಅವಳನ್ನು ನೋಡಬೇಕೆನಿಸುವ ಆಕರ್ಷಕ ವ್ಯಕ್ತಿ ಆಕೆ.

ಧರಿತ್ರೀದೇವಿ ಎರಡು ತಿಂಗಳ ಗರ್ಭಿಣಿಯಾದಾಗ ಸಂಸಾರಕ್ಕೆಲ್ಲಾ ಖುಷಿಯೋ ಖುಷಿ.

ಆದರೆ ನಾಲ್ಕನೇ ತಿಂಗಳಲ್ಲಿ ಅವಳಿಗೆ ಗರ್ಭಪಾತವಾಯಿತು. ಇದಾದ ಎರಡು ವರ್ಷಗಳ ನಂತರ ಆಕೆ ಪುನಃ ಗರ್ಭವತಿ ಯಾದಳು. ಈಗ ಎಲ್ಲರಿಗೂ ಅವಳ ಬಗ್ಗೆ ಕಾಳಜ . ಮೂರು ಮೂರು ದಿನಕ್ಕೂ ಪ್ರಸೂತಿ ತಜ್ಞೆಯಿಂದ ಪರೀಕ್ಷೆ , ಹೊತ್ತು ಹೊತ್ತಿಗೆ ಸರಿಯಾಗಿ ಊಟ ತಿಂಡಿ, ಹಾಲು ಹಣ್ಣು ಹಂಪಲು, ವ್ಯಾಯಾಮ. ಆದರೂ ನಾಲ್ಕು ತಿಂಗಳಾದಾಗ ಪುನಃ ಗರ್ಭ ಇಳಿಯಿತು.

ಮೋಹನ್ ಹೆಂಡತಿಯೊಡನೆ ಮದ್ರಾಸಿಗೆ ಹೋಗಿ ಅಲ್ಲಿಯ ಹೆಸರಾಂತ ಪ್ರಸೂತಿ ತಜ್ಞೆ ಮಾಧುರಿ ಅಯ್ಯರ್‌ರವರನ್ನು ಕಂಡರು. ಧರಿತ್ರೀದೇವಿಯನ್ನು ಪೂರ್ಣವಾಗಿ ಪರೀಕ್ಷಿಸಿದ ನಂತರ ಅವರು ಲಾಲ್ ನನ್ನ ಕರೆದು ಗುಟ್ಟಾಗಿ ಹೇಳಿದರು :

''ನಿಮ್ಮ ಪತ್ನಿಗೆ ಗರ್ಭ ನಿಲ್ಲುತ್ತಿಲ್ಲ, ಕಾರಣ ಅವಳ ಗರ್ಭಕೋಶ ಚಿಕ್ಕದು ಭ್ರೂಣ ೩-೪ ತಿಂಗಳ ನಂತರ ಅಲ್ಲಿ ಬೆಳೆಯಲು ಅವಕಾಶ ವಿಲ್ಲ; ಅದಕ್ಕೆ ಗರ್ಭಸ್ರಾವ.''

''ಅದಕ್ಕೇನು ಮಾಡಬೇಕು, ಡಾಕ್ಟ್ರೇ? ಗರ್ಭಕೋಶವನ್ನು ಹಿಗ್ಗಿಸಿ ದೊಡ್ಡದು ಮಾಡಲು ಸಾಧ್ಯವಿಲ್ಲವೇ?

''ಇಲ್ಲ.'' '

''ಬೇರೆ ಗರ್ಭಕೋಶ ಅಳವಡಿಸುವುದು?''

''ಇದನ್ನು ಯಾರೂ ಇದುವರೆಗೆ ಮಾಡಿಲ್ಲ.''

''ನಮ್ಮ ಸಮಸ್ಯೆಗೆ ನೀವೇ ಪರಿಹಾರ ಸೂಚಿಸಬೇಕು.''

''ಒಂದು ಮಗುವನ್ನು ದತ್ತು ತೆಗೆದುಕೊಳ್ಳಿ''

''ದುತ್ತು ತೆಗೆದು ಕೊಂಡ ಮಗು ನಮ್ಮ ಮಗು ಆಗುವುದಿಲ್ಲ. ಅದಕ್ಕೂ ಅದರ ತಾಯಿ ತಂದೆ ಮೇಲೆ ಹೆಚ್ಚು ಪ್ರೀತಿ ಬೆಳೆಯಬಹುದು''.

''ಹಾಗಾದರೆ ಇನ್ನೊಂದು ಪರ್ಯಾಯ ಸೂಚಿಸಲೇ?''

''ಖಂಡಿತಾ. ಅದೇ ನನಗೆ ಬೇಕಾಗಿರುವುದು''.

''ಇದಕ್ಕೆ ಇನ್ನೊಬ್ಬ ಸ್ತ್ರೀ ಸಹಾಯ ಅಗತ್ಯ. ನಿಮ್ಮ ವೀರ್ಯ, ನಿಮ್ಮ ಪತ್ನಿಯ ಅಂಡ ಸೇರಿ ಉತ್ಪತ್ತಿ ಯಾದ ಭ್ರೂಣ, ಇನ್ನೊಬ್ಬ ಆರೋಗ್ಯವಂತ ಹೆಂಗಸಿನ ಗರ್ಭಕೋಶದಲ್ಲಿ ಬೆಳೆಸಬೇಕು. ಆಕೆ ಹೆತ್ತು ನಿಮಗೆ ಮಗು ಕೊಡುತ್ತಾಳೆ. ಈ ವಿಧಾನ ಸ್ವಲ್ಪ ಕ್ಲಿಷ್ಟ, ಖರ್ಚು ಜಾಸ್ತಿ, ನೀವು, ನಿಮ್ಮ ಪತ್ನಿ ಮತ್ತು ಬಾಡಿಗೆ ತಾಯಿ ನನ್ನ ನರ್ಸಿಂಗ್ ಹೋಮ್‌ನಲ್ಲಿ ಸ್ವಲ್ಪ ದಿನ ಇರಬೇಕಾಗುತ್ತದೆ. ಖರ್ಚು ಸುಮಾರು ಒಂದೂವರೆ ಲಕ್ಷ ಬರಬಹುದು.''

೩೪ ವರ್ಷದ ಮಾದೇವಿ ಧರಿತ್ರೀದೇವಿ ಮನೆಯಲ್ಲಿ ಕೆಲಸಮಾಡುತ್ತಿದ್ದಾಕೆ. ಇಬ್ಬರು ಮಕ್ಕಳ ತಾಯಿಯಾದ ಅವಳು ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿದ್ದಾಳೆ. ಲಾಲ್ ದಂಪತಿಗಳು ಮಾದೇವಿಯನ್ನು, ಆಕೆಯ ಗಂಡನನ್ನು ಕರೆಸಿ ಗುಟ್ಟಾಗಿ ವಿಷಯ ತಿಳಿಸಿದರು. ಭ್ರೂಣವನ್ನು ತನ್ನ ಗರ್ಭಾಶಯದಲ್ಲಿ ಬೆಳೆಸಿ ಮಗುವನ್ನು ಹೆತ್ತು ಕೊಟ್ಟರೆ ೨೫ ಸಾವಿರ ಹಣ ಕೊಡುತ್ತೇವೆ ಅಂದರು. ಮಗುವಿನ ಮೇಲೆ ಅವರ ಅಧಿಕಾರವಿರುವುದಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದರು.

ಮೋಹನ್‌ಲಾಲ್, ಧರೀತ್ರಿದೇವಿ, ಮಾದೇವಿ ಮದ್ರಾಸಿಗೆ ಹೋಗಿ ಒಂದು ತಿಂಗಳಿದ್ದು ಬಂದರು. ಎಲ್ಲವೂ ಯೋಚಿಸಿಯೇ ಆಯಿತು. ಮಾದೇವಿ ಬಸುರಿಯಾದಾಗ ಧರಿತ್ರೀದೇವಿ ಮನೆಯಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದಳು. ಅವಳಿಗೆ ಒಳ್ಳೆಯ ಆಹಾರ, ಟಾನಿಕ್ಕು , ಹಣ್ಣು ಹಾಲು ಕೊಡುವ ಏರ್ಪಾಡಾಯಿತು. ಅವಳ ಮನೆಯ ಖರ್ಚಿಗೆ ಲಾಲ್ ತಿಂಗಳಿಗೆ ಒಂದು

ಸಾವಿರ ರೂಪಾಯಿ ಕೊಡುತ್ತಿದ್ದರು. ಮಾದಪ್ಪನಿಗೆ ಈಗ ಹಣದ ಕೊರತೆ ಇಲ್ಲ. ಈಗ ಆಗಾಗ್ಗೆ ಕುಡಿಯುತ್ತಾನೆ.

ಮಾದೇವಿ ಗಂಡು ಮಗುವನ್ನು ಒಂದು ನರ್ಸಿಂಗ್ ಹೋಮ್‌ನಲ್ಲಿ ಹೆತ್ತಳು. ಲಾಲ್ ಮನೆಯವರಿಗೆಲ್ಲಾ ಸಂತಸ, ಸಂಭ್ರಮ. ಮಗುವಿಗೆ ಹಾಲಿಗೆ ತೊಂದರೆ ಇಲ್ಲ, ಎದೆ ಹಾಲು ತುಂಬಾ ಇದೆ.

ಮಗುವಿನ ಮೇಲೆ ಧರಿತ್ರೀದೇವಿ ಹಾಗೂ ಮಾದೇವಿ ಇಬ್ಬರಿಗೂ ತುಂಬ ಪ್ರೀತಿ. ಒಬ್ಬರನ್ನು ಬಿಟ್ಟರೆ ಒಬ್ಬರು ಮಗುವಿನ ಬಳಿಯಲ್ಲೇ ಇರುತ್ತಿದ್ದರು. ಆದರೆ ಮಗುವಿಗೆ ಮಾದೇವಿಯ ಸಾಮೀಪ್ಯ ಹೆಚ್ಚು ಆನಂದ. ಆಕೆ ತಾನೇ ಹಾಲುಣಿಸುವವಳು.

ಮಗುವಿಗೆ ೭-೮ ತಿಂಗಳಾಯಿತು. ಅದು ಮಾದೇವಿಯನ್ನು 'ಅಮ್ಮ' ಅನ್ನುತ್ತದೆ; ಅದಕ್ಕೆ ಮಾದೇವಿ ಯಾವಾಗಲೂ ಬೇಕು. ಮಾದೇವಿಗೂ ಮಗುವಿನ ಮೇಲೆ ಅಪಾರ ಪ್ರೇಮ.

ಧರಿತ್ರೀದೇವಿ ಒಂದು ದಿನ ಹೇಳಿದಳು- ''ಮಾದೇವಿ, ನಿನಗೆ ಕೊಡಬೇಕಾಗಿದ್ದ ಹಣವನ್ನೆಲ್ಲಾ ಆಗಲೇ ಕೊಟ್ಟಿದ್ದೇವೆ. ಇನ್ನು ಐದು ಸಾವಿರ ತೆಗೆದುಕೋ. ನಾಳೆಯಿಂದ ಮನೆಗೆ ಬರಬೇಡ, ಮಗುವನ್ನು ನೋಡಬೇಡ.''

''ಏಕೆ ಅಮ್ಮಾವ್ರೆ, ನಾನೇನು ಮಾಡಿದೆ?''

''ನೀನು ಹತ್ತಿರವಿದ್ದರೆ ಕಿಷನ್ ನಮ್ಮವನಾಗುವುದಿಲ್ಲ''.

''ದಿನಕ್ಕೆ ಒಂದೆರಡು ಗಂಟೆ ಮಗುವಿನೊಡನೆ ಇದ್ದು ಹೋಗ್ತೇನೆ.''

''ಬೇಡ,'' ಅಂದಳು ಧರಿತ್ರೀದೇವಿ.

ಹಾಗಾದರೂ ಮಾದೇವಿ ಮನೆಗೆ ಬರುತ್ತಲೇ ಇದ್ದಳು ; ಮಗುವಿನ ಜೊತೆ ಇರುತ್ತಿದ್ದಳು. ಮಾದೇವಿ ಇಲ್ಲದಾಗ ಕಿಷನ್‌ನ ಗಲಾಟೆ ಹೇಳತೀರದು. ಏನು ಮಾಡಬೇಕು? ಒಂದೇ ಉತ್ತರ ಮಾದೇವಿ ಸಾಯಬೇಕು.

ಮಕ್ಕಳಿಲ್ಲದ ಲಾಲ್ ದಂಪತಿಗಳು ಮಾದೇವಿ ಮಗುವನ್ನು ಸಾಕುತ್ತಿದ್ದಾರೆ ಎಷ್ಟು ಅನುಕಂಪ! ಎಷ್ಟು ಒಳ್ಳೆಯವರು!'' ಎಂದು ಕೆಲವರು ಮಾತನಾಡಿಕೊಂಡರೆ, ''ಮಾದೇವಿಗೂ ಲಾಲ್‌ಗೂ ಸಂಬಂಧವಿತ್ತಂತೆ' ಎಂದು ಇನ್ನು ಕೆಲವರು ಮೆಲುಧ್ವನಿಯಲ್ಲಿ ಹೇಳುತ್ತಾರೆ. ಆದರೆ ಅವಳ ಕೊಲೆಗೆ ಏನು ಕಾರಣ, ಯಾರು ಮಾಡಿಸಿದರು ಎಂಬುದು ಲಾಲ್ ದಂಪತಿಗಳಿಗೆ ಮತ್ತು ಕೊಲೆಪಾತಕರಿಗೆ ಬಿಟ್ಟು ಇನ್ನು ಯಾರಿಗೂ ಬಹುಶಃ ಗೊತ್ತಿಲ್ಲ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸಬಾರದು. ಎಲ್ಲರನ್ನೂ ಪ್ರೀತಿಸುವುದು; ಎಲ್ಲರಿಗೂ ಒಳ್ಳೆಯದನ್ನು ಬಯಸುವುದು - ಇದೇ ಅಹಿಂಸಾ ಧರ್ಮ.

- ಮಹಾತ್ಮ ಗಾಂಧೀಜಿ

ಗರ್ಭದಿಂದ ಗೋರಿವರೆಗೆ ಕಲಬೆರಕೆ

ಪ್ರೊ. ಸಿ.ಬಿ. ಪಾಟೀಲ
ಸೌಜನ್ಯ
೩-೨-೯೮/೧೦೨
ಡಾ. ಅಮರಖೇಡ ಬಡಾವಣೆ
ರಾಯಚೂರು-೫೮೪ ೧೦೩

ಸಾಸಿವೆ ಎಣ್ಣೆ ಸೇವಿಸಿ ಕೊಲ್ಕತ್ತಾ ಹಾಗೂ ದಿಲ್ಲಿಯಲ್ಲಿ ಹಲವಾರು ಜನರ ಸಾವು. ಮದುವೆಯ ಊಟ ಉಂಡ ನೂರು ಜನರು ಅಸ್ವಸ್ಥ ಹಾಗೂ ಹಾಸ್ಟೆಲ್‌ನಲ್ಲಿ ಭೋಜನ ಮಾಡಿದ ಐವತ್ತು ಮಕ್ಕಳು ಆಸ್ಪತ್ರೆಗೆ - ಹೀಗೆ ಪದೇ ಪದೇ ಸುದ್ದಿಗಳನ್ನು ನೋಡುತ್ತೇವೆ, ಕೇಳುತ್ತೇವೆ. ಇದಕ್ಕೆ ಕಾರಣ ಕೆಲವೇ ಲಾಭಕೋರರ ದುರಾಸೆ.

ಆಹಾರ ಕಲಬೆರಕೆ ಹೊಸ ಸಮಸ್ಯೆಯಲ್ಲ. ಇದು ಸಾಮಾಜಿಕ ಪಿಡುಗು. ಕಲಬೆರಕೆಯ ಹರಹು ದೊಡ್ಡದು. ಗರ್ಭದಿಂದ ಗೋರಿಯ ವರೆಗೆ ಇದರ ಜಾಲ ಇದೆ. ನಾಗರಿಕತೆಯ ಜೊತೆ-ಜೊತೆಗೆ ಆಹಾರ ಕಲಬೆರಕೆಯೂ ಪ್ರಾರಂಭವಾಯಿತು. ಇದರಲ್ಲಿ ವೈವಿಧ್ಯ ಇದೆ. ಹಾಗೆಯೇ ಇದಕ್ಕೆ ಹತ್ತಾರು ಕಾರಣಗಳೂ ಇವೆ. ಇದು ವ್ಯಾಪಾರಿಯ ಜಾಣ್ಮೆ ಮತ್ತು ಗ್ರಾಹಕನ ಅಜ್ಞಾನ ಹಾಗೂ ಇತಿಮಿತಿಗಳನ್ನು ಅವಲಂಬಿಸಿದೆ. ನಮಗೆ ಶುದ್ಧ ಆಹಾರ ಬೇಕು ನಿಜ, ಆದರೆ ಕ್ಷಣಕ್ಕೊಂದು ಮಗು ಭೂಮಿಗಿಳಿದರೆ ಶುದ್ಧ ಆಹಾರ ಒದಗಿಸಲು ಸಾಧ್ಯವೇ? ಬೇಡಿಕೆಯ ಹೆಚ್ಚಳ ಹಾಗೂ ಆಹಾರದ ಕೊರತೆ- ಕಲಬೆರಕೆಗೆ ಪ್ರೇರಣೆ.

ಆಹಾರದಲ್ಲಿ ಕಲಬೆರಕೆಯಾಗುವಂಥ ಅನೇಕ ಪದಾರ್ಥಗಳು ಹಾನಿಕಾರಕಗಳು. ಇವುಗಳ ಸೇವನೆ ಸಲ್ಲ. ನಮ್ಮ ದೇಶದಲ್ಲಿ ಭ್ರಷ್ಟಾಚಾರವನ್ನು ತಡೆಯುವುದು ಎಷ್ಟು ಅಸಾಧ್ಯವೋ, ಅಷ್ಟೇ ಅಸಾಧ್ಯವಾದ ಕೆಲಸ ಆಹಾರ ಕಲಬೆರಕೆ ತಡೆಯುವುದು. ಉಪ್ಪಿನಂಥ ಸಾಮಾನ್ಯ ಪದಾರ್ಥವೂ ಇಂದು ಕಲಬೆರಕೆಗೆ ಒಳಗಾಗಿರುವುದನ್ನು ನೋಡಿದರೆ ವ್ಯಾಪಾರಿಗಳ, ಅಧಿಕಾರಿಗಳ ಹಾಗೂ ರಾಜಕಾರಣಿಗಳ ವಿವಿಧ ಬಣ್ಣಗಳು ಗೋಚರಿಸುತ್ತವೆ.

ಕಲಬೆರಕೆಯಾದ ಅಥವಾ ಕೀಳುಮಟ್ಟದ ಆಹಾರವನ್ನು ದೀರ್ಘಕಾಲ ಸೇವಿಸುವುದರಿಂದ ಉಂಟಾಗುವ ಹಾನಿಕಾರಕ ಪರಿಣಾಮಗಳು ಕೂಡಲೇ ಗೋಚರಿಸುವುದಿಲ್ಲ. ಆದ್ದರಿಂದ ಜನರು ಇದಕ್ಕೆ ಸಾಕಷ್ಟು ಗಮನಕೊಟ್ಟಿಲ್ಲವೆಂದು ಹೇಳಬಹುದು.

ನಂಬಿಕೆ ಇಲ್ಲದೆ ಜಗತ್ತಿನ ವಹಿವಾಟು ಮುಂದೆ ಸಾಗುವುದಿಲ್ಲ. ನಾವು ಹೆಜ್ಜೆ ಇಟ್ಟಾಗ ನೆಲ ಕುಸಿದು ಹೋಗಬಹುದು ಎಂದು ಅನುಮಾನಿಸುವುದಿಲ್ಲ. ''ಮಾನವನು ನೆಲದ ಮೇಲೆ ನಡೆಯುವುದಿಲ್ಲ; ನಂಬಿಕೆಯ ಮೇಲೆ ನಡೆಯುತ್ತಾನೆ''. ವಿಚಿತ್ರವೆಂದರೆ ಆ ನಂಬಿಕೆಗೆ ದ್ರೋಹ ಬಗೆಯುವ ಪ್ರಯತ್ನದಲ್ಲಿ ಆಹಾರ ಕಲಬೆರಕೆಯೂ ಒಂದು.

ಗ್ರಾಹಕರು ಎಲ್ಲವನ್ನೂ ನಂಬಿ ವ್ಯಾಪಾರ ಮಾಡುವುದಿಲ್ಲ. ಬಾಡಿಹೋದ, ಹುಳುಕು ತರಕಾರಿಗಳನ್ನು ಯಾರೂ ಕೊಳ್ಳುವುದಿಲ್ಲ. ಆದರೆ ಕಲಬೆರಕೆದಾರರು ಜನರ ಎಚ್ಚತ್ತ ಕಣ್ಣು -ಕೈಗಳಿಗೆ ಸುಲಭವಾಗಿ ಮೋಸಮಾಡಬಲ್ಲರು. ಬಣ್ಣದಲ್ಲಿ ಆಹಾರದಲ್ಲಿ ಮುಟ್ಟಿ ನೋಡಿದಾಗ ಮೂಲವಸ್ತುವನ್ನೇ ಹೋಲುವಂಥಹ ಕಲಬೆರಕೆ ಸಾಮಗ್ರಿಗಳನ್ನು ಅವರು ಕಂಡುಕೊಳ್ಳುತ್ತಾರೆ. ಅವರ ಜಾಣಕ್ಷತೆ ಬೆರಗು ಹುಟ್ಟಿಸು

ವಂತಹದೇ! ಆದರೆ ಪರಿಣಾಮ ಮಾತ್ರ ಘೋರ.

ಕಲಬೆರಕೆ ಸಂಕೀರ್ಣವಾದ ಹಾಗೆಲ್ಲ ಪರೀಕ್ಷಾ ವಿಧಾನವೂ ಗೋಜಲು ಆಗುವುದು ಸಹಜ. ಕೆಲವೊಂದು ಕಲಬೆರಕೆಗಳನ್ನು ಮನೆಯಲ್ಲಿರುವ ಸಾಮಗ್ರಿಗಳಿಂದ, ಸುಲಭವಾಗಿ ದೊರೆಯಬಲ್ಲ ವಸ್ತುಗಳಿಂದಲೇ ಪರೀಕ್ಷಿಸಬಹುದು. ಇಲ್ಲಿ ಅಂಥ ಹಲವು ವಿಧಾನಗಳನ್ನು ನೀಡಲಾಗಿದೆ. ನಾವು ಅಸಹಾಯಕರೆಂದು ಕೈಕಟ್ಟಿ ಕುಳಿತವರನ್ನು ಎಚ್ಚರಿಸುವ ಕೆಲಸ ಇದಾಗಿದೆ. ಕಲಬೆರಕೆದಾರರು ಹೊಸ ಕಲಬೆರಕೆ ಕಲೆಯನ್ನು ಕಂಡುಕೊಂಡಾರು! ಆಗ ಹೊಸ ವಿಧಾನಗಳನ್ನು ನಾವು ರೂಪಿಸಬೇಕಾಗುತ್ತದೆ. ಇದೊಂದು ನಿಲ್ಲದ ಸೆಣಸಾಟ. ಈ ಸೆಣಸಾಟ ಅನಿವಾರ್ಯವಾದಲ್ಲಿ ಅದನ್ನು ಕ್ರೀಡಾ ಮನೋಭಾವದಿಂದ ಸೆಣಸೋಣ.

ಯಾವ ಆಹಾರ ಪದಾರ್ಥಗಳಿಗೆ ಏನನ್ನು ಬೆರೆಸುತ್ತಾರೆ ಎಂಬುದನ್ನು ಪಟ್ಟಿ ಮಾಡುವುದು ಅಸಾಧ್ಯ. ಇದು ವ್ಯಾಪಾರಿಗಳ ಕಲ್ಪನಾಶಕ್ತಿ ಹಾಗೂ ಕಚ್ಚಾ ಮಾಲುಗಳ ಲಭ್ಯತೆಯನ್ನು ಅವಲಂಬಿಸಿದೆ. ಇಪ್ಪತ್ತೊಂದನೆಯ ಶತಮಾನದ ವ್ಯಾಪಾರಿಗಳ ಕಲ್ಪನಾಶಕ್ತಿ ಅಗಾಧ. ಆದರೂ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ನಾವು ಆಹಾರ ಪದಾರ್ಥಗಳನ್ನು ಪರೀಕ್ಷಿಸಿ ಸೇವಿಸಬೇಕಾಗಿದೆ.

ಆಹಾರ ಕಲಬೆರಕೆಯನ್ನು ಕಂಡುಹಿಡಿಯುವ ಕೆಲವು ಸುಲಭ ಹಾಗೂ ಸರಳ ವಿಧಾನಗಳನ್ನು ಹೀಗಿವೆ:-

೧. ಸಾಸಿವೆ: ಕಲಬೆರಕೆ ವಸ್ತು-ದತ್ತೂರಿ ಬೀಜಗಳು. ಪರೀಕ್ಷಿಸುವ ವಿಧಾನ : ಸಾಸಿವೆ ಕಂದು ಬಣ್ಣದ್ದಿದ್ದು, ದತ್ತೂರಿ ಬೀಜಗಳು ಕಪ್ಪಾಗಿರುತ್ತವೆ. ಸಾಸಿವೆಯ ಮೇಲ್ಮೈ ನಯವಾಗಿರುತ್ತದೆ. ಆದರೆ ದತ್ತೂರಿ ಬೀಜದ ಹೊರಮೈ ಹುರಬರಕಾಗಿರುತ್ತದೆ. (ಭೂತಗನ್ನಡಿ ಉಪಯೋಗಿಸಿ ಪರೀಕ್ಷಿಸಿ)

೨. ಕರಿಮೆಣಸು: ಕಲಬೆರಕೆ ವಸ್ತು-ಪಪ್ಪಾಯಿ ಬೀಜಗಳು ಹಾಗೂ ಹುಳುಕು ಮೆಣಸು.

ಪರೀಕ್ಷಿಸುವ ವಿಧಾನ : ಅ) ಗಾಜಿನ ಲೋಟದಲ್ಲಿ ಅರ್ಧದಷ್ಟು ಸ್ಪಿರಿಟ್ ತೆಗೆದುಕೊಂಡು, ಮಾದರಿ ಮೆಣಸಿನ ಕಾಳುಗಳನ್ನು ಹಾಕಿರಿ. ಒಳ್ಳೆಯ ಮೆಣಸು ಲೋಟದ ತಳ ಸೇರುತ್ತದೆ. ಪಪ್ಪಾಯಿ ಬೀಜ ಹಾಗೂ ಹುಳುಕು ಮೆಣಸು ತೇಲುತ್ತವೆ.

ಆ) ಮೆಣಸು ದುಂಡಗೆ ಹಾಗೂ ಖಾರವಾಗಿರುತ್ತದೆ. ಪಪ್ಪಾಯಿ ಬೀಜ ಮೊಟ್ಟೆಯಾಕಾರವಾಗಿದ್ದು ಖಾರವಾಗಿರುವುದಿಲ್ಲ.

೩. ಅರಿಷಿಣ : ಕಲಬೆರಕೆ ವಸ್ತು-ಮೆಟಾನಿಲ್ ಹಳದಿ ಬಣ್ಣ.

ಪರೀಕ್ಷಿಸುವ ವಿಧಾನ : ಪ್ರನಾಳದಲ್ಲಿ ಒಂದು ಚಿಟಿಕೆಯಷ್ಟು ಅರಿಷಿಣದ ಮಾದರಿಯನ್ನು ತೆಗೆದುಕೊಳ್ಳಿ, ಅದಕ್ಕೆ ಒಂದು ಮಿಲೀ ನೀರುಹಾಕಿ-ಕಲಕಿಸಿ. ಅನಂತರ ಪ್ರನಾಳದಲ್ಲಿ ೩-೪ ಹನಿ ಹೈಡ್ರೋಕ್ಲೋರಿನ್ ಆಮ್ಲ ಹಾಕಿ ಕಲಕಿಸಿ. ದ್ರಾವಣ ಕೆಂಪಾಗುತ್ತದೆ. (ಈ ಪ್ರಯೋಗವನ್ನು ಮೆಟಾನಿಲ್ ಹಳದಿ ಬಣ್ಣವುಳ್ಳ ಐಸ್‌ಕ್ರೀಮ್, ಪಾನಕ, ಸಿಹಿ ತಿಂಡಿಗಳು, ಬೆಲ್ಲ ಹಾಗೂ ತೊಗರಿಬೇಳೆ ಇತ್ಯಾದಿಗಳಿಗೆ ಮಾಡಬಹುದು.)

೪. ಸಿಹಿ ಪದಾರ್ಥಗಳ ಮೇಲಿನ ಬೆಳ್ಳಿ ಹಾಳೆ: ಕಲಬೆರಕೆ ವಸ್ತು- ಅಲ್ಯುಮಿನಿಯಮ್ ಹಾಳೆ.

ಪರೀಕ್ಷಿಸುವ ವಿಧಾನ : ಅಲ್ಯುಮಿನಿಯಮ್ ಹಾಳೆಯನ್ನು ಸುಟ್ಟರೆ ಕಂದು ಕರಿ ಬಣ್ಣದ ಬೂದಿ ದೊರೆಯುತ್ತದೆ. ಬೆಳ್ಳಿ

ಹಾಳೆಯನ್ನು ಸುಟ್ಟರೆ ಹೊಳೆಯುವ ಬಿಳಿ ಬಣ್ಣದ ಮುದ್ದೆ ದೊರೆಯುತ್ತದೆ.

೫. ಶೀಟುಗಳಲ್ಲಿಯ ಅಡಿಕೆ ಪುಡಿ : ಕಲಬೆರಕೆ ವಸ್ತು : ರೋಗಪೀಡಿತ ಅಡಿಕೆಯ ತುಂಡು ಗಳು ಹಾಗೂ ನಿಷಿದ್ಧ ರಂಗು.

ಪರೀಕ್ಷಿಸುವ ವಿಧಾನ: ಲೋಟದಲ್ಲಿ ಸ್ವಲ್ಪ ನೀರು ತೆಗೆದು ಕೊಳ್ಳಿರಿ. ಅದಕ್ಕೆ ಮಾದರಿ ಅಡಿಕೆ ಪುಡಿಯನ್ನು ಹಾಕಿರಿ. ಅರ್ಧ ಗಂಟೆಯ ಬಳಿಕ ಅಡಿಕೆ ತುಂಡುಗಳನ್ನು ಬೆರಳುಗಳಿಂದ ಹಿಸುಕಿ. ಕೆಲವು ಅಡಿಕೆ ತುಂಡುಗಳು ಮಾಂಸದ ಚೂರುಗಳಂತೆ ಮೆತ್ತಗಾಗಿರುತ್ತವೆ. ರಂಗು ನೀರಿನಲ್ಲಿ ಕರಗಿದ್ದು ಗೋಚರಿಸುತ್ತದೆ.

೬. ಕಾಫಿ ಪುಡಿ: ಕಲಬೆರಕೆ ವಸ್ತು : ಹುಣಸೆ ಬೀಜ, ಹಾಗೂ ಚಿಕೋರಿ ಪುಡಿ.

ಪರೀಕ್ಷಿಸುವ ವಿಧಾನ : ನೀರು ತುಂಬಿದ ಗಾಜಿನ ಲೋಟದಲ್ಲಿ ಸ್ವಲ್ಪ ಕಾಫಿ ಪುಡಿಯ ಮಾದರಿಯನ್ನು ಹಾಕಿ ಕಲಕಿಸಿ. ಶುದ್ಧ ಕಾಫಿ ಪುಡಿ ನೀರಿನಲ್ಲಿ ಲೀನಿಸುತ್ತದೆ ಉಳಿದವು ತಳಸೇರಬಹುದು ಅಥವಾ ನೀರಿನ ಮೇಲೆ ತೇಲಬಹುದು.

೭. ದಾಲಚಿನ್ನಿ : ಕಲಬೆರಕೆ ವಸ್ತು : ಕ್ಯಾಸಿಯಾ ಸಸ್ಯದ ತೊಗಟೆ

ಪರೀಕ್ಷಿಸುವ ವಿಧಾನ : ಒಂದು ತುಂಡು ಮಾದರಿಯನ್ನು ತೆಗೆದುಕೊಂಡು ಬಾಯಿ ಯಲ್ಲಿ ಹಾಕಿಕೊಂಡು ಜಗಿಯಿರಿ. ದಾಲ ಚಿನ್ನಿಗೆ ಅದರ ರುಚಿ ಹಾಗೂ ವಾಸನೆ ಇರುತ್ತವೆ.

೮. ಲವಂಗ : ಕಲಬೆರಕೆ ವಸ್ತು : ಎಣ್ಣೆ ತೆಗೆದ ಲವಂಗ, ಹಾಗೂ ಕಡ್ಡಿಗಳು.

ಪರೀಕ್ಷಿಸುವ ವಿಧಾನ : ಎಣ್ಣೆ ತೆಗೆದ ಲವಂಗ ಸ್ವಲ್ಪ ಸಣ್ಣಗಿರುತ್ತದೆ, ಹೆಚ್ಚು ಸುಕ್ಕುಗಟ್ಟಿರುತ್ತದೆ. ಅದೇ ಆಗ ಕಾಸಿ ಆರಿಸಿದ ನೀರಿನಲ್ಲಿ ತೇಲುತ್ತದೆ. ಕಡ್ಡಿಗಳನ್ನು ನೋಡಿ ತಿಳಿದುಕೊಳ್ಳಬಹುದು.

೯. ಚಹಾಪುಡಿ: ಅ) ಕಲಬೆರಕೆ ವಸ್ತು : ಬಣ್ಣ ಹಾಕಿದ ಮರದ ಪುಡಿ. ಪರೀಕ್ಷಿಸುವ ವಿಧಾನ : ಒಂದು ಗಾಜಿನ ಲೋಟದಲ್ಲಿ ನೀರು ತೆಗೆದುಕೊಳ್ಳಿ. ನೀರಿನ ಮೇಲೆ ಸ್ವಲ್ಪ ಚಹಾಪುಡಿ ಮಾದರಿಯನ್ನು ಹರಡಿರಿ. ಕಪ್ಪು ಬಣ್ಣ ನೀರಿನಲ್ಲಿ ಕರಗಲು ಪ್ರಾರಂಭಿಸುತ್ತದೆ ಹಾಗೂ ಮರದ ಪುಡಿ ನೀರಿನ ಮೇಲೆ ತೇಲುತ್ತದೆ.

ಆ) ಕಲಬೆರಕೆ ವಸ್ತು : ಕಬ್ಬಿಣದ ಪುಡಿ

ಪರೀಕ್ಷಿಸುವ ವಿಧಾನ : ಚಹಾಪುಡಿಯ ಮಾದರಿಯಲ್ಲಿ ಚುಂಬಕವನ್ನು ಹೊರಳಾಡಿಸಿ ತೆಗೆಯಿರಿ. ಕಬ್ಬಿಣದ ಪುಡಿ ಚುಂಬಕಕ್ಕೆ ಮೆತ್ತಿಕೊಳ್ಳುತ್ತದೆ.

೧೦. ಹಾಲು: ಅ) ಕಲಬೆರಕೆ ವಸ್ತು: ನೀರು.

ಪರೀಕ್ಷಿಸುವ ವಿಧಾನ : ಗಾಜಿನ ಫಲಕದ ಮೇಲೆ ಹನಿ ಹಾಲನ್ನು ಹಾಕಿ, ಗಾಜಿನ ಫಲಕ ವನ್ನು ಓರೆಯಾಗಿ ಹಿಡಿಯಿರಿ. ಹಾಲಿನ ಹನಿ ತೀವ್ರವಾಗಿ ಕೆಳಮುಖವಾಗಿ ಚಲಿಸುತ್ತದೆ ಹಾಗೂ ಅದರ ಹಿಂದಿನ ಬಿಳಿ ಪರೆ ಚನ್ನಾಗಿ ಕಾಣುವುದಿಲ್ಲ.

ಆ) ಕಲಬೆರಕೆ ವಸ್ತು : ಪಿಷ್ಟ

ಪರೀಕ್ಷಿಸುವ ವಿಧಾನ : ಪ್ರನಾಳದಲ್ಲಿ ೨-೩ ಮಿಲೀ ಹಾಲಿನ ಮಾದರಿಯನ್ನು ತೆಗೆದು ಕೊಂಡು ಅದಕ್ಕೆ ಒಂದೆರಡು ಹನಿ ಅಯೋಡಿನ್ ದ್ರಾವಣವನ್ನು ಹಾಕಿ ಕಲಕಿಸಿರಿ. ಆಗ ನೀಲಿ ಬಣ್ಣ ಗೋಚರಿಸುತ್ತದೆ.

೧೧. ಸಾಸಿವೆ ಎಣ್ಣೆ : ಕಲಬೆರಕೆ ವಸ್ತು: ದತ್ತೂರಿ ಬೀಜದೆಣ್ಣೆ.

ಪರೀಕ್ಷಿಸುವ ವಿಧಾನ : ಪ್ರನಾಳದಲ್ಲಿ ಸ್ವಲ್ಪ ಸಾಸಿವೆ ಎಣ್ಣೆ ತೆಗೆದುಕೊಳ್ಳಿ. ಅದಕ್ಕೆ ಸ್ವಲ್ಪ ಹೈಡ್ರೋಕ್ಲೋರಿಕ್ ಆಮ್ಲ ಸೇರಿಸಿ ಪ್ರನಾಳವನ್ನು ಕಿ ನಿಮಿಷ ಕಾಯಿಸಿರಿ. ಕೆಂಪು ಮಿಶ್ರಿತ ಕಂದು ಬಣ್ಣದ ಬಳೆ ಗೋಚರಿಸುತ್ತವೆ.

೧೨. ಜೇನು ತುಪ್ಪ : ಕಲಬೆರಕೆ ವಸ್ತು : ಬೆಲ್ಲದ ಪಾಕ.

ಪರೀಕ್ಷಿಸುವ ವಿಧಾನ : ಅ) ಅರಳೆ ಬತ್ತಿಯನ್ನು ತಯಾರಿಸಿ ಜೇನಿನಲ್ಲಿ ಅದ್ದಿರಿ. ಅನಂತರ ಅದಕ್ಕೆ ದೀಪ ಹಚ್ಚಿರಿ. ಅದು ಉರಿಯುವಾಗ ಚಟಪಟ ಎಂದು ಶಬ್ದ ಮಾಡುತ್ತದೆ. ಜೇನು ಶುದ್ಧವಾಗಿದ್ದರೆ ಶಾಂತವಾಗಿ ಉರಿಯುತ್ತದೆ.

ಆ) ಗಾಜಿನ ಲೋಟದಲ್ಲಿ ಮುಕ್ಕಾಲು ಭಾಗ ನೀರು ಹಾಕಿರಿ. ಅನಂತರ ಅದಕ್ಕೆ ಒಂದು ಹನಿ ಜೇನು ಹಾಕಿರಿ. ಹನಿ ತಳ ಸೇರುವುದರೊಳಗಾಗಿ ಕರಗಿ ಹೋಗುತ್ತದೆ. ಜೇನು ಶುದ್ಧವಾಗಿದ್ದರೆ ತಳದಲ್ಲಿ ಕರಗದೆ ಸ್ವಲ್ಪ ಹೊತ್ತು ಹಾಗೆಯೇ ಉಳಿಯುತ್ತದೆ.

ಇ) ಶುದ್ಧ ಜೇನನ್ನು ನಾಯಿ ತಿನ್ನುವುದಿಲ್ಲ.

೧೩. ಕೇಸರಿ : ಕಲಬೆರಕೆ ವಸ್ತು : ಹೂವಿನ ಪಕಳೆ ತುಂಡುಗಳು. ರಂಗು ಹಾಕಿದ ಮುಸುಕಿನ ಜೋಳದ ಜುಟ್ಟಿನ ತುಂಡುಗಳು.

ಪರೀಕ್ಷಿಸುವ ವಿಧಾನ : ಅ) ಗಾಜಿನ ಪಾತ್ರೆಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಂಡು, ಕೇಸರಿಯ ಮಾದರಿಯನ್ನು ಹಾಕಿ. ನಿಷಿದ್ಧ ಬಣ್ಣವಿದ್ದರೆ ಅದು ನೀರಿನಲ್ಲಿ ಲೀನಿಸಿ ಸ್ವಲ್ಪ ಸಮಯದ ನಂತರ ಬಣ್ಣ ಲೀನವಾಗುವುದು ನಿಂತು ಬಿಡುತ್ತದೆ. ಶುದ್ಧ ಕೇಸರಿ ಇದ್ದರೆ ಅದರಲ್ಲಿಯ ನೈಸರ್ಗಿಕ ಬಣ್ಣವು ಮುಗಿಯುವವರೆಗೆ ಅದು ಲೀನವಾಗುತ್ತಲೇ ಹೋಗುತ್ತದೆ. ಹಾಗೂ ಕೇಸರಿಯ ವಾಸನೆಯೂ ಬರುತ್ತದೆ.

ಆ) ಅಸಲಿ ಕೇಸರಿಯನ್ನು ಹಿಸುಕು ಪುಡಿಮಾಡುವುದು ಸ್ವಲ್ಪ ಕಷ್ಟ. ನಕಲಿ ಕೇಸರಿಯನ್ನು ಸರಳವಾಗಿ ಹಿಸುಕಿ ಪುಡಿ ಮಾಡಬಹುದು.

೧೪. ಶುಂಠಿ : ಕಲಬೆರಕೆ ವಸ್ತು: ಗೋಡೆಗೆ ಹಚ್ಚುವ ಬಿಳಿ ಸ್ನೋಸೆಮ್ ಸುಣ್ಣ.

ಪರೀಕ್ಷಿಸುವ ವಿಧಾನ : ಲೋಟದಲ್ಲಿ ನೀರು ತೆಗೆದುಕೊಂಡು, ಒಂದೆರಡು ತುಂಡು ಶುಂಠಿಯನ್ನು ನೀರಿನಲ್ಲಿ ನೆನೆಯಿಸಿ. ಅನಂತರ ಶುಂಠಿಯ ಮೇಲೆ ಬೆರಳಿನಿಂದ ತಿಕ್ಕಿರಿ. ನಿಮ್ಮ ಬೆರಳಿಗೆ ಸುಣ್ಣದ ಲೇಪನವಾಗುತ್ತದೆ.

೧೫. ಇಂಗು: ಕಲಬೆರಕೆ ವಸ್ತು: ಗೋಂದು, ಜೇಡಿಮಣ್ಣು, ನಿಷಿದ್ಧ ಬಣ್ಣ, ಪಿಷ್ಠ ಪದಾರ್ಥ.

ಪರೀಕ್ಷಿಸುವ ವಿಧಾನ : ಅ) ಗಾಜಿನ ಲೋಟದಲ್ಲಿ ನೀರು ತೆಗೆದುಕೊಳ್ಳಿ. ಅದಕ್ಕೆ ಒಂದು ತುಂಡು ಇಂಗು ಹಾಕಿ ಕಲಕಿಸಿ. ಇಂಗು ಶುದ್ಧವಾಗಿದ್ದರೆ ಬಿಳಿ ಬಣ್ಣದ ದ್ರಾವಣ ಗೋಚರಿಸುತ್ತದೆ. ಕಲಬೆರಕೆಯಾಗಿದ್ದರೆ ಭಾರವಾದ ವಸ್ತುಗಳು ತಳಸೇರುತ್ತವೆ.

ಆ) ಚಿಮ್ಮಟದ ಸಹಾಯದಿಂದ ಒಂದು ತುಂಡು ಇಂಗನ್ನು ಹಿಡಿದು ದೀಪಕ್ಕೆ ಹಿಡಿಯಿರಿ. ಇಂಗು ಶುದ್ಧವಾಗಿದ್ದರೆ ಪತ್ತಿ ಉರಿಯುತ್ತದೆ ಇಲ್ಲದಿದ್ದರೆ ಸರಿಯಾಗಿ ಉರಿಯುವುದಿಲ್ಲ.

೧೬. ತುಪ್ಪ : ಕಲಬೆರಕೆ ವಸ್ತು : ಡಾಲ್ಡಾ

ಪರೀಕ್ಷಿಸುವ ವಿಧಾನ: ಪ್ರನಾಳದಲ್ಲಿ ಸ್ವಲ್ಪ ಮಾದರಿಯನ್ನು ತೆಗೆದುಕೊಳ್ಳಿ ಅದಕ್ಕೆ ೫-೧೦ ಹನಿ ಹೈಡ್ರೋಕ್ಲೋರಿಕ್ ಆಮ್ಲ ಹಾಗೂ ಸ್ವಲ್ಪ ಸಕ್ಕರೆಯನ್ನು ಹಾಕಿ ಕಾಯಿಸಿರಿ. ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ.

ಕಲಬೆರಕೆ ಆಹಾರವನ್ನು ಸೇವಿಸುವುದರಿಂದಾಗುವ ಕೆಟ್ಟ ಪರಿಣಾಮಗಳು

ಕ್ರ. ಸಂ.	ಕಲಬೆರಕೆ ಪದಾರ್ಥ	ಆಹಾರ ವಸ್ತು	ಕಾಯಿಲೆ/ ಆರೋಗ್ಯಹಾನಿ
೧.	ದತ್ತೂರಿ ಬೀಜ	ಸಾಸಿವೆ	ಸಾಂಕ್ರಾಮಿಕ ಜಲೋದರ
೨.	ದತ್ತೂರಿ ತೈಲ	ತಿನ್ನುವ ಎಣ್ಣೆ	ದೃಷ್ಟಿನಾಶ, ಹೃದಯಾಘಾತ
೩.	ಪಪ್ಪಾಯಿ ಬೀಜ	ಮೆಣಸು	ಜೀರ್ಣಾಂಗ ತೊಂದರೆ
೪.	ಕೋಲ್ ಟಾರ್ ಬಣ್ಣ ಕಳಪೆ ಬಣ್ಣಗಳು	ಐಸ್ ಕ್ರೀಮ್, ಸಿಹಿ ತಿಂಡಿ, ಪೆಪ್ಪರಮಿಂಟ್	ಹೊಟ್ಟೆ ಹುಣ್ಣು, ಕ್ಯಾನ್ಸರ್
೫.	ಮೆಟಾನಿಲ್ ಹಳದಿ	ಅರಿಷಿಣ, ಸಂಡಿಗೆ, ಐಸ್ ಕ್ರೀಂ ಸಿಹಿ ಪದಾರ್ಥಗಳು	ಕ್ಯಾನ್ಸರ್, ಅಜೀರ್ಣ, ರಕ್ತಹೀನತೆ, ಪಾಶ್ವವಾಯು
೬.	ಹುಣಸೆ ಬೀಜದ ಪುಡಿ ಕಬ್ಬಿಣ ಚೂರು, ಮರದ ಪುಡಿ	ಚಹಪುಡಿ	ಜೀರ್ಣಾಂಗದ ತೊಂದರೆ
೭.	ಕ್ಯಾಸಿಯಾ ಚಕ್ಕೆ	ದಾಲಚಿನ್ನಿ ಚಕ್ಕೆ	ಹೊಟ್ಟೆನೋವು
೮.	ಮೀಥೈಲ ಆಲ್ಕೋಹಾಲ್	ಹೆಂಡ, ಸರಾಯಿ, ಔಷಧ	ಕುರುಡುತನ, ಸಾವು
೯.	ಮರದಪುಡಿ, ಬಣ್ಣ	ಮೆಣಸಿನ ಪುಡಿ	ಹೊಟ್ಟೆನೋವು, ಕ್ಯಾನ್ಸರ್.
೧೦.	ಸೀಸ	ನೈಸರ್ಗಿಕ ಹಾಗೂ ಸಂಸ್ಕರಿಸಿದ ಆಹಾರ	ನಿದ್ರೆ ಬಾರದ ಸ್ಥಿತಿ, ಮೆದುಳಿಗೆ ಜಖಂ ಮಲಬದ್ಧತೆ, ಗರ್ಭಿಣಿ ಸ್ತ್ರೀಯರಿಗೆ ಗರ್ಭಪಾತ.
೧೧.	ಲಂಕಿ ಬೇಳೆ	ತೊಗರಿಬೇಳೆ	ಪಾರ್ಶ್ವವಾಯು, ಗೂನು ಬೆನ್ನು,
೧೨.	ಕಲ್ಲು, ಮಣ್ಣು, ಹೆಂಟೆ	ಅಕ್ಕಿ, ಗೋಧಿ, ರಾಗಿ, ಜೋಳ	ಹೊಟ್ಟೆನೋವು, ಅಪೆಂಡಿಸೈಟಿಸ್
೧೩.	ಡಿಡಿಟಿ, ಎಂಡ್ರಿನ್, ಡೀಲ್ ಡ್ರಿನ್, (ಕೀಟನಾಶಕಗಳು)	ಬೆಳೆಗಳಿಗೆ ಸಿಂಪಡಿಸುತ್ತಾರೆ	ಕ್ಯಾನ್ಸರ್, ಕೈಕಾಲುಗಳಲ್ಲಿ ನೋವು.
೧೪.	ಬಿ.ಇ.ಓ. ಇರುವ ಎಣ್ಣೆ	ರಸ್ನಾ, ಟೋರಿನೋ, ಗೋಲ್ಡಸ್ಪಾಟ್	ಅಪಾಯಕಾರಿ ರಾಸಾಯನಿಕ

ಮಕ್ಕಳ ರಾಜ್ಯ

ಮುಳಿಯ ರಾಘವಯ್ಯ
ನಂ.೩, ೮ನೇ ಬ್ಲಾಕ್
ಎಸ್‌ಬಿಎಂ ಕಾಲೋನಿ ಶ್ರೀರಾಂಪುರ
ಮೈಸೂರು-೫೭೦ ೦೨೩.

'ಮೈಕ್ರೋಲಿಂಕ್' ಸಂಸ್ಥೆಯ ಥಳಥಳಿಸುವ ಪ್ರಧಾನ ಕಾರ್ಯಾಲಯದೊಳಗಡೆ ನಾವು ಹಾಯ್ದು ಹೋಗುತ್ತಿರುವಾಗ ''ಹೊಸ ಸಂಸ್ಥೆಯೊಂದರ ನಿರ್ಮಾಣಕಾರ್ಯ ಮನಸ್ಸಿಗೆ ಮುದ ಕೊಡುವ ಕೆಲಸ'' ಎನ್ನುತ್ತಾರೆ ಆ್ಯಲನ್ ಮಾರ್ಟಿನ್‌ಸನ್. ಸುತ್ತಲಿನ ದೃಶ್ಯ 'ಸಿಲಿಕಾನ್ ಕಣಿವೆ'ಯನ್ನು ನೆನಪಿಸುತ್ತದೆ. ಸಾದಾ ಉಡುಗೆಯ ಅನೇಕ ಯುವಕ ಯುವತಿಯರು ಬಿಡುವಿಲ್ಲದೆ ಕಂಪ್ಯೂಟರ್‌ಗಳ ಮುಂದೆ ಕುಳಿತುಕೊಂಡು ಸಾಫ್ಟ್‌ವೇರ್‌ಗಳ ವಿಕಾಸದಲ್ಲಿ ಮಗ್ನರಾಗಿದ್ದಾರೆ. ಅವರು ದುಡಿಯುತ್ತಿರುವ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ಗಾತ್ರ ಕಳೆದ ಎರಡು ವರ್ಷಗಳಲ್ಲಿ ಮೂರುಪಟ್ಟು ಹೆಚ್ಚಿದೆ. ಅದರ ವಾರ್ಷಿಕ ಆದಾಯ ಈಗ ೨೦ ಮಿಲಿಯ ಅಮೆರಿಕನ್ ಡಾಲರ್‌ಗಳು (ಸುಮಾರು ರೂ.೩೧೫ ಕೋಟಿ).

ಆದರೆ ಈಗ ನಾವಿರುವುದು ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಲ್ಲ; 'ಮೈಕ್ರೊಲಿಂಕ್' ಸಂಸ್ಥೆ ಇರುವುದು ಎಸ್ಟೋನಿಯಾದ ರಾಜಧಾನಿ ಟ್ಯಾಲಿನ್ ನಗರದ ಹೊರವಲಯದಲ್ಲಿ. ಸಂಸ್ಥೆಯ ನಿರ್ದೇಶಕ, ಕಂದು ಗೂದಲಿನ ಕೃಶಾಂಗ ಮಾರ್ಟಿನ್‌ಸನ್ ಅವರ ವಯಸ್ಸು-ಕೇವಲ ೩೩ ವರ್ಷ.

''ಕಳೆದ ೧೮ ತಿಂಗಳುಗಳಲ್ಲಿ ನಾವು ೧೫ ಹೊಸ ಉಪಸಂಸ್ಥೆಗಳನ್ನು ತೆರೆದಿದ್ದೇವೆ. ಮುಂದಿನ ವರ್ಷ ನಮ್ಮ ಸಂಸ್ಥೆಯ ಗಾತ್ರ ದ್ವಿಗುಣಗೊಳ್ಳುವ ಸಂಭವವಿದೆ. ಆಗ ನಮ್ಮ ದೃಷ್ಟಿ ಬಾಲ್ಟಿಕ್ ವಲಯವನ್ನು ದಾಟಿ ಹಾಯಲಿದೆ'' ಎನ್ನುತ್ತಾರೆ ಮಾರ್ಟಿನ್‌ಸನ್.

ಮಾರ್ಟಿನ್‌ಸನ್ ಅವರ ಈ ಉತ್ಸಾಹ ಅವರ ದೇಶವು ಹೊಂದುತ್ತಿರುವ ಪರಿವರ್ತನೆಯ ಸಂಕೇತ. ಸೋವಿಯತ್ ಒಕ್ಕೂಟದ ಪತನಾನಂತರ ಅಸ್ತಿತ್ವಕ್ಕೆ ಬಂದ ಎಲ್ಲ ರಾಷ್ಟ್ರಗಳ ಪೈಕಿ, ಎಸ್ಟೋನಿಯಾದಲ್ಲಿ ಮಾತ್ರ, ತನ್ನ ತೀವ್ರಗತಿಯ ಸುಧಾರಣಾನೀತಿಯ ದೆಸೆಯಿಂದ, ಅರ್ಥವ್ಯವಸ್ಥೆಯಲ್ಲಿ ಗಣನೀಯ ವಿಕಾಸ, ಜೀವನಮಟ್ಟದಲ್ಲಿ ಆಶ್ಚರ್ಯಕರ ಅಭಿವೃದ್ಧಿ ಮತ್ತು ಸದವಕಾಶಗಳ ವಿಸ್ತರಣೆ ಕಂಡುಬಂದಿವೆ.

''ಎಸ್ಟೋನಿಯಾದ ಜನರು ತಮ್ಮ ಸಾಧನೆಯ ವಿಷಯದಲ್ಲಿ ಗರ್ವಪಟ್ಟರೆ ಏನೂ ತಪ್ಪಲ್ಲ'' ಎನ್ನುತ್ತಾರೆ. ವಾಶಿಂಗ್ಟನ್ ಸ್ಥಿತ 'ಕಾರ್ನೆಗೀ ಅಂತಾರಾಷ್ಟ್ರೀಯ ಶಾಂತಿ ದತ್ತಿಸಂಸ್ಥೆಯಲ್ಲಿರುವ ಬಾಲ್ಟಿಕ್ ಪ್ರದೇಶದ ವಿಶೇಷಜ್ಞ ಆ್ಯನಟಾಲ್ ಲೀವನ್.

ಎಸ್ಟೋನಿಯಾದ ಅಗ್ಗದ ತೆರಿಗೆ ದರಗಳು ವಿದೇಶೀ ಬಂಡವಾಳದ ಮಹಾಪೂರವನ್ನೇ ಆಕರ್ಷಿಸಿದೆ. ಈಗ ಅಲ್ಲಿರುವಷ್ಟು ಸಂಚಾರೀ ದೂರವಾಣಿಗಳು ಮತ್ತು ಅಂತರ್ಜಾಲ (internet) ಸಂಪರ್ಕಸುತ್ತಮುತ್ತಲಿನ ಇತರ ರಾಷ್ಟ್ರಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ.

ಇನ್ನೂ ಅಚ್ಚರಿಯ ವಿಷಯವೆಂದರೆ ಎಸ್ಟೋನಿಯಾದ ಹೊಸ ಮುಂದಾಳುಗಳಲ್ಲಿ ಕೆಲವರು ಆ್ಯಲನ್ ಮಾರ್ಟಿನ್‌ಸನ್ ಅವರಿಂದಲೂ ಚಿಕ್ಕವರು. ''ನಾವು ಸ್ವತಂತ್ರರಾದಾಗ ಒಂದೋ ಅನುಭವವುಳ್ಳ, ಆದರೆ ಅನಪೇಕ್ಷಿತ

ಅಕ್ಟೋಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಫರ್ಗುಸ್ ಬೋರ್ಡೆವಿಚ್ ರವರ ''ದ ಕಂಟ್ರಿ ರನ್ ಬೈ ಕಿಡ್ಸ್ ಲೇಖನದ ಕನ್ನಡ ಅನುವಾದ

ರಾದ ಹಿರಿಯರನ್ನು ಅಥವಾ ಅನುಭವರಹಿತರಾದರೂ ಪರಿವರ್ತನೆಗಳನ್ನು ಸ್ವಾಗತಿಸುವ ಪ್ರಪಾಠಿ ಯುವಜನರನ್ನು ರಾಷ್ಟ್ರನೌಕೆಯ ಕರ್ಣಧಾರರನ್ನಾಗಿ ಆಯಬೇಕಿತ್ತು. ನಾವು ಯುವಕರನ್ನೇ ಆಯ್ದುಕೊಂಡೆವು'' -ಎನ್ನುತ್ತಾನೆ ಒಬ್ಬ ೨೭ರ, ಒರಟು-ಸುಂದರ, ಬಿಡುಗೂದಲಿನ ಜನಪ್ರಿಯ ಯುವ ರಾಜಕಾರಣಿ ಹಾಗೂ ವೃತ್ತಿಶಾಲಾ ಶಿಕ್ಷಕ.

ಸೋವಿಯತ್ ಸರ್ವಾಧಿಕಾರ ಕೊನೆಗೊಂಡಾಗ, ಒಂದು ಬಹುವಸ್ತು ಬಂಡಸಾಲೆಯಲ್ಲಿ ಮೇಜೊಂದನ್ನು ಬಾಡಿಗೆ ಹಿಡಿದು, ರೂಬಲ್‌ಗಳನ್ನು ವಿದೇಶೀ ಮುದ್ರೆಗಳಿಗೆ ವಿನಿಮಯ ಮಾಡುತ್ತಿದ್ದ ಇಬ್ಬರು ಮಿತ್ರರೊಡನೆ, ೪೩ ವರ್ಷ ವಯಸ್ಸಿನ ಯೂರಿ ಮಾಯಿಸ್ ಸೇರಿಕೊಂಡ. ಮಾಯಿಸ್, ಮೊದಲು ಕಾರ್ಖಾನೆಯೊಂದರಲ್ಲಿ ಮೇಲ್ವಿಚಾರಕನಾಗಿದ್ದ. ಸಕ್ರಮವಾದ ಬ್ಯಾಂಕ್ ಕಾನೂನುಗಳೇ ಇದ್ದಿಲ್ಲವೆನ್ನಬಹುದಾದ ಆ ಕಾಲದಲ್ಲಿ ಅಸಂಖ್ಯ 'ಬ್ಯಾಂಕ್'ಗಳು ಅಣಬೆಗಳಂತೆ ಅಲ್ಲಲ್ಲಿ ತಲೆಯೆತ್ತುತ್ತಿದ್ದುವು. ಕೆಲವಂತೂ ಹಳೆಯ ಗ್ಯಾರೇಜಿನ ಮೂಲೆಯಲ್ಲಿ ಒಂದೆರಡು ಮೇಜು, ಒಂದು ಹಣದ ಪೆಟ್ಟಿಗೆ- ಇವಿಷ್ಟೇ.

''ತಿಂಗಳು ತಿಂಗಳೂ ಹಲವು ಬ್ಯಾಂಕ್‌ಗಳು ದಿವಾಳಿಯಾಗುತ್ತಿದ್ದುವು. ಆ ಕಾಲದಲ್ಲಿ ನಾವು ಕಂಪ್ಯೂಟರ್‌ಗಳಲ್ಲಿ, ಆಧುನಿಕ ತಂತ್ರವಿದ್ಯೆಯಲ್ಲಿ ಮತ್ತು ನಿರ್ವಹಣಾ ತರಬೇತಿಯಲ್ಲಿ ಹಣ ತೊಡಗಿಸಿಕೊಂಡೆವು. ವಿಶ್ವವಿದ್ಯಾನಿಲಯಗಳಿಂದ ಆಗಷ್ಟೇ ಹೊರಬಿದ್ದ ಯುವಜನರನ್ನು ಆಯ್ದುಕೊಂಡೆವು'' -ಎನ್ನುತ್ತಾನೆ. ಅಚ್ಚುಕಟ್ಟುತನದ, ಚೂಪುಗಣ್ಣಿನ, ಗಿಡ್ಡಗೂದಲಿನ ಮಾಯಿಸ್.

ಮಾಯಿಸ್ ಮತ್ತು ಸಂಗಡಿಗರ 'ಹಂಸಾ ಬ್ಯಾಂಕ್'ನ ಆರಂಭದ ಬಂಡವಾಳ ೩೦೦೦ ಡಾಲರ್‌ಗಳು. (ಸುಮಾರು ರೂ.೧ ಲಕ್ಷ ೩೫ ಸಾವಿರ). ಶೀಘ್ರದಲ್ಲಿಯೇ ಅದು ಸ್ವದೇಶೀ ಮಾರುಕಟ್ಟೆಯ ಶೇಕಡಾ ೬೦ ಪಾಲನ್ನು ಆಕ್ರಮಿಸಿಕೊಂಡಿತು. ೧೯೯೮ರಲ್ಲಿ ಮಾಯಿಸ್ ಮತ್ತು ಅವನ ಸಂಗಡಿಗರು ಹಂಸಾಬ್ಯಾಂಕನ್ನು ಸ್ವೀಡನ್ನಿನ ಆರ್ಥಿಕ ಸಂಸ್ಥೆಯೊಂದಕ್ಕೆ ೬೪೦ ಮಿಲಿಯನ್ ಡಾಲರ್‌ಗಳಿಗೆ (ರೂ.೨,೮೮೦ ಕೋಟಿ) ಮಾರಾಟ ಮಾಡಿದರು. ಕಳೆದ ವರ್ಷ ಟ್ಯಾಲಿನ್ ನಗರದ ಮಹಾಪೌರನಾಗಿ ಮಾಯಿಸ್ ಆರಿಸಲ್ಪಟ್ಟ. ಸಾರ್ವಜನಿಕ ಸೇವೆಗಳನ್ನು ಖಾಸಗೀಕರಿಸುವುದು, ಅನಗತ್ಯ ಆಸ್ತಿಗಳನ್ನು ವಿಕ್ರಯಿಸುವುದು, ಅಧಿಕಾರಶಾಹಿಯನ್ನು ನೇರಗೊಳಿಸುವುದು ಇವೇ ಮೊದಲಾದವು ಅವನ ಸುಧಾರಣಾ ಯೋಜನೆಗಳಲ್ಲಿ ಕೆಲವು. ''ನಮ್ಮಲ್ಲಿ ನೌಕರರ ಸಂಖ್ಯೆ ಏನೋ ಬೇಕಾದಷ್ಟಿದೆ. ಆದರೆ ಪ್ರಾಮಾಣಿಕವಾಗಿ ಶಕ್ತಿಮೀರಿ ದುಡಿಯುವವರು ಅತಿ ಕಡಮೆ. ಹೆಚ್ಚಿನವರನ್ನು ಸುಧಾರಿಸಬಹುದು. ಅವರ ಜೀವನಶೈಲಿಯನ್ನು ಪರಿವರ್ತಿಸಿಕೊಳ್ಳಲು ಸ್ವಲ್ಪ ಪ್ರೋತ್ಸಾಹ [illegible] ಅಷ್ಟೆ. ಅದರಿಂದ ಹೆಚ್ಚಿನ ಲಾಭ ಪಡೆಯುವವರು ಅವರೇ'' ಎನ್ನುತ್ತಾನೆ, ಮಾಯಿಸ್.

ಮಾಯಿಸ್ 'ಆಳುತ್ತಿರುವ' ನಗರಕ್ಕೆ ಯೌವನೋತ್ಸಾಹದ ಕಳೆಯಿದೆ. ಒಂದೆಡೆ ಟ್ಯಾಲಿನ್ ನಗರದ ಅಗಲಕಿರಿದಾದ ಕಲ್ಲು ಹಾಸಿದ ಓಣಿಗಳಲ್ಲಿ ''ಧಡೂತಿ ಮಾರ್ಗರೆಟ್ ''ಪಾಕಶಾಲೆಯ ಇಣುಕು ನೋಟ ಮುಂತಾದ ಆಕರ್ಷಕ ಹೆಸರುಗಳುಳ್ಳ ಮಧ್ಯಕಾಲೀನ ಗೋಪುರೋಪೇತ ಕಟ್ಟಡಗಳು ರಾರಾಜಿಸುತ್ತಿದ್ದರೆ, ಇನ್ನೊಂದೆಡೆ ಮನೋಹರವಾದ ಅನೇಕ ಪುರಾತನ ಸೌಧಗಳು ಹೋಟೆಲುಗಳಿಗಾಗಿ, ಅಂಗಡಿಗಳಿಗಾಗಿ, ಕಛೇರಿಗಳಿಗಾಗಿ ಆಧುನೀಕೃತಗೊಳ್ಳುತ್ತಿವೆ.

▪

ಸೋವಿಯತ್ ಕಾಲದ ಮಬ್ಬು ಗವಿದ ಗೃಹಸಮುಚ್ಚಯಗಳು ಇನ್ನೂ ಹಲವೆಡೆ ''ಭೂತಬಂಗಲೆ''ಗಳಂತೆ ನಿಂತಿವೆ. ಇಷ್ಟಾದರೂ ಇತರ ಸೋವಿಯತ್ ಅನಂತರದ ಪಟ್ಟಣಗಳಲ್ಲಿ ಯಥೇಚ್ಛವಾಗಿರುವ ಭಿಕ್ಷುಕರು ಮತ್ತು ಬೀದಿಪೋರರು ಇಲ್ಲಿ ಕಂಡು ಬರುವುದಿಲ್ಲ.

ಸರಕಾರಿ ಕಛೇರಿಗಳಲ್ಲಿ, ವ್ಯಾಪಾರ ಕೇಂದ್ರಗಳಲ್ಲಿ, ಹೊಟೇಲುಗಳಲ್ಲಿ ಮತ್ತು ಇನ್ನಿತರ ಮಳಿಗೆಗಳಲ್ಲಿ ದುಡಿಯುತ್ತಿರುವ ಉತ್ಸಾಹಭರಿತ, ಹಸನ್ಮುಖದ ಯುವಜನರು ಈಗಷ್ಟೇ ಶಾಲಾಕಾಲೇಜುಗಳಿಂದ ಹೊರಬಂದವರಂತೆ ಕಾಣುತ್ತಾರೆ. ಅದು ಸ್ವಲ್ಪ ಮಟ್ಟಿಗೆ ನಿಜವೂ ಹೌದು. ಕಮ್ಯೂನಿಸಮ್ಮಿನ ದಬ್ಬಾಳಿಕೆಯಿಂದ ಕೆಲವೇ ವರ್ಷಗಳ ಹಿಂದೆ ಮುಕ್ತಿಗೊಂಡ ದೇಶವು ಇದು ಎಂದರೆ ಅಚ್ಚರಿಯುಂಟಾಗುತ್ತದೆ.

ಪ್ರಥಮ ಜಾಗತಿಕ ಯುದ್ಧದ ಅನಂತರ, ಲಾಟ್ವಿಯಾ ಮತ್ತು ಲಿಥುವೇನಿಯಾ ರಾಷ್ಟ್ರಗಳಂತೆ ಎಸ್ಟೋನಿಯಾ ಸಹ ಸ್ವತಂತ್ರವಾದರೂ, ಅದು ಕ್ರಮವಾಗಿ ಸೋವಿಯತ್ ರಷ್ಯಾ, ನಾಜೀ ಜರ್ಮನಿ ಮತ್ತು ಪುನಃ ಇನ್ನೊಮ್ಮೆ ಸೋವಿಯತ್ ಸರ್ವಾಧಿಪತ್ಯಕ್ಕೆ ಗುರಿಯಾಗಿ ಯಥೇಚ್ಛವಾಗಿ ಕೊಳ್ಳೆಹೊಡೆಯಲ್ಪಟ್ಟಿತ್ತು. ಯುದ್ಧಪೂರ್ವದ ಜನಸಂಖ್ಯೆಯ ಸುಮಾರು ಶೇಕಡಾ ೧೫, ಅಂದರೆ ೧೬೦,೦೦೦ -೧೯೦,೦೦೦ ಜನರು ಹತ್ಯೆ, ಇಲ್ಲವೆ ಕೈದು ಮಾಡಲ್ಪಟ್ಟಿದ್ದರು. ಅನೇಕರು ದೇಶವನ್ನೇ ಬಿಟ್ಟು ಓಡಿಹೋಗಿದ್ದರು.

ಬಾಲ್ಟಿಕ್ ವಲಯದ ಈ ಮೂರು ರಾಷ್ಟ್ರಗಳು ''ಲೋಹ ಜವನಿಕೆ''ಯ ಹಿಂದೆ ಅದೃಶ್ಯವಾದುವು. ''ಉಳಿದ ಜಗತ್ತು ನಮ್ಮನ್ನು ಮರೆತರೂ ನಾವು ನಿರಾಶರಾಗಲಿಲ್ಲ. ಸೋವಿಯತ್ ಒಕ್ಕೂಟವು ಅಮರವಲ್ಲವೆಂದು ನಾವು ಅರಿತಿದ್ದೆವು. ಆದರೆ ಕಾಲ ಬಂದಾಗ ಎಸ್ಟೋನಿಯದಲ್ಲಿ ನಾವು ತಯಾರಾಗಿರುತ್ತೇವೆಯೇ, ಇಲ್ಲವೇ ಎಂಬುದೇ ಯಕ್ಷಪ್ರಶ್ನೆಯಾಗಿತ್ತು''-ಎನ್ನುತ್ತಾರೆ. ೭೧ ವಯಸ್ಸಿನ ರಾಷ್ಟ್ರಾಧ್ಯಕ್ಷ ಲೆನಾರ್ಟ್ ಮೆರಿ. ಗಂಭೀರ ಸ್ವಭಾವದ ವ್ಯಕ್ತಿ ಮೆರಿ, ಬಾಲ್ಯದ ಸ್ವಲ್ಪ ಕಾಲವನ್ನು, ತಮ್ಮ ಕುಟುಂಬದೊಡನೆ ಗಡೀಪಾರಾಗಿ, ಸೈಬೀರಿಯಾದಲ್ಲಿ ಕಳೆದಿದ್ದರು.

ಮಾಸ್ಕೋ ಆಧಿಪತ್ಯದ ವಿರುದ್ಧ ಸಾರ್ವಜನಿಕ ಪ್ರದರ್ಶನಗಳು ೧೯೮೭ರಲ್ಲಿ ಆರಂಭವಾದುವು. ೧೯೯೧ರ ಆಗಸ್ಟ್ ತಿಂಗಳಲ್ಲಿ ಎಸ್ಟೋನಿಯಾ ತನ್ನನ್ನು ಪುನಃ ಸ್ವತಂತ್ರರಾಷ್ಟ್ರವೆಂದು ಘೋಷಿಸಿಕೊಂಡಿತು. ತದನಂತರದ ಮೊದಲ ಸಾರ್ವಜನಿಕ ಮುಕ್ತ ಚುನಾವಣೆ ೧೯೯೨ರ ಸೆಪ್ಟೆಂಬರ್ ಮಾಸದಲ್ಲಿ ನಡೆಯಿತು. ಆಗ ಆರಿಸಲ್ಪಟ್ಟ ಪ್ರಧಾನಿ , ಮಾರ್ಟ್ ಲಾರ್ ಅವರ ವಯಸ್ಸು, ಕೇವಲ ೩೨ ವರ್ಷ!

ಪರಿವರ್ತನೆಗಳು ಒಂದರ ಹಿಂದೆ ಒಂದರಂತೆ ಬಂದುವು. ಹಲವು ಮಂದಿ ಸಮಾಜವಾದಿ ಅಧಿಕಾರಿಗಳನ್ನೊಳಗೊಂಡಂತೆ, ಸೋವಿಯತ್ ರಷ್ಯಾದಲ್ಲಿ ತರಬೇತಿ ಹೊಂದಿದ ಅನೇಕ ನ್ಯಾಯಾಧೀಶರನ್ನು ಬರ್ಖಾಸ್ತು ಮಾಡಲಾಯಿತು. ''ವೃತ್ತಿನಿರತರಾಗಿಯೇ ನಾವು ಅನುಭವ ಪಡೆಯುತ್ತಿದ್ದೆವು. ನಮ್ಮಿಂದ ಬೇಕಾದಷ್ಟು ತಪ್ಪುಗಳಾಗುತ್ತಿದ್ದುವು ನಿಜ. ಆದರೆ ನಮ್ಮಲ್ಲಿ ಉತ್ಸಾಹ ಮತ್ತು ಸೃಜನಶೀಲತೆಗಳಿದ್ದುವು. ನೋಡನೋಡುತ್ತಿದ್ದಂತೆಯೇ ಪರಿಣಾಮಕಾರಿಯಾದ ಪರಿವರ್ತನೆಗಳು ಸಾಧ್ಯವಾದುವು. ಇದ್ದ ಪರಿಸ್ಥಿತಿಯನ್ನು ಬದಲಾಯಿಸುವುದೂ ಒಂದು ಥರದ ವಿನೋದವೆನಿಸುತ್ತಿತ್ತು'' ಎನ್ನುತ್ತಾರೆ. ಸಮಾಜಕಾರ್ಯ ಮಂತ್ರಾಲಯದ ಮುಖ್ಯಸ್ಥರನ್ನಾಗಿ ಆಯಲಾದ,

ಯುವಕ ಕ್ಯಾನ್ಸರ್ ಶಸ್ತ್ರವೈದ್ಯ ಜ್ಯಾನಸ್ ಪಿಕಾನಿ.

ಅಸ್ತವ್ಯಸ್ತ ಆರ್ಥಿಕವ್ಯವಸ್ಥೆ, ಖಾದ್ಯ ವಸ್ತುಗಳ ತೀವ್ರ ಕೊರತೆ ಇತ್ಯಾದಿ ಸ್ವಾತಂತ್ರ್ಯವನ್ನು ಹಿಂಬಾಲಿಸಿಕೊಂಡೇ ಬಂದುವು. ಹಣದುಬ್ಬರ ಪ್ರತಿತಿಂಗಳೂ ೧೦೦ಕ್ಕೆ ೧೦೦ರಷ್ಟು ಏರುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ, ಮಾರ್ಗರೆಟ್ ಥ್ಯಾಚರ್, ರೊನಾಲ್ಡ್ ರೇಗನ್, ಅಮೆರಿಕದ ಮುಕ್ತ ಮಾರುಕಟ್ಟೆಯ ಪ್ರವರ್ತಕ ಮಿಲ್ಟನ್ ಫ್ರೀಡ್‌ಮ್ಯಾನ್ ಮುಂತಾದವರೇ ಅವರಿಗೆ ಆದರ್ಶವಾಗಿದ್ದ ಯುವ ಮುಂದಾಳುಗಳ ಗುಂಪು ರಾಷ್ಟ್ರೀಯ ರಂಗವನ್ನು ಪ್ರವೇಶಿಸಿತು.

''ಸಮಾಜವಾದಕ್ಕೆ ವಿಪರೀತವಾದುದೆಲ್ಲವೂ ಸರಿಯೇ ಎಂದು ನಮ್ಮ ವಾದವಾಗಿತ್ತು. ಮುಕ್ತ ಆರ್ಥಿಕನೀತಿಯೇ ವಿಕಾಸಕ್ಕೆ ನಿಜವಾದ ದಾರಿ ಎಂಬುದು ನಮಗೆ ಮನದಟ್ಟಾಗಿತ್ತು. ಆದುದರಿಂದ ಕೂಡಲೇ ಆ ದಿಸೆಯಲ್ಲಿ ಕಾರ್ಯೋನ್ಮುಖರಾದೆವು'' ಎಂದು ನೆನಪಿಸುಕೊಳ್ಳುತ್ತಾರೆ ಕೆಂಗೂದಲಿನ ಈಗಿನ ಹಣಕಾಸಿನ ಮಂತ್ರಿ ಸಿಯ್ಮವಸ್ ಕಲ್ಲಾಸ್.

ಸರಕಾರೀ ಸ್ವಾಮ್ಯದ ಉದ್ಯಮಗಳನ್ನು ತ್ವರಿತವಾಗಿ ಖಾಸಗೀಕರಿಸಲಾಯಿತು. ಸಾಂಸ್ಥಿಕ ಹಾಗೂ ವೈಯಕ್ತಿಕ ತೆರಿಗೆಯನ್ನು ಏಕರೂಪವಾಗಿ ಶೇಕಡಾ ೨೬ರಂತೆ ವಿಧಿಸಲಾಯಿತು. ಮಾರುಕಟ್ಟೆ ಸುಂಕಗಳನ್ನು ರದ್ದುಗೊಳಿಸಿ ಮುಕ್ತ ವ್ಯಾಪಾರಕ್ಕೆ ಎಡೆ ಮಾಡಿಕೊಡಲಾಯಿತು. ರಷ್ಯಾದ ರೂಬಲ್ ಮೂಲದ ವಿನಿಮಯ ವ್ಯವಸ್ಥೆಯನ್ನು ತೊರೆದು ಜರ್ಮನ್ ಮಾರ್ಕ್‌ನೊಂದಿಗೆ ಹೊಂದಾಣಿಸಿ ಕೊಂಡ ಹೊಸ ಮುದ್ರಾ ವ್ಯವಸ್ಥೆಯನ್ನು ಅಳವಡಿಸಿಕೊಂಡುದು ಎಲ್ಲಕ್ಕಿಂತಲೂ ದಿಟ್ಟ ಹೆಜ್ಜೆಯಾಗಿತ್ತು. ಇದರಿಂದಾಗಿ ಎಸ್ಟೋನಿಯಾ ದಿವಾಳಿಯಾಗುವುದು ಖಂಡಿತ ಎಂದು ರಷ್ಯಾ ದೇಶ ಅಭಿಪ್ರಾಯ ವ್ಯಕ್ತಪಡಿಸಿತ್ತು. ಕಠಿಣ ಮುದ್ರಾವ್ಯವಸ್ಥೆಯನ್ನು (hard currency) ಯನ್ನು ಅಂಗೀಕರಿಸಲು ಎಸ್ಟೋನಿಯಾ ಇನ್ನೂ ಸಿದ್ಧವಾಗಿಲ್ಲ ಎಂದು ಅಂತಾರಾಷ್ಟ್ರೀಯ ಹಣಕಾಸು ಸ್ಥಿರನಿಧಿ (international Monetary Fund) ಎಚ್ಚರನೀಡಿತ್ತು.

ಆದರೆ ವಸ್ತುಸ್ಥಿತಿ ಬೇರೆಯೇ ಆಗಿತ್ತು. ಹಣದುಬ್ಬರ ಇಳಿಮುಖವಾಯಿತು. ವಿದೇಶೀ ಬಂಡವಾಳ ಹರಿದು ಬರಲಾರಂಭಿಸಿತು. ತಡವಾಗಿಯಾದರೂ, ಇಂದು ಲಾಟ್ವಿಯಾ ಮತ್ತು ಲಿಥುವೇನಿಯಾ ದೇಶಗಳೂ ಎಸ್ಟೋನಿಯಾದ ಆರ್ಥಿಕ ನೀತಿಯನ್ನು ಅನುಸರಿಸ ತೊಡಗಿವೆ. ಬುಲ್ಗೇರಿಯಾ, ಮ್ಯಾಸೆ ಡೋನಿಯಾ, ಮಂಗೋಲಿಯಾ ಮುಂತಾದ ರಾಷ್ಟ್ರಗಳು ಮುದ್ರಾವ್ಯವಸ್ಥೆಯ ಸುಧಾರಣೆಯಲ್ಲಿ ಅದರ ಸಲಹೆಯನ್ನು ಅಪೇಕ್ಷಿಸಿದೆ.

ವಿಶ್ವವಿದ್ಯಾಲಯದಲ್ಲಿ ಭಾಷಾ ಅಧ್ಯಯನದಲ್ಲಿ ರಷ್ಯಾ ಮೂಲದ ತಾತ್ಯಾನಾ ಸ್ತೋಲ್ಯಾರೋವಾ ತೊಡಗಿದಾಗ, ವೆಲ್ಸಿಕಾಲ್ ಎನ್ನುವ ಶಿಕಾಗೋ (ಅಮೆರಿಕ) ಸ್ಥಿತ ರಾಸಾಯನಿಕ ಸಂಸ್ಥೆ ಅವಳ ಸ್ವಂತ ಊರು ಕೋಹ್ತ್ಲಾ ಯಾರ್ವೇ ಎಂಬಲ್ಲಿದ್ದ ಒಂದು ಕಾರ್ಖಾನೆಯನ್ನು ಖರೀದಿಸಿತು. ಅಲ್ಲಿ ಸ್ತೋಲ್ಯಾರೋವಾ ಹಂಗಾಮಿ ರೂಪದಲ್ಲಿ ದ್ವಿಭಾಷಿಯಾಗಿ ನೇಮಕ ಹೊಂದಿದಳು.

ಕಠಿಣ ಪರಿಶ್ರಮ, ವೈಯಕ್ತಿಕ ಉಪಕ್ರಮ, ಮೇಲಾಗಿ ಪರಿವರ್ತನೆ ಮುಂತಾದ ವಿಷಯಗಳಿಗೆ ಕಾರ್ಖಾನೆಯ ಹೊಸ ಮಾಲೀಕರು ಒತ್ತುಕೊಡುತ್ತಿದ್ದರು. ಇವುಗಳಿಂದ ಸ್ತೋಲ್ಯಾರೋವಾ ಪ್ರಭಾವಿತಳಾದಳು. ''ಅಲ್ಲಿನ ವಾತಾವರಣ ಎಷ್ಟು ಉತ್ತೇಜಕವಾಗಿತ್ತೆಂದರೆ, ಕೆಲಸವನ್ನು ಬಿಡುವ ಮನಸ್ಸೇ ಬರುತ್ತಿರಲಿಲ್ಲ.''

-ಎನ್ನುತ್ತಾಳೆ ಮಧುರ, ದೋಷರಹಿತ ಇಂಗ್ಲಿಷ್ ಭಾಷೆಯಲ್ಲಿ. ನಯನಾಜೂಕಿನ ಆ ಬಿಳಿಗೂದಲ ಸುಂದರಿ.

ಅವಳ ಮೇರೆ ಮೀರಿದ ಉತ್ಸಾಹದಿಂದ ಪ್ರಭಾವಿತನಾದ ಮೇಲಧಿಕಾರಿ, ಅವಳಿಗೆ ಒಂದಾದಮೇಲೊಂದರಂತೆ, ಕಾರ್ಖಾನೆಯ ಪಾರುಪತ್ಯವನ್ನೊಳಗೊಂಡಂತೆ ಹೆಚ್ಚು ಹೆಚ್ಚು ಜವಾಬ್ದಾರೀ ಕೆಲಸಗಳನ್ನು ಕೊಡಲಾರಂಭಿಸಿದ. ಹೊಸ ಸುರಕ್ಷಾಮಾನದಂಡ, ಅಧಿಕ ವೆಚ್ಚ-ಫಲೋತ್ಪಾದಕತೆ, ಸುಧಾರಿತ ಗ್ರಾಹಕ ಸೇವೆ ಮುಂತಾದ ಪಾಶ್ಚಾತ್ಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಕಾರ್ಮಿಕರನ್ನು ಅವಳು ಒಪ್ಪಿಸಬೇಕಿತ್ತು. ಈ ಕೆಲಸ ಸುಲಭಸಾಧ್ಯವಾಗಿರಲಿಲ್ಲ. ಒಮ್ಮೆ ಅವಳು ಕಾರ್ಖಾನೆಯ ಮೇಲ್ವಿಚಾರಕರ ಸಭೆಯಲ್ಲಿ ಸುರಕ್ಷೆಯ ಅಭಿವೃದ್ಧಿಗೋಸ್ಕರ ಅವರ ಸಲಹೆಯನ್ನು ಕೋರಿದಳು. ಅವರ ಅಭಿಪ್ರಾಯ "ಏನೂ ಇಲ್ಲ. ಸುರಕ್ಷಾಭಿವೃದ್ಧಿ ಕನಸಿನ ಮಾತು" ಎಂದಾಗಿತ್ತು. 'ಅಸಾಧ್ಯ' ಎನ್ನುವ ಶಬ್ದವನ್ನೇ ನನ್ನ ಹತ್ತಿರ ತರಬೇಡಿ. ಅಸಾಧ್ಯವೆನ್ನುವುದು ಯಾವುದೂ ಇಲ್ಲ" ಎಂದು ಅವಳು ಭಾವೋದ್ರೇಕದಿಂದ ಮಾರ್ನುಡಿದಳು.

ಅರ್ಧಕ್ಕರ್ಧ ಕಾರ್ಮಿಕರನ್ನು ಬರ್ಖಾಸ್ತು ಮಾಡಿ ಹೊಸಬರನ್ನು ನೇಮಿಸಬೇಕಾಯಿತು. ಈ ಹೆಜ್ಜೆ ನಿರರ್ಥಕವಾಗಲಿಲ್ಲ. ಉಳಿದವರ ಮನೋವೃತ್ತಿ ಸುಧಾರಿಸಿತು. ಕಾರ್ಖಾನೆ ಲಾಭಗಳಿಸಲಾರಂಭಿಸಿತು. ಕಾರ್ಮಿಕರ ಗಳಿಕೆ ದ್ವಿಗುಣಗೊಂಡಿತು. ೧೯೯೮ರಲ್ಲಿ ಸ್ತೋಲ್ಯಾರೋವಾ ಕಾರ್ಖಾನೆಯ ಆಡಳಿತಾಧಿಕಾರಿಯಾದಳು. ಆಗ ಅವಳ ವಯಸ್ಸು-ಕೇವಲ ೨೩ ವರ್ಷ!

ಯೂರೋಪಿನ್ ಒಕ್ಕೂಟದ ಸದಸ್ಯತ್ವಕ್ಕೆ ಎಸ್ಟೋನಿಯಾ ತನ್ನ ಆವೇದನೆಯನ್ನು ಅರ್ಪಿಸಿದೆ. "ನೇಟೋ (NATO - ಉತ್ತರ ಅಟ್ಲಾಂಟಿಕ್ ಸಂಧಿಕೂಟ)" ಸಂಘಟನೆಯನ್ನು ಸೇರಿಕೊಳ್ಳಲು ಅನೇಕ ಎಸ್ಟೋನಿಯನ್ನರು ಆಶಿಸುತ್ತಾರೆ. ಆದರೆ ನೇಟೋ ಸದಸ್ಯತ್ವವು ಪ್ರಚೋದಕವಾಗಬಹುದು ಎಂದು ರಷ್ಯಾ ಸೂಚಿಸಿದೆ.

ಏತನ್ಮಧ್ಯೆ, ಯುವಶಕ್ತಿ ಮತ್ತು ಸ್ವಾತಂತ್ರ್ಯದ ಸಮ್ಮಿಲನ ಎಷ್ಟನ್ನೆಲ್ಲಾ ಸಾಧಿಸಬಹುದು ಎಂಬುದನ್ನು ಯುರೋಪಿಗೆ ಹಾಗೂ ಎಸ್ಟೋನಿಯಾ ತೋರಿಸಿಕೊಡುತ್ತಿದೆ.

"ದೃಢ ಮನಸ್ಸಿದ್ದರೆ ಏನನ್ನಾದರೂ ಸಾಧಿಸಬಹುದು ; ಯಾವುದೇ ಕನಸನ್ನು ನನಸಾಗಿಸಬಹುದು. ಅಖೇರಿಗೆ ಎಲ್ಲವೂ ವ್ಯಕ್ತಿಯೊಬ್ಬನು ಏನನ್ನು ಸಾಧಿಸಬಹುದು ಎನ್ನುವುದರಮೇಲೆ ಅವಲಂಭಿಸಿರುತ್ತದೆ. ಅಲ್ಲವೇ?" ಎನ್ನುತ್ತಾರೆ, ಎಸ್ಟೋನಿಯಾದಲ್ಲಿ ಎಲ್ಲೆಲ್ಲೂ ಕಾಣುವ 'ನಾ ಸಾಧಿಸುವೆ' ಎನ್ನುವ ಮನೋವೃತ್ತಿಯ ಪ್ರತೀಕವಾದ ಯುವ ರಾಜಕಾರಣಿ ಮೀಲಿಸ್ ಕಿಟ್ಸಿಂಗ್".

ಡಾ. ಕಾರ್‌ಸನ್‌ರ ಸಾಧನೆಗಳು

ಜಯಂತಿ ಅಮೃತೇಶ್
೪೦ ಕೃತ್ತಿಕಾ, ಆರನೆಯ ಮುಖ್ಯ ರಸ್ತೆ,
ಸರಸ್ವತೀಪುರ, ಮೈಸೂರು-೫೭೦ ೦೦೯

ಅವರ ತಾಯಿ ಅಶಿಕ್ಷಿತೆ. ಆದರೆ ಪುಸ್ತಕಗಳು ತನ್ನ ಮಗನನ್ನು ಬಹಳ ದೂರ ಕೊಂಡೊಯ್ಯಬಹುದೆನ್ನುವುದನ್ನು ಆಕೆ ತಿಳಿದಿದ್ದಳು.

೧೯೬೧ರಲ್ಲಿ ನಾನು ೫ನೆಯ ತರಗತಿಯಲ್ಲಿ ಓದುತ್ತಲಿದ್ದೆ. ಶಾಲೆಯಲ್ಲಿ ಪಾಠಗಳಲ್ಲಿ ನನಗೆ ಬರುತ್ತಿದ್ದ ಅಂಕಗಳು ಶೋಚನೀಯವಾಗಿದ್ದುವು. ಅದರ ಸುಧಾರಣೆಯ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ.

ನಮ್ಮ ತಂದೆಯವರು ಸ್ವರ್ಗಸ್ಥರಾಗಿ ಬಹಳ ವರ್ಷಗಳೇ ಕಳೆದಿದ್ದುವು. ನನ್ನ ಹಿರಿಯಣ್ಣ ಕರ್ಟಿಸ್ ಮತ್ತು ನಾನು ನಮ್ಮ ತಾಯಿಯ ಜೊತೆ ಅಮೆರಿಕಾದ ಡೆಟ್ರಾಯಿಟ್ ನಗರದಲ್ಲಿ ಮಧ್ಯಮವರ್ಗದವರಿರುವ ಬಡಾವಣೆಯಲ್ಲಿ ವಾಸಿಸುತ್ತಿದ್ದೆವು. ಮನೆ ಚಿಕ್ಕದಾಗಿತ್ತು. ಪೀಠೋಪಕರಣಗಳು ಇರಲಿಲ್ಲ. ಆದರೆ ಶುಭ್ರವಾಗಿ ಚೊಕ್ಕಟವಾಗಿತ್ತು. ಮೇಜನಮೇಲೆ ಸದಾಕಾಲ ಆಹಾರ ಇರುತ್ತಿತ್ತು. ಆದರೆ ಬಾಲ್ಯದ ಅಮಾಯಕತೆಯಿಂದ ನಮ್ಮನ್ನು ನಾವೇ ಬೇರೆ ವಿಷಯಗಳಿಂದ ಪ್ರತ್ಯೇಕಿಸಿಕೊಂಡಿದ್ದೆವು. ಮನೆಯ ಖರ್ಚುಗಳನ್ನು ಪೂರೈಸಲು ನಮ್ಮ ತಾಯಿ ಮೂರು ಮನೆಗಳಲ್ಲಿ ಮನೆಗೆಲಸ ಮಾಡುತ್ತಾ ಕಷ್ಟಪಡುತ್ತಿದ್ದುದರ ಅರಿವು ನಮಗೆ ಇರಲಿಲ್ಲ.

ನಮ್ಮ ಪ್ರಪಂಚ ಇರುತ್ತಿದ್ದುದೇ ಇಷ್ಟು. ಶಾಲೆ ಮುಗಿಯುವುದನ್ನೇ ಕಾಯುತ್ತಿದ್ದೆವು. ಕೂಡಲೇ ಕಾಲ್ಚೆಂಡು ಅಥವಾ ಬಾಸ್ಕೆಟ್ ಬಾಲ್ ಆಡುತ್ತಿದ್ದೆವು. ಪಕ್ಕದ ಮನೆಯ ಸೇಬಿನ ಗಿಡದಲ್ಲಿ ಹಣ್ಣುಗಳನ್ನು ಕೀಳುವುದು ಮತ್ತು ಗಾಳಿ ಬಂದೂಕಿನಿಂದ ಇಲಿಗಳನ್ನು ಕೊಲ್ಲುವುದು ನಮ್ಮ ಮೋಜು. ಕತ್ತಲಾದೊಡನೆಯೆ ಮನೆಯೊಳಗೆ ಸೇರಿ ದೂರದರ್ಶನವನ್ನು ವೀಕ್ಷಿಸುತ್ತಿದ್ದೆವು. ನಮ್ಮ ತಾಯಿಯ ಮಂಚದ ಮೇಲೆ ಮಲಗಿ ಗಂಟೆಗಟ್ಟಲೆ ಅದನ್ನು ವೀಕ್ಷಿಸುತ್ತಿದ್ದೆವು.

ಒಂದು ದಿನ ತಾಯಿ ನಮ್ಮ ಇಡೀ ಪ್ರಪಂಚವನ್ನೇ ಬದಲಾಯಿಸಿಬಿಟ್ಟಳು. ದೂರದರ್ಶನವನ್ನೇ ಸ್ಥಗಿತಗೊಳಿಸಿದಳು. ಶಾಲೆಯಲ್ಲಿ ನಾನು ಪಡೆದ ಅತಿ ಕಡಿಮೆ ಅಂಕಗಳೇ ಇದಕ್ಕೆ ಕಾರಣವಾಯಿತು. ನಮ್ಮ ತಾಯಿ ಕೇವಲ ೩ನೆಯ ತರಗತಿಯವರೆಗೆ ಓದಿದ್ದರೂ ನಾವಿದ್ದ ಬಡಾವಣೆಯಲ್ಲಿ ಇತರ ಎಲ್ಲರಿಗಿಂತಲೂ ಗೆಲುವಾಗಿಯೂ ಚುರುಕಾಗಿಯೂ ಇದ್ದಳು. ಆಕೆ ತಾನು ಕೆಲಸಮಾಡುತ್ತಿದ್ದ ಮನೆಗಳಲ್ಲಿ ಪುಸ್ತಕಗಳನ್ನು ನೋಡುತ್ತಿದ್ದಳು. ಒಂದು ದಿನ ಅಮ್ಮ ಮನೆಗೆ ಬಂದವಳೇ ಟಿವಿ ಆರಿಸಿ ಕುಳಿತುಕೊಂಡಳು, ಮತ್ತು ತನ್ನ ಮಕ್ಕಳು ಜೀವನದಲ್ಲಿ ಏನನ್ನಾದರೂ ಸಾಧಿಸಲೇಬೇಕೆನ್ನುವುದನ್ನು ಒತ್ತಾಯಿಸಿ ವಿವರಿಸಿದಳು.

ಆಕೆಯು ನಮಗೆ ಹೇಳಿದ್ದಳು, ''ನೀವಿಬ್ಬರೂ ವಾರಕ್ಕೆ ಎರಡು ಪುಸ್ತಕಗಳನ್ನಾದರೂ ಓದಬೇಕು. ನೀವೇನು ಓದಿದ್ದೀರಿ ಎನ್ನುವುದರ ಬಗ್ಗೆ ವರದಿ ಬರೆದುಕೊಡಬೇಕು.'' ನಾವು ರೇಗುತ್ತ ಮತ್ತು ಸಿಡುಕುತ್ತ ''ಇದು ನ್ಯಾಯವಾದುದಲ್ಲ'' ಎಂದು ಗೊಣಗಿದೆವು. ಆಕ್ಷೇಪಿಸಿದೆವು. ಎಲ್ಲ ಮಕ್ಕಳೂ ಹೇಗೆ ಟಿವಿ ನೋಡಿ ಆನಂದಿಸುತ್ತಾರೆಂದು ವರ್ಣಿಸಿದೆವು. ಈ

ಮೇ ತಿಂಗಳ ೨೦೦೧ರ ರೀಡರ್ಸ್ ಡೈಜೆಸ್ಟ್ ಸಂಚಿಕೆಯಲ್ಲಿ ಪ್ರಕಟವಾದ ಬೆನ್‌ಕಾರ್‌ಸನ್‌ರ ''ಪೇಜಿಂಗ್ ಡಾ.ಕಾರ್‌ಸನ್'' ಲೇಖನದ ಭಾವಾನುವಾದ

ಉಪಾಯಗಳೇನೂ ಫಲಿಸಲಿಲ್ಲ. ಬಹುಶಃ ಕೆಲವು ದಿನಗಳಲ್ಲಿ ಆಕೆ ತನ್ನ ಈ ಯೋಚನೆಯನ್ನು ಮರೆಯಬಹುದೆಂದು ತಿಳಿದಿದ್ದೆವು. ಇಷ್ಟೇ ಅಲ್ಲದೆ ನಮ್ಮ ಮನೆಯಲ್ಲಿ ಬೈಬಲ್ ಹೊರತು ಬೇರೆ ಯಾವ ಪುಸ್ತಕವೂ ಇರಲಿಲ್ಲ.

ಇದರಿಂದಾಗಿ ಪುಸ್ತಕಗಳು ಇರುವಲ್ಲಿಗೆ ನಾವೇ ಹೋಗಬೇಕೆಂದು ಆಕೆ ಒತ್ತಾಯಿಸಿದಳು. ನಾನು ನಿಮ್ಮನ್ನು ಪುಸ್ತಕ ಭಂಡಾರಕ್ಕೆ ಓಡುಸುತ್ತೇನೆಂದಳು. ಸ್ವಲ್ಪ ದಿನ ಕಳೆಯುವುದರಲ್ಲಿ ಸಿಟ್ಟಿನಿಂದ ಖಿನ್ನರಾದ ನಮ್ಮನ್ನು ಆಕೆಯೇ ತನ್ನ ವಾಹನದಲ್ಲಿ ಡೆಟ್ರಾಯಿಟ್ ನಗರದ ಸಾರ್ವಜನಿಕ ಗ್ರಂಥಾಲಯಕ್ಕೆ ಕರೆದೊಯ್ದಳು.

ನಾನು ಮನಸ್ಸಿಲ್ಲದಯೆ ಮಕ್ಕಳ ಪುಸ್ತಕಗಳಿರುವ ಜಾಗದಲ್ಲಿ ಗೊತ್ತುಗುರಿಯಿಲ್ಲದೆ ಓಡಾಡುತ್ತಿದ್ದೆ. ನನಗೆ ಪ್ರಾಣಿಗಳೆಂದರೆ ಬಹಳ ಅಕ್ಕರೆ ಆದ್ದರಿಂದ ಪ್ರಾಣಿಗಳ ಬಗ್ಗೆ ಇದ್ದ ಪುಸ್ತಕಗಳನ್ನು ತೆಗೆದುಕೊಂಡು ಪುಟಗಳನ್ನು ತಿರುವಿ ಹಾಕಲಾರಂಭಿಸಿದೆ.

ನಾನು ಓದಿದ ಮೊತ್ತಮೊದಲನೆಯ ಪುಸ್ತಕ ''ಅಣೆಕಟ್ಟು ಕಟ್ಟುವ ಚಿಪ್'' ಈ ಪುಸ್ತಕ ಬೀವರ್ ಪ್ರಾಣಿ ಜೀವನ ಚಿತ್ರ. ಅದು ಹೇಗೆ ಏರಿಗಳಲ್ಲಿ ಅಣೆಕಟ್ಟುಗಳನ್ನು ಕಟ್ಟುತ್ತದೆ ಎಂಬುದರ ಬಗ್ಗೆ ವಿಶದವಾದ ವಿವರಣೆ ಇತ್ತು. ಮೊತ್ತ ಮೊದಲ ಬಾರಿಗೆ ಮತ್ತೊಂದು ಲೋಕದಲ್ಲಿ ಲೀನನಾದೆ. ಟಿವಿಯ ಯಾವುದೇ ಧಾರಾವಾಹಿಯೂ ನನ್ನನ್ನು ಪರಿಸರದಿಂದ ಇಷ್ಟೊಂದು ದೂರ ಕರೆದುಕೊಂಡು ಹೋಗಲು ಸಫಲವಾಗಿರಲಿಲ್ಲ. .

ಬಲು ಬೇಗನೆ ನಾವು ಪುಸ್ತಕ ಪ್ರಪಂಚದ ನಿಶ್ಯಬ್ದವಾದ ಆರಾಧನಾ ಮಂದಿರಕ್ಕೆ ಹೋಗಲು ಪ್ರಾರಂಭಿಸಿದೆ. ಇದರಿಂದಾಗಿ ಡೈನಾಸರ್‌ಗಳನ್ನು ಗುರುತಿಸಿದೆ. ಈ ಮಧ್ಯೆ ನನಗೆ ಓದುವುದರಲ್ಲಿ ಅಪಾರ ಆಸಕ್ತಿ ಇದೆಯೆಂದು ತಿಳಿಯಿತು ಮತ್ತು ಅಚ್ಚಾದ ಪದಗಳಿಂದ ನಾನು ಬಲು ಬೇಗ ಅನೇಕ ವಿಷಯಗಳನ್ನು ಗ್ರಹಿಸಿದೆ. ಪರದೆಯ ಮೇಲೆ ನೋಡುವ ಅಥವಾ ಕಿವಿಯಿಂದ ಕೇಳುವ ಯಾವುದೇ ಮಾಧ್ಯಮಗಳಿಗಿಂತಲೂ ಪುಸ್ತಕ ಹೆಚ್ಚು ಪರಿಣಾಮ ಬೀರಿತ್ತು.

ಮುಂದೆ ನಾನು ಪ್ರಾಣಿ ಪ್ರಪಂಚದಿಂದ ಸಸ್ಯಪ್ರಪಂಚಕ್ಕೆ ಕಾಲಿಟ್ಟೆ. ಇವನ್ನು ಗ್ರಹಿಸಿದ ಮೇಲೆ ಶಿಲೆಗಳ ಬಗ್ಗೆ ತಿಳಿಯಲು ಆತುರನಾದೆ ರೈಲಿನ ಹಳಿಗಳ ಬದಿಯಲ್ಲಿ ಸುತ್ತಾಡುತ್ತ ಡಬ್ಬಿಯಲ್ಲಿ ಕಲ್ಲುಗಳನ್ನು ಶೇಖರಿಸುತ್ತಿದ್ದೆ. ಅವನ್ನು ಮನೆಗೆ ತಂದು ಭೂ ವಿಜ್ಞಾನದ ಪುಸ್ತಕದ ಸಹಾಯದಿಂದ ಗುರುತಿಸಲು ಹೆಣಗಾಡುತ್ತಿದ್ದೆ.

ಪ್ರತಿಯೊಂದು ಪುಸ್ತಕದಲ್ಲಿಯೂ ಆಯಾ ವಿಷಯದ ಇಡೀ ಪ್ರಪಂಚ ಜ್ಞಾನವೇ ಅಡಗಿರುತ್ತಿತ್ತು. ನಾನು ಯಾವ ವಿಷಯದ ಬಗ್ಗೆ ಬೇಕಾದರೂ ಓದಿ ತಿಳಿಯಲು ಸ್ವತಂತ್ರನಾಗಿದ್ದೆ.

ಹೀಗಿರುವಾಗ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ನನಗೆ ವಿಷಯಗಳು ತಿಳಿದಂತೆ ಉಪಾಧ್ಯಾಯರುಗಳು ನನ್ನನ್ನು ಗಮನಿಸಲು ಆರಂಭಿಸಿದರು. ನನ್ನ ಉತ್ಸುಕತೆ ಯಾವ ಮಟ್ಟಕ್ಕೆ ತಲಪಿತ್ತೆಂದರೆ ಮನೆಗೆ ಹೋಗಿ ಆ ವಿಷಯದ ಬಗ್ಗೆ ಪುಸ್ತಕ ಓದುವವರೆಗೆ ಸಮಾಧಾನವಿರುತ್ತಿರಲಿಲ್ಲ.

ಕರ್ಟಿಸ್ ಮತ್ತು ನಾನು ಪುಸ್ತಕ ಭಂಡಾರಕ್ಕೆ ಹೋಗಲು ತಾಯಿ ಕೆಲಸ ಮುಗಿಸಿ ಬರುವವರೆಗೆ ಕಾಯುತ್ತಿರಲಿಲ್ಲ. ನಾವೇ ಹತ್ತಿರದ ಹಾದಿಯೊಂದನ್ನು ಕಂಡು ಹಿಡಿದು ಕೊಂಡೆವು. ರೈಲ್ವೆ ಹಳಿಗಳ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು. ಕೆಲವು ಸಲ ನಿಧಾನವಾಗಿ

ಚಲಿಸುವ ಗುಡ್ಸ್ ಗಾಡಿಯಲ್ಲಿ ಪಯಣಿಸಿ ಪುಸ್ತಕ ಭಂಡಾರದ ಹತ್ತಿರ ಇಳಿಯುತ್ತಿದ್ದೆವು. ಅದರ ಪಕ್ಕದಲ್ಲಿದ್ದ ಸಣ್ಣ ಗುಡ್ಡವನ್ನು ಇಳಿದು ನಾವು ಪುಸ್ತಕ ಪ್ರಪಂಚವನ್ನು ತಲುಪುತ್ತಿದ್ದೆವು.

ಟಿವಿ ನೋಡಲು ನಿಷೇಧಾಜ್ಞೆ ವಿಧಿಸಿದ ತಾಯಿ ಆ ಬಗ್ಗೆ ಕೆಲಕಾಲದ ಬಳಿಕ ರಿಯಾಯಿತಿ ತೋರಿಸಿದಳು. ವಾರಕ್ಕೆ ಕೆಲವು ಗಂಟೆಗಳ ಕಾಲ ಟಿವಿ ನೋಡಲು ಅನುಮತಿಕೊಟ್ಟಳು. ಅದು ಬರೀ ಮನೋರಂಜನೆಯಾಗಿತ್ತೇ ವಿನಾ ಜ್ಞಾನ ವರ್ಧಕವೇನೂ ಆಗಿರಲಿಲ್ಲ.

ಈಗ ಕರ್ಟಿಸ್ ಒಬ್ಬ ಇಂಜಿನೀಯರ್. ನಾನು ಒಂದು ದೊಡ್ಡ ಆಸ್ಪತ್ರೆಯಲ್ಲಿ ಶಿಶುಗಳ ನರ ದೌರ್ಬಲ್ಯದ ವಿಭಾಗದ ಮುಖ್ಯಸ್ಥನಾಗಿದ್ದೇನೆ. ನನ್ನ ಜೀವನ ಯಾತ್ರೆಯ ಗತಿಯನ್ನು ನಾನೇ ನಂಬಲಾರದೆ ಹೋಗಿದ್ದೇನೆ. ಸದಾ ಕಾಲವೂ ಅನುತ್ತೀರ್ಣನಾಗುವ ಮತ್ತು ಉದಾಸೀನ ಭಾವದ ಶಾಲೆಯ ಹುಡುಗನಾಗಿದ್ದವ ವಿಶ್ವವಿದ್ಯಾಲಯಕ್ಕೆ ವಿಧ್ಯಾರ್ಥಿವೇತನದ ಮೂಲಕ ಕಾಲಿಟ್ಟು ವೈದ್ಯಕೀಯ ರಂಗ ಪ್ರವೇಶಿಸಿದ್ದು ಮತ್ತು ಈಗ ಉನ್ನತ ಹುದ್ದೆಯಲ್ಲಿರುವುದು ನಂಬಲಾ ಸಾಧ್ಯವಾಗಿದೆ.

ನನ್ನ ಈ ಉನ್ನತ ಹುದ್ದೆ ಶಿಶುಗಳ ನರ ದೌರ್ಬಲ್ಯದ ಬಗ್ಗೆ ಹೇಳಲು ಮತ್ತು ಶಸ್ತ್ರ ಚಿಕಿತ್ಸೆಯನ್ನು ನೋಡಲು, ಪ್ರಪಂಚದ ಅನೇಕ ಸ್ಥಳಗಳಿಗೆ ನನ್ನನ್ನು ಕರೆದೊಯ್ಯುತ್ತಿದೆ.

ಆದರೆ ಈ ಪಯಣದ ಆರಂಭ ಯಾವ ದಿನ ಎಂದು ನನಗೆ ಚೆನ್ನಾಗಿ ನೆನಪಿದೆ.

ನಮ್ಮ ತಾಯಿ ಟಿವಿ ಆರಿಸಿ ನಮ್ಮಿಬ್ಬರನ್ನು ತನ್ನ ವಾಹನದಲ್ಲಿ ಗ್ರಂಥಾಲಯಕ್ಕೆ ಕರೆದೊಯ್ದ ದಿನವೇ ಅದು.

ಪುಸಕದಿ ದೊರೆತರಿವು ಮಸಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ
ವಸು ಸಾಕ್ಷಾತ್ಕಾರವಂತರೀಕ್ಷಣೆಯಿಂದ
ಶಾಸ್ತ್ರತನದಿಂದಲ್ಲ ಮಂಕುತಿಮ್ಮ

ಮೌನದಲ್ಲಿ ಮೂರು ಬಗೆ. ಮಾತಿನ ಮೌನ ಒಳ್ಳೆಯದು. ಕಾರಣ ಅಸಂಗತ ಮಾತುಗಳು ದುಷ್ಪರಿಣಾಮಕಾರಿ. ಆಶೆ ಆಕಾಂಕ್ಷೆಗಳ ಮೌನ ಇದಕ್ಕೂ ಒಳ್ಳೆಯದು. ಇಂಥ ಮೌನ ಆತ್ಮ ಶಾಂತಿ ತರುತ್ತದೆ. ಇದಕ್ಕೂ ಉತ್ತಮವಾದದ್ದು ಅನವಶ್ಯಕವಾದ ಹಾಗೂ ನೆಲೆಯಿಲ್ಲದಾ ಲೋಚನೆಗಳ ಮೌನ. ಈ ಮೌನ ಆಧ್ಯಾತ್ಮಿಕ ಸ್ಮರಣೆಗೆ ಅತ್ಯಗತ್ಯ.

-ಮೇಡಂ ಡೆಯನ್

ಮಕ್ಕಳ ಸಾಮಾನ್ಯ ಕಾಯಿಲೆಗಳು

ಡಾ : ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧

ಚಿಗುರುಳಿವಡೆ ಕೊಂಬೆ ಬೆಳೆಯುವುದು, ಕಾಂಡ ದೃಢವಾಗುವುದು, ಬೇರಿನ ಬದುಕಿಗೆ ಅರ್ಥ ಮೂಡುವುದು

''ಮಕ್ಕಳೆಂದರೆ ಮಾಣಿಕ್ಯ'', ''ಕೂಸಿದ್ದ ಮನೆಗೆ ಬೀಸಣಿಕೆ ಯಾತಕೆ'' ಎಂಬ ಪಡೆನುಡಿಗಳು ಮಕ್ಕಳ ಪ್ರಾಮುಖ್ಯತೆಯನ್ನು ಬಿಂಬಿಸುವ ರನ್ನಗನ್ನಡಿಗಳು. ''ಮುಂಜಾವು ದಿನವನ್ನು ತೋರಿಸಿದಂತೆ ಬಾಲ್ಯ ಮನುಷ್ಯನನ್ನು ತೋರಿಸುತ್ತದೆ' ಎಂದು ಇಂಗ್ಲೀಷ್ ಕವಿ 'ಜಾನ್ ಮಿಲ್ಟನ್ ಹೇಳಿದ್ದರೆ, ''ಮಕ್ಕಳೇ ನಾಡಿನ ದೊಡ್ಡ ಸಂಪತ್ತು'' ಎಂದು ಮತ್ತೊಬ್ಬ ಇಂಗ್ಲೀಷ್ ಲೇಖಕ ಜಾನ್ ರಸ್ಕಿನ್ ಪರಿಗಣಿಸಿದ್ದಾರೆ. ಇಂದಿನ ಮಕ್ಕಳೆ ನಾಳಿನ ನಾಡಿನ ಹಿರಿಯರಲ್ಲವೆ? ಮಗುವಿನ ಆರೋಗ್ಯ ವಯಸ್ಕನ ಆರೋಗ್ಯದೊಡನೆ ನೇರ ಸಂಪರ್ಕವನ್ನು ಪಡೆದಿರುವುದರಿಂದ ಮಕ್ಕಳ ಆರೋಗ್ಯದತ್ತ ನಮ್ಮ ಗಮನವನ್ನು ಕೇಂದ್ರೀಕರಿಸಿದರೆ, ಅದು ನೇರವಾಗಿ ನಮ್ಮ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳ ಸುಧಾರಣೆಗೆ ಸಹಕಾರಿಯಾಗುತ್ತದೆ.

ಮಕ್ಕಳು ಚಟುವಟಿಕೆಗಳ ಆಗರ. ಸಂತೋಷದ ಸಾಗರ. ಅತ್ತರೆ ಚೆಂದ, ನಕ್ಕರೆ ಇನ್ನೂ ಅಂದ. 'ಕಾಯಿಲೆ ಮನುಷ್ಯರಿಗೆ ಬರದೇ ಮರಕ್ಕೆ ಬರುತ್ತಾ?' ಅನ್ನುವ ಮಾತಿದೆ. ಕಾಯಿಲೆ ಕಾಟ ಮಕ್ಕಳಿಗೂ ಬಿಟ್ಟಿಲ್ಲ. ಮಕ್ಕಳನ್ನು ಕಾಡುವ ಸರ್ವೆಸಾಮಾನ್ಯ ಕಾಯಿಲೆಗಳೆಂದರೆ ನೆಗಡಿ, ನ್ಯೂಮೋನಿಯಾ, ಅತಿಸಾರ, ಅಪೌಷ್ಟಿಕತೆ ಇತ್ಯಾದಿಗಳು.

ಕಾಯಿಲೆಗಳು ಕಾಣಿಸಿಕೊಳ್ಳುವ ಮುನ್ನ ಮಗುವಿನ ದೈಹಿಕ ಸ್ಥಿತಿಯಲ್ಲಿ ಕೆಲವು ಬದಲಾವಣೆಗಳಾಗುತ್ತವೆ. ಕಾರಣವಿಲ್ಲದೆ ಮಕ್ಕಳು ಕಿರಿಕಿರಿ ಮಾಡಬಹುದು. ಹಟ ಹಿಡಿದು ರಂಪ ಮಾಡಬಹುದು. ಮಗುವಿಗೆ ಇಷ್ಟವಾದ ಆಟಗೆಯನ್ನು ಮುಂದಿಟ್ಟರೂ ಮುಟ್ಟುವುದಿಲ್ಲ. ಸುಮ್ಮನಾಗುವುದಿಲ್ಲ. ಹಸಿದಿರಬಹುದೆಂದು ಹಾಲು ಕುಡಿಸಲು ಹೋದರೆ, ಅದನ್ನೂ ತಳ್ಳುವುದು. ಒತ್ತಾಯ ಮಾಡಿದರೆ, ಹಾಲು ಚೆಲ್ಲಬಹುದು ವಿನಃ ಅದೇನೂ ಮಗುವಿನ ಹೊಟ್ಟೆ ಸೇರುವುದಿಲ್ಲ. 'ಅನ್ನ ಉಣ್ಣುವಿಯೇನು?' ಅಂದಾಗ 'ಹು' ಎನ್ನುವಂತೆ ಗೋಣು ಹಾಕಬಹುದು. ಖುಷಿಯಿಂದ ಅನ್ನತಂದು ಮುಂದಿಟ್ಟರೆ 'ಒಲ್ಲೆ' ಹಣ್ಣು ಬೇಕೆಂದು ಹಟ ಮಾಡಬಹುದು. ಸುಮ್ಮನಾದರೆ ಸಾಕೆಂದು ಸಹನೆಯಿಂದ ಹಣ್ಣು ತಂದು ಕೊಟ್ಟರೆ ಅದನ್ನು ತಿನ್ನದೆ ಎಸೆದು ಮತ್ತೇನನ್ನೊ ಕೇಳುತ್ತ ಅಳಲಾರಂಭಿಸಬಹುದು. ನಿಮ್ಮ ಸಹನೆಯ ಸಿಮೋಲಂಘನವಾಗಬಹುದು. ಆದರೆ ಅನಿವಾರ್ಯ, ಹಾಗೆ ಮಾಡುವಂತಿಲ್ಲ.

ಸಾಮಾನ್ಯ ಕಾಯಿಲೆಗಳು ಮಕ್ಕಳಿಗೆ ಮುತ್ತಿಗೆ ಹಾಕಿದಾಗ ಲಾಸ್ಯವಾಡುತ್ತಿದ್ದ ಲವಲವಿಕೆ ಲಯವಾಗುವುದು. ಮುಖ ಕಾಂತಿಹೀನವಾಗುವುದು. ಶಿವನ ಕೈ ಅಲಗು ಹೊಳೆದ್ಹಂಗ ಕಾಣುವ ಕಣ್ಣು ಕಳೆಗುಂದು

ವುವು. ಮಕ್ಕಳಿಗೆ ಏನಾಗುತ್ತಿದೆ ಎಂದು ಬಾಯಿ ಬಿಟ್ಟು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ದೇಹದೊಳಗೆ ಏನೋ ಹಿಂಸೆಯಾಗುತ್ತಿದೆ ಎಂಬುದಷ್ಟೇ ಮಕ್ಕಳಿಗೆ ಗೊತ್ತಾಗುತ್ತದೆ. ಈ ಶೀತಲ ಸಮರದಲ್ಲಿ ಸುಸ್ತಾದ ಮಕ್ಕಳು ತಂದೆ-ತಾಯಂದಿರ ಸಾಮಿಪ್ಯವನ್ನು ಹೆಚ್ಚು ಬಯಸುತ್ತಾರೆ. ಆಡಿಕೊಂಡಿರುತ್ತಿದ್ದ ಮಗು ಇಪ್ಪೀ ಜಡ್ಡಿನಂತೆ ಅಂಜಿಕೊಂಡು ಕೂಡುವುದು. ರಿಪಿ ರಿಪಿ ಹಚ್ಚುವುದು. ಎತ್ತಿಕೊಂಡಾಗ ಸ್ವಲ್ಪ ಸಮಾಧಾನ, ಕೈಕೆಳಗಿಳಿಸಿದರೆ ಮತ್ತೆ ಅದೇ ಹಾಡು. ಏನನ್ನು ತಿನ್ನುವುದಿಲ್ಲ. ಈ ಆತಂಕ ಹೆತ್ತವರಿಗೆ ಉಪವಾಸದಿಂದ ಮತ್ತಷ್ಟು ಸೊರಗುವುದೆಂಬ ಚಿಂತೆ. ಒತ್ತಾಯದಿಂದ ತಿನಿಸಿದರೆ ವಾಂತಿ ಮಾಡುವರು. ಕಾರಣ ಹೆತ್ತವರು ಇಂಥ ಸಂದರ್ಭದಲ್ಲಿ ಒತ್ತಾಯ ದಿಂದ ತಿನಿಸುವುದಕ್ಕೆ ವಿದಾಯ ಹೇಳುವುದು ಒಳ್ಳೆಯದು.

ಮಕ್ಕಳು ಕಾಯಿಲೆಯ ಕರಿನೆರಳಿನಲ್ಲಿ ಕಾಲಿಟ್ಟಾಗ ಹೆಚ್ಚು ನಿದ್ದೆ ಮಾಡುತ್ತವೆ. ಆಗ ಗಾಬರಿ ಬಿದ್ದು ಎಬ್ಬಿಸಬೇಡಿ. ನಿದ್ದೆ ಮಾಡಿದಷ್ಟೂ ಮಕ್ಕಳ ಆಯಾಸ ಕಡಿಮೆಯಾಗುವುದು. ಒಮ್ಮೊಮ್ಮೆ ಮಕ್ಕಳು ಇದ್ದಕ್ಕಿದಂತೆ ವಾಂತಿ ಮಾಡಬಹುದು. ಮಕ್ಕಳಿಗೆ ಅಗತ್ಯಕ್ಕಿಂತ ಹೆಚ್ಚಿಗೆ ತಿನಿಸಿದಾಗ ಹೀಗಾಗಬಹುದು. ಇಲ್ಲವಾದಲ್ಲಿ ಇದು ಮುಂಬರುವ ಜ್ವರ ಅಥವಾ ನೆಗಡಿಯ ಮುನ್ಸೂಚನೆ. ಜ್ವರ ಬರುವುದಕ್ಕಿಂತ ಮೊದಲು ಮಕ್ಕಳ ಕಣ್ಣು, ಮುಖ ಕೆಂಪಾಗಬಹುದು. ಕರುಳಿಗೆ ಸೋಂಕು ತಗಲಿದ್ದರೆ ಭೇದಿ ಆರಂಭವಾಗುತ್ತದೆ. ಈ ಎಲ್ಲ ಲಕ್ಷಣಗಳು ಮಕ್ಕಳಿಗೆ ಕಾಯಿಲೆ ಬರುತ್ತಿದೆ ಎಂಬುದನ್ನು ಸೂಚ್ಯವಾಗಿ ತಿಳಿಸುವ ಸೂಚಕಗಳಾಗಿದೆ. ಮಕ್ಕಳು ಸಾಮಾನ್ಯವಾಗಿ ಕಾಡುವ ಕಾಯಿಲೆಗಳ ಸೋಂಕಿನ ಸುಳಿಯಲ್ಲಿ ಸಿಕ್ಕಾಗ ಇಂಥ ಬದಲಾವಣೆಗಳು ಕಂಡುಬರುತ್ತವೆ. ಎಂಬ ತಿಳುವಳಿಕೆ ಹೆತ್ತವರಿಗಿದ್ದರೆ ಒಳ್ಳೆಯದು.

ನೆಮ್ಮದಿ ಕೆಡಿಸುವ ನೆಗಡಿ : ''ನೆಗಡಿಯಂಥಾ ಜಡ್ಡ ಇಲ್ಲ. ಬುಗಡಿಯಂಥಾ ಒಡವಿ ಇಲ್ಲ'', ''ಮೂಗಿರುವ ತನಕ ನೆಗಡಿ ತಪ್ಪಿದ್ದಲ್ಲ'' ಅನ್ನುವ ಪಡೆನುಡಿಗಳು ಮೂಡಿಬರಬೇಕಾದರೆ ನೆಗಡಿಯ ಒಡನಾಟ ಎಷ್ಟು ಎಂಬುದು ಸ್ಪಟಿಕದಷ್ಟೇ ಸ್ಪಷ್ಟ. ಮಕ್ಕಳನ್ನು ಪದೇ ಪದೇ ಪೀಡಿಸುವ ಕಾಯಿಲೆಯೆಂದರೆ ನೆಗಡಿ. ಇದು ಒಂದು ವೈರಸ್‌ದಿಂದ ಬರುತ್ತದೆ. ಮನೆಯಲ್ಲಿ ಯಾರಾದರೊಬ್ಬರಿಗೆ ನೆಗಡಿ ಬಂದರೆ, ಒಂದೆರಡು ದಿನಗಳಲ್ಲಿ ಎಲ್ಲರಿಗೂ ಬರುವುದು. ಮಕ್ಕಳಿಗಂತೂ ತ್ವರಿತವಾಗಿ ಬರುವುದು.

ಇಕ್ಕಟ್ಟಾದ ಮನೆಯಲ್ಲಿ ವಾಸಿಸುವುದು; ಜನನಿಬಿಡತೆ ನೆಗಡಿ ತ್ವರಿತವಾಗಿ ಹರಡಲು ನೆರವಾಗುವುವು. ನೆಗಡಿಯಾದಾಗ ಮಕ್ಕಳು ಸಟ ಸಟ ಸೀನುತ್ತಾರೆ. ಮೂಗಿನಲ್ಲಿ ಸಿಂಬಳ ನೀರಿನಂತೆ ಸೋರುವುದು ಗಂಟಲದಲ್ಲಿ ಕೆರೆತ ಉಂಟಾಗುವುದು. ಮೊಲೆಹಾಲು ಕುಡಿಸುವಾಗ ಮೂಗು ಕಟ್ಟುವುದರಿಂದಾಗಿ ಮಗು ಒಮ್ಮೆಲೆ ಚಿಟ್ ಚಿಟ್ ಚೀರಬಹುದು. ಹಾಲು ಕುಡಿಯುವುದನ್ನು ಬಿಟ್ಟು ರಂಪ ಮಾಡಬಹುದು. ನಿದ್ದೆ ಮಾಡುವಾಗಲೂ ಹೀಗೆ ಆಗುವುದುಂಟು.

ನೆಗಡಿ ಸಾಮಾನ್ಯವಾಗಿ ಸ್ವಯಂ ನಿಯಂತ್ರಿತವಾಗಿದ್ದು, ಹೆಚ್ಚು ಹಾನಿಯನ್ನು ಮಾಡುವುದಿಲ್ಲ. ಜ್ವರ, ಕೆಮ್ಮು ಇಲ್ಲದ ಮಕ್ಕಳಿಗೆ ಜೀವಿರೋಧಕಗಳನ್ನು ಬಳಸುವುದು ಅನವಶ್ಯಕ. ನೆಗಡಿ ವಾಸಿಯಾಗಲು 'ಔಷಧಿ ಸೇವಿಸಿದರೆ ಒಂದು ವಾರ ಬೇಕು. ಸೇವಿಸದಿದ್ದರೆ ಏಳು ದಿನ ಸಾಕು' ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ. ಅನಾವಶ್ಯಕ ಜೀವಿರೋಧಕಗಳ ಬಳಕೆ ಪ್ರತಿರೋಧ ಒಡ್ಡುವ ರೋಗಾಣುಗಳ ಹಾವಳಿಯನ್ನು ಹೆಚ್ಚಿಸುವುದೆಂಬುದನ್ನು,

ಉಪಯುಕ್ತತೆಗಿಂತ ಅಪಾಯಗಳಿಗೆ ಆಹ್ವಾನ ನೀಡುವುದೆಂಬುದನ್ನು ಇದಕ್ಕಾಗಿ ಪಾಲಕರಿಂದ ಹಣ ಖರ್ಚುಮಾಡಿಸುದೆಂದರೆ ಹೊಳೆಯಲ್ಲಿ ಹೋಮ ಮಾಡಿದಂತೆ ವ್ಯರ್ಥ ಎಂಬುದನ್ನು ವೈದ್ಯರು ನೆನಪಿಡಬೇಕು. ಅವಶ್ಯವಿದ್ದಾಗ ಮಾತ್ರ ಅವುಗಳ ಬಳಕೆ ಮಾಡಬೇಕು. ಗುಬ್ಬಿ ಮೇಲೇಕೆ ಬ್ರಹ್ಮಾಸ್ತ್ರಗಳ ಬಳಕೆ?

ನೆಗಡಿ ಅಪಾಯಕಾರಿ ಅಲ್ಲ, ನಿಜ. ಆದರೆ ನಿರ್ಲಕ್ಷ್ಯ ಬೇಡ. ನೆಗಡಿಯ ಕ್ರಿಮಿಗಳು ಗಂಟಲಲ್ಲಿ ನೆಲೆನಿಂತು ಕಿರಿತ ಉಂಟು ಮಾಡುವವು. ಆಗ ಮಕ್ಕಳ ರೋಗ ಪ್ರತಿರೋಧಕ ಶಕ್ತಿ ಕುಗ್ಗಿರುತ್ತದೆ. ಹೀಗಾಗಿ ಸ್ಟ್ರೆಪ್ಟೋಕಾಕಸ್ ಕ್ರಿಮಿಗಳು ಗಂಟಲು, ಶ್ವಾಸನಾಳ ಮತ್ತು ಶ್ವಾಸಕೋಶಗಳಲ್ಲಿ ಬೆಳೆಯಲು ಅವಕಾಶ ಕಲ್ಪಿಸಿದಂತಾಗುವುದು. ಶ್ವಾಸನಾಳಗಳ ಸೋಂಕನ್ನು ಬ್ರೊಂಕೈಟಿಸ್ ಎಂತಲೂ, ಶ್ವಾಸಕೋಶಗಳ ಸೋಂಕನ್ನು ನ್ಯೂಮೊನಿಯಾ ಎಂತಲೂ ಕರೆಯುವರು. ಇವೆರಡೂ ತೀವ್ರ ಸ್ವರೂಪದ ಕಾಯಿಲೆಗಳು. ಆದುದರಿಂದ ನೆಗಡಿಯಾದ ಮಕ್ಕಳಿಗೆ ಬೇರೆ ಸೋಂಕು ತಗಲದಂತೆ ಜಾಗ್ರತೆ ವಹಿಸಬೇಕು. ಸಾಮಾನ್ಯವಾಗಿ ವೈರಸ್ ರೋಗಾಣುಗಳು ನ್ಯೂಮೊನಿಯಾ ಉಂಟು ಮಾಡುವವು. ಆದರೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಚಿತ್ರ ಭಿನ್ನವಾಗಿರುತ್ತದೆ. ಇಲ್ಲಿ ಬ್ಯಾಕ್ಟೀರಿಯಾಗಳಿಂದ ಉಂಟಾಗುವ ನ್ಯೂಮೊನಿಯಾ ಹೆಚ್ಚು. ಸ್ಟ್ರೆಪ್ಟೋಕಾಕಸ್ ನ್ಯೂಮೊನಿಯಾ ಮತ್ತು ಹಿಮೋಫಿಲಸ್ ಇನ್‌ಫ್ಲೂಯೆಂಜಾ ರೋಗಾಣುಗಳು ೨ ತಿಂಗಳಿಂದ ೫ ವರ್ಷದೊಳಗಿನ ಮಕ್ಕಳಲ್ಲಿ ನ್ಯೂಮೊನಿಯಾ ಉಡುಗೊರೆ ನೀಡುತ್ತವೆ.

ತಲೆದೋರಿದ ತೊಂದರೆಗಳಿಗೆ ತಕ್ಕ ಚಿಕಿತ್ಸೆ ನೀಡಲು ನಿರ್ಲಕ್ಷಿಸಬಾರದು. ಸೋಂಕಿನ ಸುಳಿಯಲ್ಲಿ ಮಕ್ಕಳು ಸಿಕ್ಕಾಗಲೂ ಉಣಿಸು ತಿನಿಸುಗಳನ್ನು ಕೊಡುತ್ತಲೇ ಇರಬೇಕಲ್ಲದೇ, ಸೋಂಕಿನಿಂದ ಮುಕ್ತವಾದ ಮೇಲೆ ಆಹಾರ ಪ್ರಮಾಣವನ್ನು ಹೆಚ್ಚಿಗೆ ಕೊಟ್ಟು ಮುಂದೆ ಹಣಿಕಿ ಹಾಕಬಹುದಾದ ನ್ಯೂನಪೋಷಣೆಗೆ ತಡೆಯನ್ನು ಹಾಕಬೇಕು. ಮಗು ಎದೆಹಾಲು ಕುಡಿಯುತ್ತಿದ್ದರೆ ಅದನ್ನು ಮುಂದುವರೆಸಿಕೊಂಡು ಹೋಗಬೇಕು. ದ್ರವ ಆಹಾರ ಸೇವನೆಯನ್ನು ಹೆಚ್ಚಿಸಬೇಕು. ಮೂಗಿನಲ್ಲಿ ಸಂಗ್ರಹವಾದ ಸ್ರವಿಕೆಗಳನ್ನು ಸ್ವಚ್ಛಗೊಳಿಸಬೇಕು. ಇದಕ್ಕೆ ಔಷಧಿಯ ಅಗತ್ಯವಿಲ್ಲ ಎಂಬುದನ್ನು ತಾಯಂದಿರು ತಿಳಿದಿರಬೇಕು.

ತಾಯಿಯ ಮಡಿಲಲ್ಲಿ ಮಕ್ಕಳು ಹಾಯಾಗಿ ಮಲಗಿರುವಾಗ ಉಸಿರಾಟದ ವೇಗವನ್ನು ಎಣಿಸಬೇಕು. ಇದು ಸ್ಟೆಥೋಸ್ಕೋಪಿನಿಂದ ಶ್ವಾಸ ಮಂಡಲ ಪರೀಕ್ಷೆ ಮಾಡುವುದಕ್ಕಿಂತಲೂ ಮಹತ್ವದ್ದಾಗಿದ್ದು, ಮೌಲಿಕ ಮಾನದಂಡವಾಗಿರುತ್ತದೆ. ಇದನ್ನು ಪೂರ್ತಿ ಒಂದು ನಿಮಿಷ ಎಣಿಸಬೇಕು. ಮುಂದುವರೆದ ವೇಗದ ಉಸಿರಾಟವನ್ನು ಎಂದೂ ನಿರ್ಲಕ್ಷಿಸಬಾರದು. ಎರಡು ತಿಂಗಳೊಳಗಿನ ಮಕ್ಕಳಲ್ಲಿ ಉಸಿರಾಟದ ವೇಗ ಪ್ರತಿ ನಿಮಿಷಕ್ಕೆ ೬೦ ಅಥವಾ ಅದಕ್ಕಿಂತ ಹೆಚ್ಚಿದ್ದರೆ, ವರ್ಷದೊಳಗಿನ ಮಗುವಿನಲ್ಲಿ ೫೦ ಅಥವಾ ಅದಕ್ಕಿಂತ ಹೆಚ್ಚಿದ್ದರೆ, ವರ್ಷ ತುಂಬಿದ ಮತ್ತು ಐದು ವರ್ಷದೊಳಗಿನ ಮಕ್ಕಳಲ್ಲಿ ೪೦ ಅಥವಾ ಅದಕ್ಕಿಂತ ಹೆಚ್ಚಿದ್ದರೆ ವೇಗದ ಉಸಿರಾಟ ಎಂದು ಪರಿಗಣಿಸಬೇಕು. ಇದು ನ್ಯೂಮೊನಿಯಾ ಕಾಯಿಲೆಯ ಸೂಚಕವಾಗಿರುತ್ತೆ. ವೇಗದ ಉಸಿರಾಟದ ಜೊತೆಗೆ ಪಕ್ಕೆ ಬಡಿತ ಅಥವಾ ಕೇವಲ ಪಕ್ಕೆ ಬಡಿತವಿದ್ದರೂ

ಅಪಾಯದ ಲಕ್ಷಣವನ್ನು ಮರೆಯಬಾರದು. ಇವು ಭೀಕರ ನ್ಯೂಮೊನಿಯಾದ ಸೂಚಕಗಳು.

ಇದಕ್ಕೆ ತುರ್ತು ಚಿಕಿತ್ಸೆ ಅವಶ್ಯ. ಸಕಾಲದಲ್ಲಿ ಸೂಕ್ತ ಜೀವಿರೋಧಕಗಳನ್ನು ವಯೋಮಾನಕ್ಕನುಗುಣವಾಗಿ ನೀಡಬೇಕು. ಮಕ್ಕಳನ್ನು ಬೆಚ್ಚಗೆ ಇಡುವುದು ಚಿಕಿತ್ಸೆ ನೀಡುವಷ್ಟೇ ಪ್ರಮುಖವಾದದ್ದು ಎಂಬುದನ್ನು ಮರೆಯಬಾರದು. ಅಲಕ್ಷಿಸಿದಲ್ಲಿ ಅಪಾಯಕ್ಕೆ ಆಹ್ವಾನ ನೀಡಿದಂತಾಗುವುದು.

ಸಾವಿನ ಸರದಾರ : ಅತಿಸಾರ

ಮಕ್ಕಳನ್ನು ಕಾಡಿಸುವ ಸರ್ವಸಾಮಾನ್ಯ ಕಾಯಿಲೆ ಅತಿಸಾರ, ಪ್ರತಿವರ್ಷ ಕನಿಷ್ಠ ೫ ದಶಲಕ್ಷ ಮಕ್ಕಳ ಪ್ರಾಣಪಕ್ಷಿಯನ್ನು ತನ್ನ ಬಲಿಷ್ಠವಾದ ಕೊಕ್ಕಿನಿಂದ ಕುಕ್ಕಿ ಕುಕ್ಕಿ ಹೆಕ್ಕುತ್ತದೆ. ಭಾರತದಲ್ಲೇ ಸುಮಾರು ೧೦-೧೫ ಲಕ್ಷ ಮಕ್ಕಳು ಅತಿಸಾರಕ್ಕೆ ಬಲಿಯಾಗುತ್ತಾರೆಂದರೆ ಈ ಸಮಸ್ಯೆಯ ಗಂಭೀರತೆಯ ಅರಿವು ಯಾರಿಗಾದರೂ ಆದೀತು ; ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ತಿಂಗಳಿಗೊಮ್ಮೆಯಾದರೂ ಮಕ್ಕಳನ್ನು ಮಾತನಾಡಿಸಿ ಮೆತ್ತಗೆ ಮಾಡುವ ಅತಿಸಾರ, ಪ್ರತಿಶತ ೨೦ ರಿಂದ ೪೦ ರಷ್ಟು ಐದು ವರ್ಷದೊಳಗಿನ ಮಕ್ಕಳ ಪ್ರಾಣ ಹತ್ಯೆ ಮಾಡುತ್ತದೆ.

ನಮ್ಮ ದೇಶದಲ್ಲಿ ಐದು ವರ್ಷದೊಳಗಿನ ಮಕ್ಕಳ ಸಂಖ್ಯೆ ಪ್ರತಿಶತ ೧೫ರಷ್ಟು ಇರುವುದರಿಂದ ಅವರತ್ತಗಮನ ಹರಿಸುವುದು ಸೂಕ್ತ. ಮಕ್ಕಳ ಪ್ರಾಣಹತ್ಯೆಗೆ ಪ್ರಬಲ ಹಾಗೂ ಪ್ರಥಮ ಸ್ಥಾನದಲ್ಲಿರುವ ಅತಿಸಾರ, ಅಕಸ್ಮಾತ್ ಅವರ ಬಾಹುಬಂಧನದಿಂದ ಜಾರಿಕೊಂಡ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಬಳುವಳಿಯಾಗಿ ಕೊಟ್ಟು ನೋವು ನಳಲಿಕೆಗಳ ಕಗ್ಗಂಟಿನ ಬಲೆಯಲ್ಲಿ ಬಂಧಿಸಿ ಸಾವಿನ ದವಡೆಯಲ್ಲಿರಿಸಿ ಅಟ್ಟಹಾಸದ ನಗು ನಗುತ್ತದೆ. ಮಕ್ಕಳು ಅತಿಸಾರ-ಅಪೌಷ್ಟಿಕತೆ- ಅತಿಸಾರಗಳ ವೃತ್ತದಲ್ಲಿ ಸುತ್ತಿ ಸುತ್ತಿ ತತ್ತರಿಸಿ ತಣ್ಣಗಾಗುತ್ತವೆ. ಅತಿಸಾರ ಅಪೌಷ್ಟಿಕತೆಗಳು ಒಂದಕ್ಕೊಂದು ಪೂರಕ, ಪೋಷಕ, ಪರಿಪೋಷಕಗಳಾಗಿ ವರ್ತಿಸಿ ಸಾವಿನ ಗಾಣದ ಸುತ್ತ ತಿರುಗುವಂತೆ ಮಾಡುತ್ತವೆ.

ಮಕ್ಕಳಲ್ಲಿ ರೋಗಾಣುಗಳ ವಿರುದ್ಧ ಹೋರಾಡುವ ಶಕ್ತಿ ಕಡಿಮೆ. ನೀರು ಮತ್ತು ಲವಣಾಂಶಗಳು ವಿಸರ್ಜಿತಗೊಳ್ಳುವುದರಿಂದ ಉಂಟಾಗುವ ನಿರ್ಜಲೀಕರಣದ ದುಷ್ಪರಿಣಾಮಗಳು ಈ ವಯಸ್ಸಿನಲ್ಲಿ ಹೆಚ್ಚು. ಮಕ್ಕಳಲ್ಲಿ ನ್ಯೂನಪೋಷಣೆ '' ನೃತ್ಯಗೈಯುತ್ತಿರುವುದರಿಂದ ಅತಿಸಾರದಿಂದಾಗುವ ಸಾವು ನೋವುಗಳು ಅತ್ಯಧಿಕವಾಗಿರುವುದರಿಂದ ಅತಿಸಾರ ''ಮಕ್ಕಳ ಸಾವಿನ ಸರದಾರ'' ಎಂಬ ಬಿರುದಿಗೆ ಪಾತ್ರವಾಗಿದೆ. ಬೇಸಿಗೆಯಲ್ಲಿ ಅತಿಸಾರದ ಉಪಟಳ ಜಾಸ್ತಿ. ರೋಗ ಪ್ರಸಾರದಲ್ಲಿ ವಾಹಕಗಳಂತೆ ವರ್ತಿಸುವ ನೊಣಗಳ ಹಾವಳಿ ಬೇಸಿಗೆಯಲ್ಲಿ ಹೆಚ್ಚಾಗುವುದು ಇದಕ್ಕೆ ಮುಖ್ಯಕಾರಣ. ಬಾಟಲಿ ಹಾಲನ್ನು ಕುಡಿಯುವ ಮಕ್ಕಳ ಜೊತೆಗೆ ಇದರ ನಂಟು ಹೆಚ್ಚು. ಅತಿಸಾರಕ್ಕೆ ಅನೇಕ ಬಗೆಯ ರೋಗಾಣುಗಳು ಕಾರಣವಾಗಿವೆ.

ಅತಿಸಾರಕ್ಕೆ ತುತ್ತಾದ ಮಕ್ಕಳು ದೇಹದಿಂದ ನೀರು ಮತ್ತು ಲವಣಾಂಶಗಳನ್ನು ಕಳೆದುಕೊಳ್ಳುತ್ತವೆ. ಪರಿಣಾಮವಾಗಿ ತೀವ್ರ ಬಾಯಾರಿಕೆ, ಚಡಪಡಿಕೆ, ಕಿರಿ ಕಿರಿ, ತಂಪಾದ ಕೈಕಾಲುಗಳು, ಅಧಮನಾಡಿ, ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಂಡ ಚರ್ಮ, ತಗ್ಗು ಬಿದ್ದ ಅಳ್ಳೆತ್ತಿ, ಒಳ ಸೇರಿದ ಕಾಂತಿಹೀನ ಕಣ್ಣುಗಳು, ಒಣಗಿದ ತುಟಿ ಮತ್ತು ನಾಲಿಗೆ, ಮೂತ್ರದ ಇಳಿಕೆ ಅಥವಾ ಮೂತ್ರದ ನಿಲುಗಡೆ ಗೋಚರಿಸಬಹುದು.

ಇವು ನಿರ್ಜಲೀಕರಣದ ಚಿಹ್ನೆಗಳು. ಈ ಸ್ಥಿತಿಯಲ್ಲಿ ಮಗು ಚಿಕಿತ್ಸೆಯಿಂದ ವಂಚಿತವಾದಲ್ಲಿ ಸಾವಿನತ್ತ ಸದ್ದಿಲ್ಲದೇ ಹೆಜ್ಜೆ ಹಾಕುವುದು. ನಿರ್ಜಲೀಕರಣ ತಲೆದೋರುತ್ತಿದ್ದಂತೆ ನಿರ್ಜಲೀಕರಣ ಚಿಕಿತ್ಸೆ ಪ್ರಾರಂಭಿಸಬೇಕು. ಇದರಿಂದ ಪ್ರಾಣಾಪಾಯ ತಪ್ಪಿಸಬಹುದು. ಔಷಧ ಚಿಕಿತ್ಸೆಗಿಂತಲೂ ನಿರ್ಜಲೀಕರಣ ಚಿಕಿತ್ಸೆ ಅತ್ಯಂತ ಪ್ರಮುಖವಾದದ್ದು ಎಂಬುದನ್ನು ಪಾಲಕರು ನೆನಪಿಡಬೇಕು. ಇದಕ್ಕೆ ಜೀವಜಲವನ್ನು ಅಥವಾ ಮನೆಯಲ್ಲಿ ಸಿಗುವ ದ್ರವ ಆಹಾರವನ್ನು ಬಳಸಬಹುದು.

ಎಲ್ಲರ ಮನೆಯಲ್ಲಿ ಸಾಮಾನ್ಯವಾಗಿ ಸಿಗುವ ಸಾಮಗ್ರಿಗಳನ್ನು ಬಳಸಿಕೊಂಡು ಜೀವಜಲವನ್ನು ತಯಾರಿಸಬಹುದು. ಒಂದು ಲೀಟರ್ ಕುದಿಸಿ, ಆರಿಸಿ, ಸೋಸಿದ ನೀರಿಗೆ ಸೆರಿ ಸಕ್ಕರೆ, ಒಂದು ಚಿಟಗಿ ಉಪ್ಪು ಬೆರಸಿ, ಕರಗಿಸಬೇಕು. ಇದ್ದರೆ ಅರ್ಧ ಲಿಂಬೆಹಣ್ಣಿನ ರಸವನ್ನು ಹಿಂಡಬೇಕು. ಇದನ್ನು ಮೇಲಿಂದ ಮೇಲೆ ಕುಡಿಸಬೇಕು. ಜಾಗತಿಕ ಆರೋಗ್ಯ ಸಂಸ್ಥೆ ಸಾರ್ವತ್ರಿಕವಾಗಿ ಉಪಯೋಗವಾಗುವ ಸಕ್ಕರೆ ಲವಣಗಳ ಮಿಶ್ರಣದ ಒಂದು ಸೂತ್ರವನ್ನುರೂಪಿಸಿದ್ದು, ಅದರ ಪ್ರಕಾರ ಸಿದ್ಧಪಡಿಸಿದ ಓ. ಆರ್. ಎಸ್. ಪೊಟ್ಟಣಗಳು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಸಿಗುತ್ತವೆ. ಅವುಗಳನ್ನು ಬಳಸಬಹುದು. ಜೀವಜಲ ಶುಚಿತ್ವದ ಕಡೆಗೆ ಹೆಚ್ಚು ಗಮನ ಕೊಡಬೇಕು. ಒಮ್ಮೆ ತಯಾರಿಸಿದ ದ್ರಾವಣವನ್ನು ಮತ್ತೆ ಕಾಯಿಸಬಾರದು. ಮತ್ತು ೨೪ ಗಂಟೆಗಳೊಳಗೆ ಉಪಯೋಗಿಸಬೇಕು. ಬಾಯಿಂದ ಸಜಲೀಕರಣ ಮುಂದುವರೆದಾಗಲೂ ರೋಗಿಯ ಸ್ಥಿತಿಸದಿದ್ದಲ್ಲಿ ಇಲ್ಲವೆ ವಾಂತಿ ಮುಂದುವರೆದಲ್ಲಿ ವೈದ್ಯರ ಸಲಹೆ ಪಡೆಯಲು ಮರೆಯಬಾರದು.

ಅಪಾಯಕಾರಿ ಅಪೌಷ್ಟಿಕತೆ :

ದೇಹದ ಬೆಳವಣಿಗೆಗೆ, ಉತ್ತಮ ಆರೋಗ್ಯಕ್ಕೆ ಬೇಕಾಗುವ ಅವಶ್ಯಕ ವಸ್ತುಗಳಲ್ಲಿ ಆಹಾರವೂ ಒಂದು . ಬಡತನ, ಅಜ್ಞಾನ ಮತ್ತು ಮೂಢನಂಬಿಕೆಗಳಿಂದಾಗಿ ತಮ್ಮ ಮಕ್ಕಳಿಗೆ ಸೂಕ್ತ ಆಹಾರವನ್ನು ನೀಡದೇ ಅವರಿಗೆ ದೈಹಿಕವಾದ ಅನೇಕ ತೊಂದರೆಗಳನ್ನು ತಂದಿವೆ. ಹಿಂದುಳಿದ ಅನೇಕ ದೇಶಗಳಲ್ಲಿ ವಿದ್ಯಾವಂತರು, ಸುಶಿಕ್ಷಿತರು ಎನ್ನುವವರಿಗೇ ಸಮತೋಲನವಾದ ಆಹಾರ ಮತ್ತು ಅದರ ಅವಶ್ಯಕತೆಯ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಆಹಾರದಲ್ಲಿಯ ಪೌಷ್ಟಿಕಾಂಶ ನಾಶವಾಗದಂತೆ ಸಿದ್ಧಪಡಿಸುವುದು, ಕಾಯ್ದಿಡುವುದು, ರೋಗ ತರುವ ಕ್ರಿಮಿಗಳಿಂದ ಸಂರಕ್ಷಿಸುವುದು ಮತ್ತು ಅದನು ಸೂಕ್ತ ರೀತಿಯಲ್ಲಿ, ಪ್ರಮಾಣದಲ್ಲಿ, ಸಮಯಕ್ಕನುಸಾರವಾಗಿ ತಿನಿಸುವುದು ಅನೇಕರಿಗೆ ತಿಳಿಯದು. ಪರಿಣಾಮವಾಗಿ ಕೊರತೆಯ ಕಾಯಿಲೆಗಳ ಕರಿನೆರಳು ಕಾಣಿಸಲಾರಂಭಿಸುವುದು. ಕೊರತೆಯ ಕಾಯಿಲೆಗಳು ಸಾಕಷ್ಟಿದ್ದು ಮಕ್ಕಳಿಗೆ ಪೂರಕವಾದವುಗಳು ನ್ಯೂನ ಪೋಷಣೆ ಮತ್ತು ಎ ಜೀವಸತ್ವದ ಕೊರತೆಯಿಂದ ಕಾಣುವ ಇರುಳುಗಣ್ಣು, 'ಡಿ' ಜೀವಸತ್ವ ಕೊರತೆಯಿಂದ ಕಾಡುವ ರಿಕೆಟ್ಸ್ ಮುಖ್ಯವಾದವುಗಳು. ''ಸೂರ್ಯನ ರಶ್ಮಿ ಬಾರದ ಕಡೆ ವೈದ್ಯ ಪದೇ ಪದೇ ಭೇಟಿ ನೀಡುತ್ತಾನೆ'' ಎಂಬ ನಾಣ್ಣುಡಿ ಅರ್ಥಪೂರ್ಣವಾಗಿದೆ.

ಮಕ್ಕಳ ಆಸ್ಪತ್ರೆಗೆ ಸೇರಿಕೊಳ್ಳುವ ೨೦ರಷ್ಟು ಮಕ್ಕಳು ಊತ ರೋಗಿಗಳಾಗಿರುತ್ತಾರೆ. ಹುಟ್ಟಿದ ನಾಲ್ಕು ತಿಂಗಳುಗಳಿಂದ ೫ ವರ್ಷಗಳೊಳಗೆ ಈ ಕಾಯಿಲೆಗೆ ಮಕ್ಕಳು ಬಲಿ ಬೀಳಬಹುದು. ನಮ್ಮ ದೇಶದಲ್ಲಿ ಸರ್ವ

ಸಾಮಾನ್ಯವಾಗಿ ೩ರಿಂದ ೫ ವರ್ಷಗಳ ಒಳಗೆ ಈ ಕಾಯಿಲೆ ಕಂಡು ಬರುತ್ತದೆ.

ಊತರೋಗ ಮಕ್ಕಳ ಮಾರಕರೋಗ ವಾದಾಗ್ಯೂ ಇಲ್ಲಿ ದೇಹ ಕೃಶವಾಗುತ್ತ ಹೋಗುವುದಿಲ್ಲ. ಮಗುವಿನ ಕೈಕಾಲು, ಮುಖ, ಹೊಟ್ಟೆ ಇವೆಲ್ಲಾ ಊದಿಕೊಂಡು ಪ್ರಥಮ ನೋಟಕ್ಕೆ ದಪ್ಪಗಾಗಿಯೇ ಕಾಣಿಸು ವುದು. ಮನೆಯಲ್ಲಿರುವ ಅಜ್ಜ ಈ ಮಗುವನ್ನು ನೋಡಿ "ಅದೆಷ್ಟು ಮುದ್ದಾಗಿ, ದುಂಡಗಾಗಿ ಬೆಳೆದಿದೆ" ಎಂದು ಹರ್ಷಪಟ್ಟರೂ, ವೈದ್ಯರ ಬಳಿ ಬಂದಾಗಲೇ ಇದು ರೋಗದ ಚಿಹ್ನೆ ಯೆಂಬುದು ತಿಳಿದು ಬಂದು ಕಂಗಾಲಾಗ ಬಹುದು.

ಊತ ರೋಗದ ಮೂರು ಮುಖ್ಯ ಲಕ್ಷಣಗಳೆಂದರೆ- (೧) ಕೈಕಾಲು , ಮೈ, ಮುಖವೆಲ್ಲಾ ಊದಿಕೊಳ್ಳುವುದು. (೨) ಮಾನಸಿಕ ಅಸ್ವಸ್ಥತೆ ಚಟುವಟಿಕೆ ಹೀನವಾದ ಮಕ್ಕಳು ಸುತ್ತಣ ಪ್ರಪಂಚದಲ್ಲಿ ಆಸಕ್ತಿ ತೋರಿಸದೆ 'ವೈರಾಗ್ಯ ಭಾವ' ಪ್ರದರ್ಶಿಸ ಬಹುದು. (೩) ದೈಹಿಕ ಬೆಳವಣಿಗೆ ಕುಂಠಿತ ಗೊಳ್ಳುವುದು. ಮೈ ಚರ್ಮ ಬಿರುಕುಬಿಟ್ಟು ಪದರು ಪದರಾಗಿ ಎದ್ದು ಬರುವಂತಿರುತ್ತದೆ. ಕೆಲವೊಮ್ಮೆ ಕೈಕಾಲುಗಳ ಚರ್ಮ ಒಣಗಿ ಕೊಂಡು ಕಾಂತಿಹೀನವಾಗಿದ್ದು ಸಂಪೂರ್ಣ ಬಿರುಕಾಗಿ ಒಡೆದಿರುತ್ತದೆ. 'ಎ' ಅನ್ನಾಂಗದ ಕೊರತೆಯಿಂದಾಗಿ ಕಣ್ಣಿನ ಕಪ್ಪು ಗುಡ್ಡೆ ಮಸುಕು ಮಸುಕಾಗಿ ಮಾರ್ಪಡುವುದರಿಂದ ಇರುಳು ಗಣ್ಣು ತಲೆದೋರಬಹುದು. 'ಬಿ' ಅನ್ನಾಂಗದ ಕೊರತೆಯಿಂದಾಗಿ ಬಾಯಿಯ ಸುತ್ತಲೂ ಹುಣ್ಣು ಉಂಟಾಗಬಹುದು. ದೇಹದ ಪ್ರತಿರೋಧಕ ಶಕ್ತಿ ಸ್ವಾಭಾವಿಕವಾಗಿಯೇ ಕಡಿಮೆಯಾಗಿರುವುದರಿಂದಾಗಿ ಪದೇ ಪದೇ ಕೆಮ್ಮು, ಜ್ವರ, ವಾಂತಿ, ಭೇದಿ ಮುಂತಾದವು ಈ ಮಕ್ಕಳಲ್ಲಿ ಸ್ವಾಭಾವಿಕವೇ. ಕ್ವಾಷಿಯೊರ್ಕರ ಎಂಬ ಶಬ್ದಕ್ಕೆ 'ಕೆಂಪು ಕೂದಲಿನ ಮಗು' ಎಂಬ ಅರ್ಥವಿದೆ. ಈ ಮಕ್ಕಳ ದೇಹ ಉಬ್ಬಿ ಕೊಂಡಿದ್ದರೂ, ಇರಬೇಕಾದುದಕ್ಕಿಂತ ಅರ್ಧದಷ್ಟೇ ಅವುಗಳ ತೂಕವಿರುತ್ತದೆ.

ಪೌಷ್ಟಿಕ ಆಹಾರ ಸೇವನೆಯೇ ಚಿಕಿತ್ಸೆಯಲ್ಲಿ ಮುಖ್ಯವಾದುದು. ಒಂದು ಕೆ. ಜಿ. ತೂಕಕ್ಕೆ ಸುಮಾರು ೫ ಗ್ರಾಮ್‌ಗಳ ಸಸಾರಜನಕ ಪ್ರತಿದಿನ ಮಕ್ಕಳಿಗೆ ಬೇಕಾಗುತ್ತದೆ. ಅಂದರೆ ಒಟ್ಟಿಗೆ ೫೦-೬೦ ಗ್ರಾಮ್‌ಗಳಷ್ಟಾದರೂ ಸಸಾರಜನಕದ ದೈನಂದಿನ ಪೂರೈಕೆಯಾಗಲೇ ಬೇಕು. ಊತರೋಗದ ಮಕ್ಕಳಿಗೆ ದೈನಂದಿನ ಚಟುವಟಿಕೆಗೆ ಕಡಿಮೆಯಾದರೆ ಒಂದು ಕೆ. ಜಿ.ಗೆ ೧೨೦ ಕಿಲೊ ಕ್ಯಾಲರಿಗಳಂತೆ ಪ್ರತಿದಿನ ಒದಗಿಸ ಬೇಕಾಗುತ್ತದೆ.

ಸಾಮಾನ್ಯವಾಗಿರಬೇಕಾದ ಸರಾಸರಿ ತೂಕಕ್ಕಿಂತ ಶೇಕಡಾ ೪೦ರಷ್ಟು ಕಡಿಮೆ ತೂಗು ತ್ತಿದ್ದು , ಹೆಚ್ಚಾಗಿ ಎಲುಬು ತೊಗಲಿನಿಂದ ಕೂಡಿರುವ ಯಾವುದೇ ಮಗು ಸವಕಳಿರೋಗ ದಿಂದ ನರಳುವುದು ಖಾತ್ರಿಯಾದಂತೆಯೇ. ಮಗುವಿಗೆ ಬೇಕಾದಷ್ಟು ಎದೆಹಾಲು ಅಥವಾ ಹಸುವಿನಹಾಲು ಅಥವಾ ಆಹಾರದ ಪೂರೈಕೆ ಆಗದಿರುವುದೇ ಈ ರೋಗಕ್ಕೆ ಕಾರಣ.

ಆಹಾರದ ಪೂರೈಕೆ ಸಮರ್ಪಕವಾಗಿದ್ದರೂ, ಅದು ಜೀರ್ಣಗೊಳ್ಳದಿದ್ದಾಗ ಶರೀರದ ಬೆಳವಣಿಗೆಗೆ ಅದು ಉಪಯೋಗಿಸಲ್ಪಡದು. ಪದೇ ಪದೇ ವಾಂತಿಯಾಗುತ್ತಿದ್ದಾಗ್ಯೂ ಈ ರೀತಿ ಉಂಟಾಗಲು ಸಾಧ್ಯ. ಕ್ಷಯರೋಗ ಮುಂತಾದ ಪೂರಕ ರೋಗದಿಂದಲೂ ಬಾಯಿರುಚಿ ಕೆಟ್ಟು ಹೋಗಿ ಆಹಾರ ಸೇವನೆ ಕಡಿಮೆಯಾಗಿ ದೇಹವು ಸೋರಗಿ ಹೋಗಲು ಸಾಧ್ಯ.

ಭೇದಿ ಪ್ರಾರಂಭವಾಗಿ, ಅನಿಯಂತ್ರಿತ ವಾದರಂತೂ ಸೇವಿಸಿದ ಆಹಾರವೆಲ್ಲ ರಕ್ತಗತ

ವಾಗದೇ ಸಂಪೂರ್ಣ ವಿಸರ್ಜಿಸಲ್ಪಟ್ಟು ಆಹಾರ ಪೂರೈಕೆಯಲ್ಲಿ ಕೊರತೆಯುಂಟಾಗುವುದು. ಊತ ರೋಗದಲ್ಲಿ ಬೇಕಾದ ಸಸಾರಜನಕದ ಪೂರೈಕೆಯಾಗದೇ ದೈನಂದಿನ ಕ್ಯಾಲೋರಿಯಂಶ ದೊರಕಿರುತ್ತದೆ. ಆದರೆ, ಸವಕಳಿ ರೋಗದಲ್ಲಿ ಸಸಾರಜನಕವೂ , ಕ್ಯಾಲೋರಿಯಂಶವೂ ಬೇಕಾದಷ್ಟು ಪ್ರಮಾಣದಲ್ಲಿ ದೊರಕುವುದಿಲ್ಲ.

ಸವಕಳಿ ರೋಗಕ್ಕೆ ದೈನಂದಿನ ಅಗತ್ಯಕ್ಕೆ ಬೇಕಾದ ಶಕ್ತಿ ಪೂರೈಕೆಯಾಗದಿರುವುದೇ ಮುಖ್ಯ ಕಾರಣವೆಂದಾಗ ಒಂದು ಕಿ.ಜಿ.ತೂಕಕ್ಕೆ ೨೦೦ ಕ್ಯಾಲೋರಿಗಳಂತೆ ಒದಗಿಸುವ ಆಹಾರದ ಪೂರೈಕೆ ಮಾಡಿದಲ್ಲಿ ಅದ್ಭುತ ಪ್ರಗತಿ ಅತೀ ಶೀಘ್ರದಲ್ಲಿ ಕಂಡು ಬರುತ್ತದೆ.

ನಮ್ಮ ದೇಶವನ್ನು ಒಳಗೊಂಡು ಅನೇಕ ರಾಷ್ಟ್ರಗಳಲ್ಲಿ ನ್ಯೂನ ಪೋಷಣೆ ಹೊಂದಿರುವ ಶೇಕಡಾ ೫೦ ಮಕ್ಕಳ ಮನೆಯಲ್ಲಿ ಆಹಾರದ ಕೊರತೆಯೇನೂ ಇರುವುದಿಲ್ಲ. ಮಗು ಹೊಂದುತ್ತಿರುವ ನ್ಯೂನ ಪೋಷಣೆ ಮತ್ತು ಅದರ ವಿಶಿಷ್ಟ ಅಗತ್ಯಗಳ ತಿಳುವಳಿಕೆಯನ್ನು ತಾಯಿ ಹೊಂದಿರದ ಕಾರಣ ಆಕೆ ಲಭ್ಯವಿರುವ ಆಹಾರವನ್ನು ಕೊಡದೆ ಮಗುವಿನ ಬೆಳವಣಿಗೆಯ ಹಿಂಜರಿಕೆಗೆ ಕಾರಣಳಾಗುತ್ತಾಳೆ. ಅನೇಕ ಬಾರಿ ರೋಗದಿಂದ ಮಗುವಿನ ಹಸಿವೂ ಕುಗ್ಗಿರುತ್ತದೆ. ಕುಗ್ಗಿದ ಹಸಿವೆ ನ್ಯೂನ ಪೋಷಣೆಗೆ ಕಾರಣವಾಗುವುದು. ಮಗುವಿನಲ್ಲಿ ಉಂಟಾಗುತ್ತಿರುವ ನ್ಯೂನ ಪೋಷಣೆಯನ್ನು ಅದರ ಲಾಲನೆ ಪಾಲನೆಯಲ್ಲಿ ನಿರತಳಾಗಿರುವ ತಾಯಿಗೆ ಗೋಚರವಾಗುವಂತೆ ಮಾಡುವುದರಿಂದ ಆಕೆ ಅದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಮಕ್ಕಳು ಒಂದರಿಂದ ಎರಡು ವರ್ಷ ವಯಸ್ಸಿನಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುವ ಸಾಧ್ಯತೆಗಳು ಬಹಳ ಇರುತ್ತವೆ. 'ಎ' ಜೀವಸತ್ವದ ಕೊರತೆ ಕುರುಡುತನವನ್ನು ನೀಡುವಷ್ಟು ಪೂರಕವಾಗಿದೆ.'ಎ' ಜೀವಸತ್ವದ ಅಭಾವವನ್ನು ಅಲಕ್ಷ ಮಾಡಿದಲ್ಲಿ ವೈದ್ಯರನ್ನು ಕಾಣುವ ಮೊದಲೆ ಮಗು ಅಂಧವಾಗಬಹುದು. ಅಷ್ಟು ವೇಗವಾಗಿ ಪಸರಿಸುವ ರೋಗವಿದು. ಅದಕ್ಕೆ 'ಕಣ್ಣುಮಾಡಿ' ಎಂದು ಕರೆಯುತ್ತಾರೆ. 'ಎ' ಜೀವಸತ್ವದ ಕೊರತೆಯಿಂದ ಮಕ್ಕಳಲ್ಲಿಯ ರೋಗ ಪ್ರತಿರೋಧಕ ಶಕ್ತಿ ಕುಗ್ಗುತ್ತದೆ. ಇದರಿಂದಾಗಿ ಸೋಂಕು ರೋಗಗಳನ್ನು ಸ್ವಾಗತಿಸುವ ಸದಸ್ಯರಾಗಿ ರೂಪಿಸಿಕೊಳ್ಳಬಹುದು. ನ್ಯೂನ ಪೋಷಣೆಯ ಮಕ್ಕಳಲ್ಲಿ ಕಣ್ಣು ಮಾರಿಯ ಹಾವಳಿ ಪ್ರತಿಶತ ೭೦ರಷ್ಟು ಇರುತ್ತದೆ.

ಇರುಳು ಕುರುಡು ತಡೆಗಟ್ಟುವುದು ಸರಳ. 'ಎ' ಜೀವಸತ್ವವನ್ನು ಹನಿಗಳ ರೂಪದಲ್ಲಿ ಮಕ್ಕಳಿಗೆ ಕೊಡಿಸಬೇಕು. ಇದಕ್ಕೆ ಪಾಲಕರು ಹಣ ಖರ್ಚು ಮಾಡಬೇಕಾಗಿಲ್ಲ. ನಿಮ್ಮ ಮನೆಯ ಬಾಗಿಲವರೆಗೂ ಈ ಸೇವೆ ಸಲ್ಲಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿ ಸಜ್ಜಾಗಿದೆ. ಅವರಿಗೆ ಸಹಕಾರ ಕೊಟ್ಟರೆ ಸಾಕು. ಮಕ್ಕಳ ಕುರುಡುತನ ತಪ್ಪಿಸಿದಂತಾಗುತ್ತದೆ. ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ ಯಶಸ್ವಿಯೂ ಆಗುತ್ತದೆ.

ಮಕ್ಕಳಿಗೆ ಜ್ವರ ಹೆಚ್ಚಾದಾಗ ಒಮ್ಮೊಮ್ಮೆ ಸೆಳವುಗಳ ಸುಳಿಗೆ ಸಿಗುವರು. ಆಗ ತಂದೆ-ತಾಯಿಗಳು ಆತಂಕಕ್ಕೀಡಾಗುವರು. ಮಂತ್ರ, ತಂತ್ರ, ತಾಯಿತ ಕಟ್ಟಿಸುವರು. ದೇವರು ದಿಂಡರಿಗೆ ಹರಕೆ ಸಲ್ಲಿಸುವರು. ಇಂಥ ಮೂಢನಂಬಿಕೆಗಳಿಂದ ದೂರಾಗಿ ತಜ್ಞ ವೈದ್ಯರ

ಸಲಹೆ ಪಡೆಯುವುದು ಸೂಕ್ತ. ಇನ್ನೊಂದು ಸಾಮಾನ್ಯ ಕಾಯಿಲೆಯೆಂದರೆ ಇಸಬು. ಸಾಮಾನ್ಯವಾಗಿ ಮಕ್ಕಳ ಕೆನ್ನೆಯ ಮೇಲೆ ಕಾಣಿಸುವುದು. ಕೈಕಾಲುಗಳ ಮೇಲೂ, ಒಮ್ಮೊಮ್ಮೆ ಮಗುವಿನ ಮೈಮೇಲೂ ತೋರಬಹುದು. ಇದರ ಸಲುವಾಗಿ ಬೊಗಳೆ ವೈದ್ಯರ ಮಾತಿನ ಮೋಡಿಗೆ ಮರುಳಾಗದೇ, ತಜ್ಞ ವೈದ್ಯರ ಸಲಹೆ ಪಡೆಯಬೇಕು.

''ಮಗುವನ್ನು ಬೆಳೆಸುವಾಗ ಅದರ ವೃದ್ಧಾಪ್ಯವನ್ನು ಗಮನಿಸು'' ಎಂದು ಹೇಳಿದ್ದಾರೆ. ಮಗುವಿನ ಆರೋಗ್ಯ ವಯಸ್ಕನ ಆರೋಗ್ಯದೊಡನೆ ನೇರ ಸಂಪರ್ಕವನ್ನು ಪಡೆದಿರುವುದರಿಂದ ಮಕ್ಕಳ ಆರೋಗ್ಯದತ್ತ ನಮ್ಮ ಗಮನವನ್ನು ಕೇಂದ್ರೀಕರಿಸಿ, ಸಾಮಾನ್ಯ ರೋಗಿಗಳಿಂದ ರಕ್ಷಿಸಿದರೆ ಆರೋಗ್ಯವಂತ ಪ್ರಜೆಗಳ ನಿರ್ಮಿಸಿದಂತೆ, ಅದು ನೇರವಾಗಿ ನಮ್ಮ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗೆ ಸಹಕಾರಿಯಾಗುತ್ತದೆ. ಅದು ನಿಜಕ್ಕೂ ಜನಾಂಗದ ಭಾಗ್ಯವಾಗಿ ಪರಿಣಮಿಸುತ್ತದೆ. ಅದರಿಂದಾಗಿ ಜರ್ಮನ್ ಕವಿ ಹಾರ್ಡೆನ್‌ಬರ್ಗ್‌ನ ಹೇಳಿಕೆ ''ಮಕ್ಕಳಿರುವ ಕಡೆ ಸುವರ್ಣಯುಗವಿದೆ'' ಎಂಬುದರಲ್ಲಿ ಅತಿಶಯೋಕ್ತಿಯಲ್ಲ.



ಕ್ರೋಧಕ್ಕೆ ಅಜ್ಞಾನ ಮತ್ತು ಅಹಂಕಾರಗಳೆರಡೂ ಕಾರಣವಾಗಿರುತ್ತವೆ.
ಅಜ್ಞಾನದಿಂದ ಅದು ಹುಟ್ಟಿ ಅಹಂಕಾರದಿಂದ ಬೆಳೆಯುತ್ತದೆ.

- ಭಾಗವತ

ಇಂದಿನ ಸಾಹಸಿಗಳು

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

೬೮ ವರ್ಷದ ಬನಿಮುಖರ್ಜಿ ಎಂಬ ಕಲ್ಕತ್ತದಲ್ಲಿನ ವಿಧವೆಯು ಆರು ಮಕ್ಕಳು ಅವಳನ್ನು ಬಂದು ಭೇಟಿಯಾಗುವುದು ಬಹಳ ಅಪರೂಪ. ಆದರೂ ಆಕೆ ಪ್ರತಿದಿನ ತನ್ನ ಗುಡಿಸಲಿನಿಂದ ಮೂರು ಕಿಲೋಮೀಟರ ದೂರದಲ್ಲಿರುವ ಒಂದು ಸಣ್ಣ ಫ್ಲಾಟಿಗೆ ತಪ್ಪದೆ ಹೋಗುತ್ತಾಳೆ. ಈ ಫ್ಲಾಟಿನಲ್ಲಿರುವ - ಮಕ್ಕಳು ತೊರೆದ ೪೯ ಹಿರಿಯ ನಾಗರಿಕರನ್ನು ಭೇಟಿಯಾಗುತ್ತಾಳೆ. ಎಷ್ಟೋ ಗಂಟೆಗಳವರೆಗೆ ಒಬ್ಬೊಬ್ಬರಾಗಿ ಕಥೆ ಹೇಳುತ್ತಾರೆ, ಲುಡೊ ಆಡುತ್ತಾರೆ, ಟಿ.ವಿ. ನೋಡುತ್ತಾರೆ ಮತ್ತು ಹಾಡುಗಳನ್ನು ಹಾಡುತ್ತಾರೆ. ಕೆಲವೊಮ್ಮೆ, ಅವರು ಒಂದು ಬಸ್ಸಿನಲ್ಲಿ ಕುಳಿತು ನಗರದ ಗುಡಿಗಳಿಗೆ ಹೋಗುವುದುಂಟು. ''ಇದು ನಮಗೆ ಹಿಡಿಸುತ್ತದೆ. ಇಲ್ಲಿ ನಮಗೆ ಬೇಡಿಕೆ ಇದೆ ಎಂದೆನಿಸುತ್ತದೆ'' ಎಂದು ಬನಿ ಹೇಳುತ್ತಾಳೆ.

ಬಡ ಹಿರಿಯರ ಪಾಲಿನ ಈ ಆಶ್ರಯ ಸ್ಥಾನ ಇಂದ್ರಾಣಿ ಚಕ್ರವರ್ತಿ ಎಂಬ ೪೬ ವರ್ಷ ವಯಸ್ಸಿನ ಸರಳ ಹಾಗೂ ಮೃದು ಮಾತಿನ ಪಂಡಿತ ಕಾರ್ಯಕರ್ತೆಯ ಶ್ರಮದ ಫಲ. ಆಕೆಯ ತಂದೆ ತಾಯಿಗಳಿಬ್ಬರೂ ಕೆಲಸಕ್ಕೆ ಹೋಗುತ್ತಿದ್ದುದರಿಂದ ಆಕೆಯ ಲಾಲನೆ ಪಾಲನೆ ನಡೆದದ್ದು (ತಾಯಿಯ ತಂದೆ) ಅಜ್ಜ-ಅಜ್ಜಿಯ ಆಶ್ರಯದಲ್ಲಿ. ಇದರಿಂದಾಗಿ ಇಂದ್ರಾಣಿಗೆ ಬಹುಬೇಗ ವೃದ್ಧರ ಬಗ್ಗೆ ಪ್ರೀತ್ಯಾದರ ಬೆಳೆಯಿತು. ಕಲ್ಕತ್ತಾದ ಪಿಂಚಣಿದಾರರ ಸಮಸ್ಯೆಗಳನ್ನು ಕುರಿತು ತನ್ನ ಸಂಶೋಧನಾ ಪ್ರಬಂಧಕ್ಕೆ ಮಾಹಿತಿ ಸಂಗ್ರಹಿಸುತ್ತಿರುವಾಗ, ಆ ಹಿರಿಯರನ್ನು ದೂರಪಟ್ಟಿದ್ದು ಮತ್ತು ಕಡೆಗಾಣಿಸಲಾಗಿದ್ದು ಅವಳ ಗಮನಕ್ಕೆ ಬಂತು. ಇಂಥವರಿಗೆ ಸಹಾಯ ಮಾಡಬೇಕೆಂದು ನಿರ್ಧರಿಸಿದ ಈ ಮಹಿಳೆ ೧೯೯೦ರ ಡಿಸೆಂಬರಿನಲ್ಲಿ ಒಂದು ಫ್ಲಾಟನ್ನು ಬಾಡಿಗೆಗೆ ತೆಗೆದುಕೊಂಡು ಪ್ರತಿದಿನ ಅವರೆಲ್ಲರೂ ಭೇಟಿಯಾಗುವ ಒಂದು ಕೇಂದ್ರವನ್ನಾಗಿ ಮಾಡಿದಳಲ್ಲದೆ, ಅವರಿಗಾಗಿ ತನ್ನ ಹಾಗೂ ಸ್ನೇಹಿತೆಯರಿಂದ ಸಂಗ್ರಹಿಸಿದ ಹಣವನ್ನು ಖರ್ಚು ಮಾಡಿದಳು.

ವೃದ್ಧರಿಗಾಗಿ ನಡೆಸುವ ಈ ಹಗಲು ಕೇಂದ್ರವಲ್ಲದೆ ಇಂದ್ರಾಣಿಯು ಕಲ್ಕತ್ತನಗರದ ವೃದ್ಧಾಪ್ಯ ಸಂಸ್ಥೆಯು, ಇನ್ನೂ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಕೊಳಚೆ ಪ್ರದೇಶದಲ್ಲಿ ಊಟ ನೀಡುವ ಕಾರ್ಯಕ್ರಮ ಮತ್ತು ವೈದ್ಯಕೀಯ ಚಿಕಿತ್ಸಾ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದಲ್ಲದೆ ''ದತ್ತು'' ಯೋಜನೆಯಡಿಯಲ್ಲಿ ೫೫ ನಿರ್ಗತಿಕ ಹಿರಿಯರ ಬೇಡಿಕೆಗಳನ್ನು ಪೂರೈಸುವ ಹಾಗೂ ಅವರಿಗಾಗಿ ಹಗಲು ಹೊತ್ತಿನ ಒಂದು ಸಣ್ಣ ವೃದ್ಧಾಸ್ಪತ್ರೆಯ ನಡೆಸಿ ಯೋಗಕ್ಷೇಮ ನೋಡಿಕೊಳ್ಳುವ ಯೋಜನೆಗಳೂ ಇವೆ. ಕೆಲವು ಸ್ವಯಂ ಸೇವಕರು ಹಾಗೂ ೨೨ ನೌಕರರಿರುವ ಈ ಸಂಸ್ಥೆಗೆ ಸರಕಾರದವತಿಯಿಂದ, ಖಾಸಗಿ ಸಂಸ್ಥೆಗಳಿಂದ ಹಾಗೂ ಕೆಲವು ವ್ಯಕ್ತಿಗಳಿಂದ ಹಣಕಾಸು ಒದಗಿಸಲಾಗುತ್ತಿದೆ.

''ನಾವು ಅವರೊಡನೆ ವರ್ತಿಸುವ ರೀತಿ ನಾಚಿಕೆ ತರುವಂಥಾದ್ದಾಗಿದೆ, ಸಮಾಜಕ್ಕೆ ನೀಡಲು ಈಗಲೂ ಅವರಲ್ಲಿ ಸಾಕಷ್ಟಿದೆ'' ಎನ್ನುತ್ತಾಳೆ. ಸೌತಿಕ ಬಿಸ್ವಾಸ್, ೧೯೯೯ರ

ಮೇ ೨೦೦೦ದ ರೀಡರ್ಸ್ ಡೈಜೆಸ್ಟ್‌ನ 'ಹೀರೋಸ್ ಫಾರ್ ಟುಡೆ' ಲೇಖನದ ಭಾವಾನುವಾದ

ಸೆಪ್ಟೆಂಬರ್೧೩''ಔಟಲುಕ್''ನಲ್ಲಿ.

೨.ಚುರುಕು ಬುದ್ಧಿಯ ಹುಡುಗಿ: ಶ್ರೀಲಂಕಾದ ಪೆಪಿಲಯನಾದಲ್ಲಿನ ಒಂದು ಶಾಲೆಯ ಆವರಣ. ೧೯೯೮ರ ಜುಲೈ ೩೧ ; ವ್ಯಾಸಂಗಾವಧಿಯ ಕೊನೆಯದಿನ. ೧೫ ವರ್ಷದ ಮಾಲಕಾಂತಿ ಧಮ್ಮಿಕಾ ಜಯಸೂರ್ಯ,ತನ್ನ ಸಹಪಾಠಿಗಳ ಜೊತೆಗೆ ವರ್ಗದ ಮುಂದೆ ನಿಂತಿದ್ದಳು.

ರಜೆಯ ದಿನಗಳಲ್ಲಿ ತಾವೇನು ಮಾಡಲಿದ್ದಾರೆಂದು ಅವರು ಮಾತಾಡುತ್ತಿದ್ದಂತೆ, ಓಣಿಯಲ್ಲಿನ ಒಬ್ಬ ಮನುಷ್ಯ ಶಾಲೆಯ ಕಟ್ಟಡದ ಕಡೆ ಕೈಮಾಡಿ ಜೋರಾಗಿ ಕೂಗುತ್ತಿದ್ದುದನ್ನು ಮಾಲಕಾಂತಿ ಕಂಡಳು. ಅವನು ನೋಡುತ್ತಿದ್ದ ಕಡೆಗೆ ಇವಳೂ ಕಣ್ಣು ಹಾಯಿಸಿದಳು. ಶಾಲೆಯ ಮೂರನೇಯ ಅಂತಸ್ತಿನ ಒಂದು ಬಂಡೆಯ ಚಾಚಿನ ಮೇಲೆ ಕೆಂಪು ಉಡುಪು ಧರಿಸಿದ ಒಬ್ಬ ಚಿಕ್ಕ ಬಾಲಕ ನಿಂತಿದ್ದನ್ನು ನೋಡಿ ಅವಳು ಗಾಬರಿಗೊಂಡಳು.

ಆ ಬಾಲಕಿ, ಲಲಿತಾ ಜಯಲತಾ ಎಂಬ ಶಿಕ್ಷಕಿಯ ನಾಲ್ಕು ವರ್ಷದ ಮಗಳಾದ ಕೆ. ಪಿ. ಡಿ. ಮಧುಶನಿರುವಾಂತಿಕಾ ಎಂಬುದನ್ನು ಮಾಲಕಾಂತಿ ಗುರುತಿಸಿದಳು. ಮಾಲಕಾಂತಿ ''ಹಾರಬೇಡ, ನಾಂಗಿ (ತಂಗಿ) '' ಎಂದು ಚೀರುತ್ತಾ ಆ ಕಡೆ ಧಾವಿಸಿದಳು. ಮೊದಲು ಆ ಬಾಲಕಿ ಹಿಂದೆ ಸರಿದಳಾದರೂ ಮತ್ತೆ ಬಂಡೆ ಚಾಚಿನ ತುದಿಯ ಕಡೆಗೆ ಬಂದಳು. ಇನ್ನವಳು ಹಾರಿ ಬಿಡುವಳೆಂಬುದು ಮಾಲಕಾಂತಿಗೆ ಖಚಿತವಾಯಿತು.

ಮಧುಶನಿ ಹಾರುತ್ತಿದ್ದಂತೆ, ಅವಳು ಬೀಳಬಹುದಾದ ಸ್ಥಳವನ್ನು ಊಹಿಸಿ ಮಾಲಕಾಂತಿ ಕೈಚಾಚಿ ನಿಂತಳು. ಅವಳೆಣಿಕೆಯಂತೆ ಮಧುಶನಿ ಮಾಲಕಾಂತಿಯ ಚಾಚಿದ ಕೈಗಳ ಮೇಲೆ ನೇರವಾಗಿ ಬಿದ್ದಳು. ಅವಳು ಕೆಳಗೆ ಬಿದ್ದರೂ ಮೊಳಕಾಲಿಗೆ ಸ್ವಲ್ಪ ಗಾಯವಾಯಿತು. ಮಾಲಕಾಂತಿಗೆ ಯಾವುದೇ ಗಾಯವಾಗಲಿಲ್ಲ.

ತನ್ನ ತಾಯಿಯ ಜೊತೆಗೆ ಶಾಲೆಗೆ ಬಂದಿದ್ದ ಮಧುಶನಿ, ಸಿಬ್ಬಂದಿಯ ಕೋಣೆಯಿಂದ ತಪ್ಪಿಸಿಕೊಂಡು ಅಲೆದಾಡ ಹತ್ತಿದಳು. ಖಾಲಿಯಾಗಿದ್ದ ಒಂದು ವರ್ಗದ ಕೋಣೆಯಲ್ಲಿನ ಒಂದು ಡೆಸ್ಕನ್ನೇರಿ ಕಿಟಕಿಯ ಮೂಲಕ ಹಣಿಕೆ ಹಾಕಿ ನೋಡಲೆತ್ನಿಸಿದ ಈ ಬಾಲಕಿ ಬಂಡೆಯಂಚಿಗೆ ಬಂದಿದ್ದಳು. ಶಾಲೆಯ ಮಕ್ಕಳೆಲ್ಲ ಕೆಳಗಿದ್ದುದ್ದನ್ನು ಕಂಡು , ಎತ್ತರದ ಬಗ್ಗೆ ಯೋಚಿಸದೆ, ಅವರೊಡನೆ ಸೇರಿಕೊಳ್ಳಲು ಹಾರುವುದೇ ಸುಲಭ ಮಾರ್ಗವೆಂದು ನಿರ್ಧರಿಸಿದ್ದಳು. ಅವಳು ''ನಾನು ಒಂದು ಕಾಗೆಯಂತೆ ಹಾರಿದೆ ಮತ್ತು ಅಕ್ಕ(ಹಿರಿಯಕ್ಕ) ನನ್ನನ್ನು ಹಿಡಿದುಕೊಂಡಳು'' ಎಂದು ಆನಂತರ ಹೇಳಿದಳು.

ಶ್ರೀಲಂಕಾದ ಸಾಮಾಜಿಕ ಶೌರ್ಯ ಫೌಂಡೇಷನ್ ಕೊಲಂಬೊದಲ್ಲಿ ಒಂದು ವಿಶೇಷ ಸಮಾರಂಭವನ್ನೇರ್ಪಡಿಸಿ, ೧೯೯೮ರ ಉತ್ಕೃಷ್ಟ ಸಾಹಸಕೃತ್ಯವೆಂದು ಘೋಷಿಸಿ ಮಾಲಕಾಂತಿಗೆ ಬಂಗಾರದ ಪದಕವನ್ನಿತ್ತು ಸನ್ಮಾನಿಸಿತು. ಹರ್ಷೋದ್ಗಾರಗಳಿಂದ ಚಪ್ಪಾಳೆ ತಟ್ಟಿದ ಸಭಿಕರಲ್ಲಿ ಮಧುಶನಿ ಕೂಡಾ ಇದ್ದಳು. ಗದ್ಗದಿತಳಾಗಿದ್ದ ಅವಳ ತಾಯಿ ಲಲಿತ ಜಯಲತಾ ''ಈ ಚುರುಕು ಬುದ್ಧಿಯ ಹುಡುಗಿ ಇರದಿದ್ದರೆ , ನನ್ನ ಮಗಳು ಬದುಕುಳಿದಿರುತ್ತಿರಲಿಲ್ಲ'' ಎಂದರು.

-ವಿಜಿತಾ ಯಾಪಾ

೩.ನಮ್ಮ ಕಾರ್ ಒಯ್ಯಬಹುದು: ೧೯೯೭ರ ಡಿಸೆಂಬರ್‌ನಲ್ಲಿ ಎಲಿಝಬೆತ್ ಕ್ಲೇ ಎಂಬ ವಿದ್ಯಾರ್ಥಿನಿ ಬೋಸ್ಟನ್ ವಿಶ್ವವಿದ್ಯಾಲಯ

ದಿಂದ ದಕ್ಷಿಣ ಕಾಲಿಫೋರ್ನಿಯಾದ ಮಿರಟ್ಲ ಬೀಚಿನಲ್ಲಿರುವ ತನ್ನ ತಂದೆ ತಾಯಿಗಳೊಂದಿಗೆ ರಜೆಯ ದಿನಗಳನ್ನು ಕಳೆಯಲು ಕಾರ್ ಓಡಿಸಿಕೊಂಡು ಹೊರಟಿದ್ದಳು. ಬೋಸ್ಟನ್ನಿನಿಂದ ದಕ್ಷಿಣದೆಡೆಗೆ ಹೊರಟು ಒಂದು ಗಂಟೆಯಾಗುವಷ್ಟರಲ್ಲಿ ಆಕೆಯ ಹಳೆಯ ಟೊಯೊಟಾ ಮೋಟಾರಿನ ಟೈರ್ ಚಪ್ಪಟೆಯಾಯಿತು. ಚಳಿಗಾಲದ ಆ ಮುಸ್ಸಂಜೆಯಲ್ಲಿ ೨೨ ವರ್ಷದ ಈ ವಿದ್ಯಾರ್ಥಿನಿ ಹೆದ್ದಾರಿಯಲ್ಲಿ ಹೊರಗೆ ಬಂದು, ಸಾಮಾನಿನ ಪೆಟ್ಟಿಗೆ ತೆರೆದಳು. ಯಾವ ಸಾಧನಗಳೂ ಇರಲಿಲ್ಲ.

ಇದೇ ಸಮಯಕ್ಕೆ ಅಲ್ಲೊಂದು ಮೋಟಾರು ಕಾರು ಬಂದು ನಿಂತಿತು. ಪಾಲ್ ಮತ್ತು ಡೇನ್ ವುಡ್ಡ್ರಾಕ್ ತಮ್ಮ ಮನೆಯ ಹತ್ತಿರದಲ್ಲಿರುವ ದುರಸ್ತಿ ಸ್ಥಳದವರೆಗೆ ತಮ್ಮ ಜೊತೆಗೆ ಬರುವಂತೆ ಕ್ಲೇಳಿಗೆ ಹೇಳಿದರು. ಆ ಸ್ಥಳ ತಲುಪಿದಾಗ ಅದು ಮುಚ್ಚಿ ಬಿಟ್ಟಿತ್ತು. ''ನಮ್ಮ ಮನೆಗೆ ಹೋಗೋಣ'' ಎಂದು ಪಾಲ್ ಹೇಳಿದ. ಒಂದು ಟೈರಿಗಾಗಿ ಆ ದಂಪತಿಗಳು ಹತ್ತಿರದವರನ್ನು ಕೇಳಿ ಬಂದರು. ಎಲ್ಲೂ ಸಿಗಲಿಲ್ಲ. ಇದೊಂದು ಸದವಕಾಶ ವೆಂದು ಅವರು ಭಾವಿಸಿದರು. ''ಇಲ್ನೋಡಮ್ಮ.. ನಮ್ಮ ಫೋರ್ಡ್ ಎಸ್ಕಾರ್ಟ್‌ನ್ನು ನೀನು ಒಯ್ದು ಬಿಡು. ನಾವು ರಜೆಯ ದಿನಗಳಲ್ಲಿ ಬಳಸುವುದಿಲ್ಲ'' ಎಂದು ಹೇಳುತ್ತ ಪಾಲ್ ಅವಳ ಕೈಗೆ ಮೋಟಾರಿನ ಕೀಲಿ ಕೈಯಿತ್ತನು.

ಸ್ತಂಬೀಭೂತಳಾದ ಕ್ಲೇ'' ಆದರೆ ನಾನು ಹೋಗುತ್ತಿರುವುದು ದಕ್ಷಿಣ ಕೆರೊಲಿನಾದವರೆಗೆ ಮತ್ತು ಎರಡು ವಾರಗಳ ವರೆಗೆ ಅಲ್ಲಿಯೇ ಇರುವೆ'' ಎಂದು ಸಂಕೋಚ ದಿಂದ ನುಡಿದಳು.

''ಅದು ನಮಗೆ ಗೊತ್ತಿದೆ... ನೀನು ಮರಳಿ ಬಂದಾಗ ನಾವಿಲ್ಲಿರುತ್ತೇವೆ. ನೀನೇನಾದರೂ ಸಂಪರ್ಕಿಸುವದಿದ್ದರೆ ನಮ್ಮ ದೂರವಾಣಿಯ ಸಂಖ್ಯೆ ಇಲ್ಲಿದೆ'' ಎಂದು ಪಾಲ್ ಹೇಳಿದ.

ಅವಳು ಅನುಮಾನಪಡುತ್ತಿದ್ದಂತೆ, ಆ ದಂಪತಿಗಳು ಅವಳ ಚೀಲಗಳನ್ನು ತಮ್ಮ ಕಾರಿನಲ್ಲಿಟ್ಟು ಅವಳನ್ನು ಬೀಳ್ಕೊಟ್ಟರು. ಎರಡು ವಾರಗಳ ನಂತರ ಅವಳು ಮರಳಿ ಬಂದಾಗ ಅವಳ ಹಳೆಯ ಟೊಯೋಟಾ ವಾಹನವನ್ನು-ಒಳಗೆ ಹಾಗೂ ಹೊರಗೆ-ಸ್ವಚ್ಛಗೊಳಿಸಲಾಗಿತ್ತಲ್ಲದೆ ಅದರೊಳಗೆ ೩ ಟೈರುಗಳನ್ನು ಮತ್ತು ರೇಡಿಯೋ ಕೂಡಿಸಲಾಗಿತ್ತು.

''ನಿಮಗೆ ತುಂಬಾ ಧನ್ಯವಾದಗಳು. ನಾನು ನಿಮಗೆ ಕೊಡಬೇಕಾದ ಹಣವೆಷ್ಟು?'' ಎಂದು ಕೇಳಿದಳು. ''ಛೇ ಛೇ... ನಮಗೆ ಹಣಕೊಡುವ ಅವಶ್ಯಕತೆಯಿಲ್ಲ. ಇದು ನಮಗೆ ಸಂತೋಷ ತಂದಿದೆ ''ಎಂದು ಪಾಲ್ ಹೇಳಿದ . ಈ ಪ್ರಸಂಗ ಅವರಿಗೆ ಸಂತೋಷ ತಂದಿತ್ತಾದರೂ, ಇದೇ ರೀತಿಯಲ್ಲಿ ಮತ್ತೊಬ್ಬರಿಗೆ ಕಷ್ಟದಲ್ಲಿ ಸಹಾಯ ಮಾಡಿ ತಾನೂ ಸಂತೋಷ ಪಡಬಹುದೆಂಬ ಅಂಶ ಅವಳಿಗೆ ಮನವರಿಕೆಯಾಯಿತು.

ಬೆಳಸಿ ಪುಸ್ತಕ ಮೈತ್ರಿ

ಪ್ರಸನ್ನಾ
'ಮೈಸೂರು ಮಿತ್ರ' ಕಚೇರಿ
೩೮೪೪/೩ ಒಂದನೆಯ ಮಹಡಿ
ಹಾಜಿ ಅಲಿ ಸಂಕೀರ್ಣ
ಹೈವೇ ವೃತ್ತ, ಸಯ್ಯಾಜಿರಾವ್ ರಸ್ತೆ
ಮೈಸೂರು-೫೭೦ ೦೧೫

ಅಮೆರಿಕಾದ ಅಧ್ಯಕ್ಷರಾಗಿದ್ದ ರೂಸ್‌ವೆಲ್ಟ್ ಅವರಿಗೆ ಒಂದು ದೋಣಿ ಬಹುಮಾನವಾಗಿ ಬಂದಿತ್ತು. ಆ ದೋಣಿಯನ್ನು ಕಳ್ಳರು ಕದ್ದೊಯ್ದಿದ್ದರು. ಅದು ವಿಪರೀತ ಚಳಿಗಾಲದ ದಿನ. ರೂಸ್‌ವೆಲ್ಟ್ ಇನ್ನೊಂದು ದೋಣಿಯನ್ನು ಪಡೆದು, ಲಿಟ್ಲ್ ಮಿಸೌರಿ ನದಿಯಲ್ಲಿ ಕಳೆದುಹೋದ ದೋಣಿಯ ಪತ್ತೆಗಾಗಿ ತೆರಳಿದರು. ಕೆಲವು ದಿನಗಳ ಬಳಿಕ ಅವರು ಕಳ್ಳರನ್ನು ಹಿಡಿದು, ತಮ್ಮ ರೈಫಲ್ ತೋರಿಸಿ ಅದರ ಸಹಾಯದಿಂದ ಕಳ್ಳರ ಸಮೇತ ದೋಣಿಯನ್ನು ನದಿ ದಡಕ್ಕೆ ಕರೆತಂದರು. ಆ ವೇಳೆಗಾಗಲೇ ಕಳ್ಳರು ಶರಣಾಗಿದ್ದರು.

ಕಳ್ಳರನ್ನು ವಿಚಾರಣೆಗಾಗಿ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು. ಅವರು ಸೆರೆಮನೆಗೆ ತೆರಳುವಾಗ ರೂಸ್‌ವೆಲ್ಟ್ ಕಳ್ಳರನ್ನು ತಾವೇ ಕರೆದೊಯ್ದರು. ಸುಮಾರು ೬೫ಕಿಮೀ ದೂರದ ಈ ಮಾರ್ಗವನ್ನು ಕ್ರಮಿಸುವಾಗ ಅವರು 'ಅನ್ನಾ ಕರೆನಿನಾ' ಪುಸ್ತಕ ಓದುತ್ತಾ ಸಾಗಿದ್ದರು.

ಈ ಕಥೆ ಅಥವಾ ದೃಷ್ಟಾಂತ ಹೇಳುವ ಉದ್ದೇಶ ಇಷ್ಟೇ. ಓದಿಗೆ ರೂಸ್‌ವೆಲ್ಟ್ ಎಷ್ಟು ಮಹತ್ವ ನೀಡುತ್ತಿದ್ದರು ಎನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ!

'ತಮಗೆ ಓದಲು ವೇಳೆಯೇ ಸಿಗುತ್ತಿಲ್ಲ' ಎಂದು ಜನತೆ ಹೇಳುತ್ತಾರೆ. ಆದರೆ ಈ ಜನರಿಗೆ ದಿನದಲ್ಲಿ ಸರಾಸರಿ ನಾಲ್ಕು ತಾಸು ದೂರದರ್ಶನ ನೋಡಲು ಅವಕಾಶ ಲಭಿಸುತ್ತದೆ. ಸರಾಸರಿ ಒಬ್ಬ ಮನುಷ್ಯ ಒಂದು ನಿಮಿಷಕ್ಕೆ ೨೫೦ ಪದಗಳನ್ನು ಓದುತ್ತಾನೆ. ಈ ಅಂಕಿ- ಅಂಶಗಳ ಆಧಾರದಲ್ಲಿ ಒಬ್ಬಳು ವಾರವೊಂದರಲ್ಲಿ ಟಿ.ಎಸ್.ಎಲಿಯಟ್‌ನ ಸಂಪೂರ್ಣ ಪದ್ಯಗಳನ್ನು, ಥಾರ್ನ್‌ಟನ್ ವೈಲ್ಡರ್‌ನ ಎರಡು ನಾಟಕಗಳನ್ನು, ಮಾಯಾ ಎಂಜೆಲೋ ಅವರ ಸಂಪೂರ್ಣ ಕವನಗಳನ್ನು, ಫೌಲ್ನರ್‌ನ 'ದಿ ಸೌಂಡ್ ಎಂಡ್ ದಿ ಫ್ಯೂರಿ', ಎಫ್.ಸ್ಕಾಟ್ ಫಿಜರಾಲ್ಡ್‌ನ 'ದಿ ಗ್ಯಾಟ್ಸ್‌ಬೈ' ಮತ್ತು ಪಾಮ್ಸ್‌ನ ಪುಸ್ತಕಗಳನ್ನು ಓದಬಹುದು.

ಇಂದಿನ ದಿನಗಳಲ್ಲಿ ಮಾಹಿತಿ ಬೆರಳಿನ ತುದಿಯಲ್ಲಿ ಲಭ್ಯವಿರುವಾಗ ಒಂದು ವಾರ ಎನ್ನುವುದು ಬಹು ದೀರ್ಘವಾಗುತ್ತದೆ. 'ಮಾಹಿತಿಯೇ ಕಲಿಯುವಿಕೆ' ಎನ್ನುವ ವಿಚಾರವನ್ನು ನಾವು ಮಾರಾಟ ಮಾಡಿದ್ದೇವೆ. ರಾಜ್ಯದ ಪ್ರದೇಶಗಳನ್ನು ತಿಳಿಯುವುದು ಉಪಯುಕ್ತವಾದರೂ ಅದು ನಿಖರವಾಗಿ ಕಲಿಯುವಿಕೆ ಆಗಲಾರದು. ಕಲಿಯುವಿಕೆ ನಿಜವಾಗಿ ಇರುವುದು ಪುಸ್ತಕದಲ್ಲಿ. ಸಾಹಸ, ಸಂತೋಷ, ವೈಭವ, ಮಾನವನ ಸ್ವಭಾವ ಅರಿತುಕೊಳ್ಳುವುದು. ನಮ್ಮನ್ನು ನಾವೇ ತಿಳಿದು

ಜನವರಿ ೨೦೦೧ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಡೇವಿಡ್ ಮ್ಯಾರ್ಕುಸೋ ಅವರ 'ರೀಡ್ ಮೈ ಲಿಪ್ಸ್' ಎಂಬ ಲೇಖನದ ಅನುವಾದ

ಕೊಳ್ಳುವುದು, ನಮ್ಮ ಜಗತ್ತು, ನಮ್ಮ ಸ್ಥಳ ಎಲ್ಲವೂ ಪುಸ್ತಕದಲ್ಲಿವೆ.

ಜೀವನಕ್ಕಾಗಿ ನಮ್ಮ ಎಲ್ಲ ಜೀವಿತೋಪಾದಿಯುಲ್ಲೂ ಓದಬೇಕು. ಕಾಲವನ್ನು ಕಳೆಯಲು ಇಂಥ ಪರಿಣಾಮಕಾರಿ ಸಂಶೋಧನೆ ಎಂದೂ ಆಗುವುದಿಲ್ಲ. ಇದೊಂದು ಬಹು ದೊಡ್ಡ ಕೊಡುಗೆ. ಒಂದು ಉತ್ತಮ ಪುಸ್ತಕ ಓದಿದರೆ ಅದು ಮತ್ತೊಂದು ಪುಸ್ತಕ ಓದಲು ಅನುವು ಮಾಡಿಕೊಡುತ್ತದೆ. ಪುಸ್ತಕಗಳು ಯಾವಾಗಲೂ ಇದನ್ನೇ ಮಾಡುತ್ತವೆ.

ದೊಡ್ಡ ಬರಹಗಾರನನ್ನು ಆಯ್ದುಕೊಂಡು ಅವನ ಎಲ್ಲ ಕೃತಿಗಳನ್ನು ಓದಬೇಕು. ನಾವೆಂದೂ ಕಾಣಲು ಸಾಧ್ಯವಾಗದ ಸ್ಥಳಗಳ ಕುರಿತಾಗಿ ಓದಬೇಕು. ಇತಿಹಾಸವನ್ನು ಬದಲಿಸಿದ ಪುಸ್ತಕಗಳನ್ನು ಓದಬೇಕು. ಟಾಮ್ ಪೇನ್ಸ್‌ನ 'ಕಾಮನ್‌ಸೆನ್ಸ್' ಮಹಾತ್ಮಾ ಗಾಂಧೀಜಿಯವರ ಆತ್ಮಕಥೆ, ರಚೆಲ್ ಕಾರ್ಸನ್‌ನ 'ಸೈಲೆಂಟ್ ಸ್ಪ್ರಿಂಗ್' ಇಂಥ ಪುಸ್ತಕಗಳು.

ಯಾವ ಪುಸ್ತಕವನ್ನು ಓದಬೇಕೆಂಬ ಉದ್ದೇಶ ಹೊಂದಿರುತ್ತೇವೆಯೋ ಅಂಥ ಪುಸ್ತಕಗಳನ್ನು ಓದಬೇಕು. ನಾವು ಪ್ರೀತಿಸಿದ ಪುಸ್ತಕ ಓದಿದಾಗ ಅದು ನಮ್ಮ ಜೀವನಾನುಭವವನ್ನು ಹೆಚ್ಚಿಸುತ್ತದೆ. ಪುಸ್ತಕ ಜ್ಯೋತಿಯನ್ನು ಬೆಳಗುತ್ತದೆ ;ಎಲ್ಲೆಡೆ ಪ್ರಕಾಶವನ್ನು ಹರಡುತ್ತದೆ.

'ನಾವೆಲ್ಲಿಗೆ ಹೋಗುತ್ತೇವೆಯೋ ಅಲ್ಲಿಗೆ ಒಂದು ಪುಸ್ತಕವನ್ನು ಕೊಂಡೊಯ್ಯಬೇಕು' ಎನ್ನುವ ಮಾತು ಹಳೆಯದಾದರೂ ಉತ್ತಮ ಉಪದೇಶವಾಗಿದೆ. ಜಾನ್ ಆಡಮ್ಸ್ ತನ್ನ ಪುಸ್ತಕ ಜಾನ್ ಕ್ವಿನ್ಸಿಗೆ 'ಕವನವೊಂದು ನಿನ್ನ ಕಿಸೆಯಲ್ಲಿದ್ದರೆ ನೀನೆಂದೂ ಒಬ್ಬಂಟಿಯಾಗಿ ಇರಲಾರೆ' ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.



ಔದಾರ್ಯಮೂರ್ತಿ ಕುಮಾರಸ್ವಾಮಿ

ಡಾ. ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ, ಬಾಗಲಕೋಟೆ-೫೮೭ ೧೦೧

ನಾನು ಬೆಳಗಾವಿಯ ಮೆಡಿಕಲ್ ಕಾಲೇಜನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಮಿಲಿಟರಿ ವೈದ್ಯರು ಜಾಸ್ತಿ ಸಂಪರ್ಕಕ್ಕೆ ಬರುತ್ತಿದ್ದರು. ವೈದ್ಯರಿಂದ ಪ್ರಾರಂಭವಾಗಿ ಉಳಿದ ಅಧಿಕಾರಿಗಳೂ ಸ್ನೇಹಿತರಾಗುತ್ತಿದ್ದರು. ಅಂಥವರಲ್ಲಿ ಕುಮಾರಸ್ವಾಮಿ ಒಬ್ಬ, ಇವರು ನನ್ನ ಹತ್ತಿರ ಬಂದದ್ದು ಯಾವುದೋ ಪರೀಕ್ಷೆ ಮಾಡಿಸಿಕೊಳ್ಳಲು. ಅವರ ರೂಪ ಲಕ್ಷಣಗಳು ಆಕರ್ಷಕವಾಗಿದ್ದುವು. ಎತ್ತರದ ಆಳು, ದಷ್ಟಪುಷ್ಟ ದೇಹ, ಗುಂಡು ಮುಖ, ಯಾವಾಗಲೂ ಮುಗುಳು ನಗು ಅವರ ಮುಖಕ್ಕೆ ಅಂಟಿಕೊಂಡಿರುತ್ತಿತ್ತು. ಶುಭ್ರ ಹಲ್ಲು, ಕಪ್ಪು ಕೂದಲು, ಯಾರೊಡನೆ ಮಾತಾಡಿದರೂ ಆತ್ಮೀಯತೆ ತುಂಬಿ ಸೂಸುತ್ತಿತ್ತು. ಅವರ ವೇಷ ಭೂಷಣದಿಂದಲೇ ಅವರೊಬ್ಬ ದೊಡ್ಡ ಹುದ್ದೆಯ ಅಧಿಕಾರಿ ಎನಿಸುತ್ತಿತ್ತು. ಕುಮಾರಸ್ವಾಮಿ ಬೆಂಗಳೂರಿನ ಸಮೀಪದ ಹಳ್ಳಿಯವರು. ಅವರ ಮಡದಿ ಶಶಿಕಲಾ ಚಿತ್ರದುರ್ಗದವಳು. ನೋಡಲು ಆಕೆಯ ರೂಪ ಬಲು ಆಕರ್ಷಕ. ಆಕೆಯ ನಡಿಗೆ, ಮಾತು, ನಗೆ, ಮುಗುಳು ನಗೆ ಬಹಳ ಮೋಹಕವಾಗಿದ್ದುವು. ಆಕೆ ಉಡುವ ಸೀರೆ ತೊಡುವ ಕುಪ್ಪಸಗಳೂ ದೇಹದ ಸೌಂದರ್ಯವನ್ನು ಎದ್ದು ಕಾಣುವಂತೆ ಮಾಡುತ್ತಿದ್ದವು. ಆಕೆಯನ್ನು ಪದೇ ಪದೇ ನೋಡಬೇಕು ಮಾತಾಡಿಸಬೇಕು ಎನಿಸುತ್ತಿತ್ತು.

ಇವರಿಗೆ ಒಂದು ಗಂಡು ಮಗು. ಮೂರು ವರ್ಷ ವಯಸ್ಸಿನದು. ಗುಂಡುಗುಂಡಾಗಿ ಬೆಳೆದಿತ್ತು. ಯಾವುದೇ ಸಮಾರಂಭ ಇರಲಿ ಇಡೀ ಕುಟುಂಬವೇ ಹಾಜರು ಇರುತ್ತಿತ್ತು. ಗಂಡಹೆಂಡಂದಿರಂತೂ ಬಹಳೇ ಅನ್ಯೋನ್ಯವಾಗಿದ್ದರು. ದಂಪತಿಗಳ ಜೋಡಿ ಬಹಳ ಸುಂದರವಾಗಿತ್ತು. ಅವರು ನನ್ನ ಮನೆಗೆ ಬಂದು ಹೋಗುತ್ತಿದ್ದರು. ನಾನು ಅವರನ್ನು ಕಾಣಲು ಹೋಗುತ್ತಿದ್ದೆ. ಮಿಲಿಟರಿಯಲ್ಲಿ ಇದ್ದೂ ಮಾದಕ ಪೇಯಗಳನ್ನು ಸೇವಿಸುತ್ತಿರಲಿಲ್ಲ. ಪ್ರತಿವಾರ ಎರಡು ಬಾರಿಯಾದರೂ ಕೂಡಿ ಹರಟೆ ಹೊಡೆಯುತ್ತಿದ್ದೆವು.

ಒಮ್ಮೆ ಒಂದು ತಿಂಗಳಾದರೂ ಆಸಾಮಿಯ ಪತ್ತೆ ಇಲ್ಲ. ಏನಾಗಿದೆಯೋ ಎಂದು ಚಿಂತಿಸಿದೆವು. ಕೊನೆಗೆ ಒಂದು ದಿನ ಸಂಜೆ ೭.೩೦ಕ್ಕೆ ನನ್ನ ಚೇಂಬರಿಗೆ ಬಂದು, ಒಳಗೆ ಬರಬಹುದೇ ಎಂದರು? ನಾನು ಅವರನ್ನು ನೋಡುತ್ತಲೆ ಕೈಯಲ್ಲಿದ್ದ ಲೇಖನಿಯನ್ನು ಕೆಳಗಿಟ್ಟೆನು. ಎದ್ದು ಹೋಗಿ ಕೈಕುಲುಕಿ ನಗುತ್ತ ಕರೆತಂದೆನು. ಇಬ್ಬರೂ ಆಸನಗಳ ಮೇಲೆ ಕುಳಿತೆವು. ''ಏನು ಕುಮಾರಸ್ವಾಮಿ ಎಲ್ಲಿಗೆ ಹೋಗಿದ್ದಿರಿ? '' ''ಮುಂಬಯಿಗೆ ಹೋಗಿದ್ದೆ'' ಎಂದರು.

''ಎಷ್ಟು ದಿನ?'' ಎಂದೆ.

''ಒಂದು ವಾರ''.

''ಹಾಗಾದರೆ ಇನ್ನುಳಿದ ಮೂರುವಾರ ಬರದಿರಲು ಏನು ಕಾರಣ?''

''ಹೇಳುತ್ತೇನೆ ಸರ್ ನೀವು ನನಗೆ ಹಿರಿಯರು, ಹಿತಚಿಂತಕರು. ನಿಮ್ಮ ಸಂಗಡ ಮಾತಾಡಲು ಬಂದಿದ್ದೇನೆ''

ನಾನು ಕೇಳಿದೆ ''ತಮ್ಮ ಶ್ರೀಮತಿ ಸೌಖ್ಯವೇ?''

''ಹೌದು ಅವಳು ಸೌಖ್ಯವಾಗಿರುವಳು''.

''ತಮ್ಮ ಮಗನು ಸೌಖ್ಯವೇ?''

''ಅವನನ್ನು ಸೌಖ್ಯವಾಗಿಡಲು ಒಬ್ಬ ಅಡುಗೆಯವಳು ಬೇಕಾಗಿದ್ದಾಳೆ. ಅವನಿಗೆ ತಿನ್ನಲು ಹದವಾದ ತಿನಿಸು ಬೇಕು. ಅದನ್ನು ಮಾಡಲು ಅನುಕೂಲವಿಲ್ಲ. ನಾನು ಈ ಊರಿನವನಲ್ಲ. ಕಾರಣ ನಿಮಗೆ ಪರಿಚಿತರಾರಾದರು ಇದ್ದರೆ ಹೇಳಿರಿ. ನಾನು ಕೈ ತುಂಬ ಸಂಬಳ ಕೊಡುವೆನು.''

ಕುಮಾರಸ್ವಾಮಿಯೋ ದೊಡ್ಡಅಧಿಕಾರಿ. ಅವನ ಶ್ರೀಮತಿ ಹೇಳಿಕೊಳ್ಳುವಂಥ ಸುಂದರಿ. ಬಹುಶಃ ತನ್ನ ವೇಳೆಯನೆಲ್ಲ ಮೇಕಪ್ ಮಾಡುವುದರಲ್ಲಿ ಕಳೆಯುತ್ತಿರಬೇಕು ಹಾಗಾದರೆ ಮಗುವಿಗೆ ತಿನಿಸು ಮಾಡುವರಾರೆಂದು ತರ್ಕಿಸಿ, ಹೇಳಿದೆ. ''ಅಡ್ಡಿ ಇಲ್ಲ. ನೋಡೋಣ. ಅಡುಗೆಯವಳನ್ನು ಹುಡುಕಿ ಕಳಿಸುತ್ತೇನೆ. ಅವಳನ್ನು ನಿಮ್ಮ ಶ್ರೀಮತಿ ಒಪ್ಪಬೇಕಲ್ಲ. ಅದಿರಲಿ ಮುಂಬೈಗೆ ಹೋದ ವಿಷಯವೇನು? ಮೊದಲು ಹೇಳಿರಿ.'' ಕುಮಾರಸ್ವಾಮಿ ಮುಖ ಕೆಳಗೆ ಮಾಡಿದ, ''ನೋಡಿ ಡಾಕ್ಟರರೇ, ನಾನು ಎಲ್ಲವನ್ನೂ ಹೇಳಲು ಬಂದಿರುವೆ. ಕೇಳಿದ ಮೇಲೆ ನಾನು ಮಾಡಿದ್ದು ಸರಿಯೋ ತಪ್ಪೊ ಹೇಳಿರಿ.''

ಒಂದು ತಿಂಗಳ ಹಿಂದೆ ನಮ್ಮ ಮನೆಗೆ ಓರ್ವ ಅತಿಥಿ ಬಂದರು. ಅವರು ಅಮೆರಿಕೆಯಲ್ಲಿ ಒಂದು ವಿಮಾ ಕಂಪನಿಯಲ್ಲಿ ಇದ್ದಾರೆ. ಅವರೂ ಚಿತ್ರದುರ್ಗದವರೇ. ನನ್ನ ಹೆಂಡತಿಗೆ ತೀರ ಪರಿಚಿತರು. ಅಂದರೆ ಅವರು ಕಾಲೇಜು ಕೂಡಿ ಕಲಿತವರು. ಚಿತ್ರದುರ್ಗದಿಂದ ಶಶಿಕಲಾಳನ್ನು ನೋಡಲು ಬರಬಹುದೇ ಎಂದು ಫೋನ್ ಮಾಡಿದರು. ನಾನು 'ಅವಶ್ಯವಾಗಿ ಬನ್ನಿರಿ' ಎಂದೆ. ಮರುದಿನವೇ ಬಂದರು. ಅವರನ್ನು ಸ್ವಾಗತಿಸಿದೆವು. ನನ್ನ ಹೆಂಡತಿ ಬಹಳ ಖುಷಿಪಟ್ಟಳು ಆಕೆ ನೆಲದ ಮೇಲೆ ಇದ್ದಿಲ್ಲ. ಗಾಳಿಯಲ್ಲಿ ತೇಲುತ್ತಿರುವಂತೆ ಅನಿಸಿತು. ತವರು ಮನೆಯವರು ಎಂದರೆ ಸ್ತ್ರೀಯರು ಹಾಗೆ, ಮಗನು ತನ್ನ ಎಲ್‌ಕೆಜ ಗೆ ಹೋದ. ನನ್ನ ಶ್ರೀಮತಿಗೆ ಹೇಳಿದೆ. 'ನೋಡು ಅವರನ್ನು ಕರೆದುಕೊಂಡು ಬೆಳಗಾವಿಯನ್ನು ಸುತ್ತಿಬಾ. ನಾನು ಇಂದು ನನ್ನ ಸ್ಕೂಟರ್ ಮೇಲೆ ಆಫೀಸಿಗೆ ಹೋಗುವೆ. ನಿಮಗೆ ಕಾರು ಬಿಡುವೆ. ಪೆಟ್ರೋಲಿಗೆ ಹಣ ಇಟ್ಟಿರುವೆ. ' ಅತಿಥಿಯ ಕಡೆಗೆ ತಿರುಗಿ. 'ಸ್ನೇಹಿತರೆ, ಈ ಊರು ಬಹಳ ಸುಂದರ. ಇಲ್ಲಿಯ ನೀರು , ಹವೆ ಹೊಗಳುವಂಥಾದ್ದು. ತುಂಗಾ ಪಾನ ಎನ್ನುವರಲ್ಲ ಆದರೆ ಇಲ್ಲಿಯ ನೀರಿನ ರುಚಿ ಅದಕ್ಕಿಂತಲೂ ಮಿಗಿಲು. ನೀವಿಬ್ಬರೂ ಸುತ್ತಾಡಿಕೊಂಡು ಬನ್ನಿರಿ' ಎಂದೆ. ಕೊನೆಯಲ್ಲಿ 'ಗುಡ್ ಟೈಮ್' ಎಂದು ಹೇಳಿದೆ.

ಸಂಜೆಗೆ ಮನೆಗೆ ಬಂದೆ. ಹರಟೆ ಹೊಡೆದೆವು. ಅಲ್ಲಿಯ ವಾಕಿಂಗ್ ಹೋಗಿ ಬಂದು ಊಟ ಮಾಡಿದೆವು. ಅವರು ನಮ್ಮಲ್ಲಿಯೇ ಉಳಿದರು. ಹೀಗೆ ಎರಡು ದಿನ ಕಳೆದವು. ಮೂರನೆಯ ದಿನ ಶಶಿಕಲಾ ನನ್ನ ಸಂಗಡ ಮಾತಾಡುವುದಿದೆ ಎಂದಳು. ಒಂದು ಕೋಣೆಯೊಳಗೆ ಹೋದೆವು. ಅವಳು 'ನಿಮಗೆ ಒಂದು ಮಾತು ಹೇಳಬೇಕಾಗಿದೆ. ಈ ಮಾತನ್ನು ನಾನು ಯೋಚಿಸಿ ಹೇಳುತ್ತಿರುವೆ. ನಿಮಗೆ ಹೇಗೆ ಅನಿಸುವುದೋ ಗೊತ್ತಿಲ್ಲ. ಅದರೂ ಹೇಳಬೇಕಾಗಿದೆ ಹೇಳುವೆ ಮನೆಗೆ ಬಂದ ಅತಿಥಿ ನನ್ನ ಸಹಪಾಠಿ. ನಾವಿಬ್ಬರೂ ಕಾಲೇಜಿನಲ್ಲಿ ಕೂಡಿ ಕಲಿತವರು. ಒಬ್ಬರೊಬ್ಬರನ್ನು ತಿಳಿದು ಕೊಂಡೆವು. ಪ್ರೀತಿಸಿದೆವು. ಮದುವೆ ಆಗುವುದೆಂದು ನಿರ್ಣಯಿಸಿದೆವು. ಇದು ಮನೆಯರಿಗೂ ಗೊತ್ತಾಯಿತು. ನನ್ನ ತಾಯಿ ಹೇಳಿದಳು. 'ನನ್ನ ಮಗಳನ್ನು ಕೊಡಲು ನನ್ನ ಅಭ್ಯಂತರವಿಲ್ಲ. ಆದರೆ ಹುಡುಗ

ದುಡಿಯುತ್ತಿಲ್ಲ.ಹೇಗೆ ಅವರ ಜೀವನ' ಎಂದು ಹಟ ಹಿಡಿದಳು. ಆಗ ಹುಡುಗ ನೌಕರಿಗೆ ಪ್ರಯತ್ನ ಮಾಡತೊಡಗಿದ. ಅವನಿಗೆ ಅಮೆರಿಕೆಯಲ್ಲಿ ಕೆಲಸ ಸಿಕ್ಕಿತು. ದುಡಿದು ಹಣ ಗಳಿಸಿ ಬರುತ್ತೇನೆ. ನೀನು ಸ್ವಲ್ಪ ತಾಳಿಕೋ ಎಂದು ಹೇಳಿ ಅಮೆರಿಕೆಗೆ ಹೋದ. ನಂತರ ಅವನ ಸುದ್ದಿಯೇ ಇಲ್ಲ. ಒಂದು ವರ್ಷ ವಾಯಿತು. ಮೂರು ವರ್ಷಗಳಾದುವು. ಮೋಸ ಹೋದೆವೆಂದು ತಿಳಿದೆವು. ಅಷ್ಟರಲ್ಲಿ ನೀವು ನನ್ನನ್ನು ನೋಡಲು ಬಂದಿರಿ. ನಿಮ್ಮ ವ್ಯಕ್ತಿತ್ವ ನನಗೆ ಹಿಡಿಸಿತು. ಮನೆಯವರು ನನ್ನನ್ನು ನಿಮಗೆ ಕೊಟ್ಟು ಮದುವೆ ಮಾಡಿದರು. ನಿಮ್ಮೊಡನೆ ಸಂತೋಷವಾಗಿ ಇದ್ದೆ. ಈಗ ಸ್ನೇಹಿತ ಮರಳಿ ನನ್ನ ಸಲುವಾಗಿ ಬಂದಿದ್ದಾರೆ. ನನ್ನನ್ನು ಮದುವೆ ಆಗಲು ಒಪ್ಪಿದ್ದಾರೆ. ಅಮೆರಿಕೆಗೆ ಹೊರಡಲು ತಯಾರಿ ಮಾಡಿದ್ದಾರೆ. ನೀವು ನಮ್ಮನ್ನು ನಮ್ಮ ದಾರಿಯಲ್ಲಿ ನಡೆಯಲು ಬಿಡಿರಿ.'

ನನಗೆ ನನ್ನ ಶಕ್ತಿ ಇಂಗಿದಂತಾಯಿತು. ದಂಗು ಬಡಿಯಿತು. ಸುತ್ತಲಿನದೆಲ್ಲ ಶೂನ್ಯ ಎನಿಸಿತು. ಆಕೆ ಏನೂ ಉಳಿಸಿಲ್ಲ. ಎಲ್ಲವನ್ನು ನನ್ನ ಮುಂದೆ ಇಟ್ಟಿರುವಳು. ಅವರು ನಿರ್ಣಯವನ್ನು ಮಾಡಿರುವರು. ನಾನು ಬೇಡ. ಬೇಕು ಎಂಬುದು ಇಲ್ಲವೇ ಇಲ್ಲ. ಒಂದು ಗಂಟೆ ಮಾತಾಡಲಿಲ್ಲ. ಅತಿಥಿಗಳು ಬೇರೆ ಕೆಲಸವೆಂದು ಹೊರ ಹೋಗಿದ್ದರು. ಶಶಿಕಲಾಳನ್ನು ನೋಡಿದೆ, ಅವಳು ನನ್ನನ್ನೇ ದುರುಗುಟ್ಟಿ ನೋಡುತ್ತಿದ್ದಳು. ಮುಖದ ಮೇಲೆ ಕಾತರ ತುಂಬಿ ಇಳಿಯುತ್ತಿತ್ತು. 'ನಿನ್ನ ತಂದೆತಾಯಂದಿರು ಇದಕ್ಕೆ ಒಪ್ಪಿರುವರೋ' ಎಂದೆ. ಆಕೆ ಹೇಳಿದಳು 'ಅವರಿಗೆ ಹೇಳಿಲ್ಲ. ನಾವು ಅಮೆರಿಕೆ ತಲುಪಿದ ಮೇಲೆ ಓಲೆ ಬರೆಯುವೆವು'. ನಾನಂತೂ ಅರ್ಧ ಸತ್ತವನಾಗಿದ್ದೆ.

'ಮಗುವಿನ ಬಗ್ಗೆ ಏನು ವಿಚಾರಿಸಿರುವಿ' ಎಂದೆ. ಶಶಿಕಲಾ ಅದನ್ನು ವಿಚಾರಿಸಿದ್ದಳು. ತಡಮಾಡದೆ ಹೇಳಿದಳು. 'ನೋಡಿ ಆ ಮಗು ನಿಮ್ಮಿಂದ ಹುಟ್ಟಿದ್ದು. ಅದನ್ನು ನೀವೆ ಇಟ್ಟುಕೊಳ್ಳಿ. ನೀವೆ ಜೋಪಾನ ಮಾಡಿರಿ. ನಾನು ಕರೆದುಕೊಂಡು ಹೋಗುವುದಿಲ್ಲ. ಅವನನ್ನು ನೀವು ಏನೇ ಮಾಡಿರಿ.'

ಕುಮಾರಸ್ವಾಮಿ ಇದನ್ನು ಹೇಳುತ್ತಿರುವಾಗ ನನ್ನ ಅರಿವೇ ಹಾರಿಹೋಗಿತ್ತು. ನಾನೂ ಮೂಕನಾಗಿದ್ದೆ. ನನ್ನ ಎದೆ ಬಡಿದುಕೊಳ್ಳುತ್ತಿತ್ತು. ನಿಜವಾಗಿ ನನ್ನ ಕುರ್ಚಿಯಲ್ಲಿ ಕುಸಿದಿದ್ದೆ. ಕುಮಾರಸ್ವಾಮಿ ತಮ್ಮ ಮಾತು ಮುಂದುವರಿಸಿದರು. ''ನೋಡ್ರಿ ಸರ್ ನಾನು ಮಾಡುವದು ಏನೂ ಉಳಿದಿರಲಿಲ್ಲ. ಕೊನೆಗೆ ಹೇಳಿದೆ 'ಶಶಿಕಲಾ ಈ ಯೋಜನೆ ನಿನಗೆ ಸರಿ ಎನಿಸಿದರೆ ಹಾಗೆ ಮಾಡು. ನನಗೆ ಇದು ಅಷ್ಟು ಸರಿ ಎನಿಸುವದಿಲ್ಲ.' ಆಕೆ ಹೇಳಿದಳು 'ಹೌದು ಸಮಾಜದ ಎದುರು ಇದು ಸರಿ ಅಲ್ಲ. ಆದರೆ ನನ್ನ ಜೀವನದ ಬಗ್ಗೆ ವಿಚಾರಿಸಿದರೆ ನನಗೆ ಬೇರೆ ಮಾರ್ಗವಿಲ್ಲ.' ನಾನು ಸರಿ ಎಂದು ಹೇಳಿ ಹೊರಗೆ ಹೋದೆ.

ಮರುದಿನ ಒಂದೊಂದೆ ಸೂಟಕೇಸುಗಳು ತಯಾರಾಗಹತ್ತಿದುವು. ಅಷ್ಟು ದೊಡ್ಡ ಸೂಟಕೇಸ್ ನಮ್ಮ ಮನೆಯಲ್ಲಿ ಇದ್ದಿಲ್ಲ. ಅವು ನೇರವಾಗಿ ಬೆಳಗಾವಿಯ ಪೇಟೆಯಿಂದ ಬಂದಿದ್ದುವು. ಬಂದ ಅತಿಥಿಗಳು ತಮ್ಮವೆಂದು ತಂದಿದ್ದ ಮೂರು ಸೂಟಕೇಸು. ಶಶಿಕಲಾ ತನ್ನ ವಸ್ತುಗಳನ್ನು ಇಡಲು ಮೂರು ತರಿಸಿದ್ದಳು. ಎಲ್ಲ ಕೂಡಿ ಆರು ಸೂಟಕೇಸುಗಳಾದುವು. ಸಂಜೆಗೆ ಅವರು ಹೊರಡಬೇಕೆಂದು ತಿಳಿಸಿದರು. 'ಹೂಂ' ಎಂದೆ.

ಆಫೀಸಿಗೆ ಹೋಗಿ ರಜೆ ಹಾಕಿ ಬಂದೆ. ಅವರು ಹೊರಡುವ ಟ್ರೇನ್ ತಿಳಿದು ನನ್ನ

ಹಾಗೂ ಮಗನ ಸಲುವಾಗಿ ಟಿಕೆಟ್ ರಿಸರ್ವ್ ಮಾಡಿಸಿದೆ. ಮನೆಗೆ ಬಂದು ನನ್ನ ಹಾಗೂ ಮಗನ ಬಟ್ಟೆ ಸೇರಿಸಿ ಒಂದು ಸಣ್ಣ ಸೂಟಕೇಸು ರೆಡಿ ಮಾಡಿದೆ. ಅಂದು ಸಂಜೆಗೆ ಎಲ್ಲರೂ ಕೂಡಿ ಸ್ಟೇಷನ್‌ಕ್ಕೆ ಬಂದೆವು. ಅವರಿಬ್ಬರು ತಮ್ಮ ಬೋಗಿಯಲ್ಲಿ ಹತ್ತಿದರು. ಅವರ ಸೂಟಕೇಸು ಅವರ ಬೋಗಿಯಲ್ಲಿ ಸರಿಯಾಗಿ ಇರಿಸಿ ಕಾಳಜಿಯಿಂದ ನೋಡಲು ಎಚ್ಚರಿಸಿ ನಾನು ನನ್ನ ಮಗನನ್ನು ಕರೆದುಕೊಂಡು ಬೇರೆ ಬೋಗಿಯಲ್ಲಿ ಸೇರಿದೆ. ಮುಂಜಾನೆ ದಾದರ ಸ್ಟೇಷನ್‌ದಲ್ಲಿ ಇಳಿದು ಅವರ ಬೋಗಿಗೆ ಹೋದೆ. ಅವರ ಸಾಮಾನು ಇಳಿಸಿದೆ. ಒಂದು ಟ್ಯಾಕ್ಸಿ ಮಾಡಿ ಎಲ್ಲರೂ ಕೂಡಿ ವಿಮಾನ ನಿಲ್ದಾಣದ ಸಮೀಪದಲ್ಲಿರುವ ವಸತಿ ಗೃಹದಲ್ಲಿ ಉಳಿದೆವು. ಅವರಿಬ್ಬರೂ ಒಂದು ರೂಮಿನಲ್ಲಿ ಉಳಿದರು. ನಾನು ನನ್ನ ಮಗ ಬೇರೆ ರೂಮಿನಲ್ಲಿ ಉಳಿದೆವು. ರಾತ್ರಿ ೧೨ ಗಂಟೆಗೆ ಒಂದು ಟ್ಯಾಕ್ಸಿಯಲ್ಲಿ ವಿಮಾನ ನಿಲ್ದಾಣಕ್ಕೆ ಬಂದೆವು. ಅವರ ಸೂಟಕೇಸ್‌ಗಳನ್ನು ಒಂದು ಕೈಗಾಡಿಯಲ್ಲಿ ಇಟ್ಟು ನಾನು ನನ್ನ ಮಗ ದೂಡಿಕೊಂಡು ಪ್ರವಾಸಿಗರು ಪ್ರವೇಶಿಸುವ ದ್ವಾರದವರೆಗೆ ಮುಟ್ಟಿಸಿದೆವು. ಅವರಿಬ್ಬರಿಗೂ ವಿದಾಯ ಹೇಳಿ ಹೊರಗೆ ನಿಂತೆವು. ಅವರ ವಿಮಾನ ಹಾರಿ ಆಕಾಶ ಸೇರಿದ ಮೇಲೆ ನಮ್ಮ ಹೊಟೇಲಿನ ಕಡೆಗೆ ನಡೆದೆವು. ಅಂದು ಮಗು ಬಹಳ ಕಿರಿ ಕಿರಿ ಮಾಡಿತು. ಕೊನೆಗೆ ದಣಿದು ಮಲಗಿತು. ಯಾಕೋ ಏನೋ ನನಗೆ ದುಃಖ ತಡೆಯಲಾಗಲಿಲ್ಲ. ಅತ್ತು ಬಿಟ್ಟೆ. ಮದುವೆಗೆ ಮುಂಚೆ ಕಷ್ಟಪಟ್ಟು ನೋಡಿದ ಜನ್ಮ ಕುಂಡಲಿಗಳು, ಲಗ್ನದ ಮುಹೂರ್ತಗಳು, ಮದುವೆಯ ಮಂತ್ರಗಳು. ಸಪ್ತಪದಿ ಎಲ್ಲವೂ ಕಣ್ಣೆದುರಿಗೆ ಬಂದುವು. ಅವುಗಳಲ್ಲಿ ಏನಾದರೂ ಅರ್ಥವಿದೆಯೇ ಎನಿಸಿತು. ಮಗನು ಮಲಗಿದ್ದರಿಂದ ಜೋರಾಗಿ ಅಳಲು ಸಹ ಸಾಧ್ಯವಾಗಲಿಲ್ಲ. ಮರುದಿನ ಮಗನನ್ನು ಕರೆದುಕೊಂಡು ಬೆಳಗಾವಿಗೆ ಮರಳಿದೆ. ಈಗ ನಾಲ್ಕು ದಿನವಾಯಿತು. ಬಿಡುವೆ ದೊರೆಯುತ್ತಿಲ್ಲ. ಹೀಗಾಗಿ ನಿಮ್ಮನ್ನು ಕಾಣುವುದಾಗಿರಲಿಲ್ಲ, ಕ್ಷಮಿಸಿರಿ.

ಅದನ್ನೆಲ್ಲ ಕೇಳಿ ಮುಗಿಸುವಷ್ಟರಲ್ಲಿ ನನಗೆ ಹುಚ್ಚು ಹಿಡಿದಂತೆ ಅನಿಸಿತು. ನನ್ನ ಸ್ವರವೇ ಹೋಯಿತು. ಇಬ್ಬರೂ ಮಾತಾಡದೆ ಹದಿನೈದು ಮಿನಿಟು ಸುಮ್ಮನೇ ಕುಳಿತೆವು. ಅವನ ಜೀವನದಲ್ಲಿ ನಡೆದ ಘಟನೆ ಸಾಮಾನ್ಯವಾದುದೇನಲ್ಲ. ಎಂಥವನಿಗೂ ಹುಚ್ಚು ಹಿಡಿಸುವಂಥದು. ಆದರೆ ಕುಮಾರಸ್ವಾಮಿ ಬಂಡೆಯಂತೆ ಕುಳಿತಿರುವನು. ಕುಳಿತಿರುವುದು ದೊಡ್ಡದಲ್ಲ. ಆ ಪರಿಸ್ಥಿತಿಯಲ್ಲಿ ಅವನು ನಡೆದುಕೊಂಡ ರೀತಿ ನನ್ನನ್ನು ಅಚ್ಚರಿಗೊಳಿಸಿತು. ತನ್ನ ಹೆಂಡತಿ ಮನೆ ಬಿಟ್ಟು ಪರರೊಡನೆ ಹೋಗುವುದನ್ನು ತಡೆಯಲಿಲ್ಲ. ಆಕೆ ಕೇಳಿದುದನ್ನೆಲ್ಲ ಒಪ್ಪಿಕೊಂಡ. ಅವರಿಬ್ಬರ ಸಾಮಾನುಗಳನ್ನು ಹೊತ್ತು ಮುಂಬೈಯಿಗೆ ಹೋದ. ವಿಮಾನ ನಿಲ್ದಾಣದವರೆಗೆ ಹೋಗಿ ವಿದಾಯ ಹೇಳಿ ಬಂದ. ಅವರಿಗೆ ಒಂದು ಕೆಟ್ಟ ಶಬ್ದವನ್ನೂ ಆಡಲಿಲ್ಲ. ಬಂದದ್ದೆಲ್ಲ ದೇವರ ಪ್ರಸಾದ ಎಂದು ಸ್ವೀಕರಿಸಿದ್ದ. ಈಗ ಮಗನನ್ನು ಸಾಕಲು ವ್ಯವಸ್ಥೆ ಮಾಡುತ್ತಿರುವ. ಏನು ಹೇಳಬೇಕೆಂಬುದು ತಿಳಿಯಲೊಲ್ಲದು. ಕೊನೆಗೆ ನನ್ನಿಂದ ಒಂದು ಮಾತು ಹೊರಬಿತ್ತು. "ಕುಮಾರಸ್ವಾಮಿ ಅವರೇ, ನೀವು ಬಹಳ ದೊಡ್ಡವರು. ನೀವೇರಿದ ಎತ್ತರಕ್ಕೆ ಏರಲು ಅನೇಕರಿಗೆ ಸಾಧ್ಯವಿಲ್ಲ. ನನಗಂತೂ ಇದನ್ನೆಲ್ಲ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಿಮಗೆ ಏನೇ ಬೇಕಾಗಲಿ ನಾನು ಮಾಡುವೆ."

ಒಬ್ಬರನ್ನೊಬ್ಬರು ಅಪ್ಪಿಕೊಂಡೆವು. ಇಬ್ಬರ

ಕಣ್ಣುಗಳಿಂದ ಒಂದೆರಡು ಹನಿ ನೀರು ಉದುರಿದವು. ವೇಳೆ ೩.೩೦ ಆಗಿ ಹೋಗಿತ್ತು. ನನ್ನ ರೂಮು ಕೀಲಿ ಹಾಕಿ ನಡೆದೆವು. ಕುಮಾರಸ್ವಾಮಿ ತನ್ನ ವಾಹನದೊಂದಿಗೆ ಮನೆಗೆ ಹೋದರು. ನಾನು ನನ್ನ ಮನೆಗೆ ನಡೆದೆ. ಕೈಕಾಲುಗಳಲ್ಲಿ ಶಕ್ತಿ ಉಡುಗಿ ಹೋಗಿತ್ತು. ಅಂದಿನಿಂದ ೨-೩ ದಿನ ನನ್ನ ಮಾತು ಕಡಿಮೆ ಆಗಿತ್ತು.

ಮತ್ತೆ ಸಾಮಾನ್ಯ ಸ್ಥಿತಿಗೆ ಬಂದೆ. ಕುಮಾರಸ್ವಾಮಿ ಅವರ ಬಗ್ಗೆ ನನ್ನ ಆದರ ಹೆಚ್ಚಿತ್ತು. ಎರಡು ವರ್ಷಗಳು ಉರುಳಿದವು. ಆಗಾಗ ಭೇಟಿಯಾಗುತ್ತಿದ್ದೆವು. ಗಾಯ ಮಾಯ್ದಿತ್ತು. ತಂದೆ ಮಗ ಅನ್ಯೋನ್ಯವಾಗಿದ್ದರು. ಮಗು ಚೆನ್ನಾಗಿ ಬೆಳೆಯ ತೊಡಗಿತು. ಹೆಚ್ಚು ಕಡಿಮೆ ಎರಡು ವರ್ಷಗಳು ಕಳೆದುವು. ಹುಡುಗ ಚೂಟಿ ಆಗಿದ್ದ, ಆಗುತ್ತಿದ್ದ. ಆಗೊಮ್ಮೆ ಈಗೊಮ್ಮೆ ಅವನು ತಂದೆಯೊಂದಿಗೆ ನನ್ನ ಹತ್ತಿರ ಬರುತ್ತಿದ್ದ. ಕುಮಾರಸ್ವಾಮಿಯವರಿಗೆ ಓರ್ವ ಅಡುಗೆಯವ ದೊರೆತಿದ್ದ. ಅವರ ಜೀವನ ಯಾವ ಬಿರುಗಾಳಿಗೆ ಸಿಗದಂತೆ ನಡೆದಿತ್ತು.

ಒಂದು ದಿನ ಅವರು ನನ್ನ ಆಫೀಸಿಗೆ ಸಂಜೆ ಐದು ಗಂಟೆಗೆ ಬಂದರು. ನನಗೆ ಅದು ಅನೀರಿಕ್ಷಿತ. ಮುಖ ಕಳೆಗುಂದಿತ್ತು. ಅವರನ್ನು ನೋಡಿ ಮತ್ತೇನೋ ಆಗಿದೆ ಎನಿಸಿತು. ನನ್ನ ಕೆಲಸಗಳನ್ನು ಪೂರ್ತಿಗೊಳಿಸಿ ಅವರನ್ನು ಕೂಡ್ರಿಸಿದಲ್ಲಿಗೆ ಬಂದೆನು. ಅವರು ಹೇಳಿದರು. ''ಸರ್ ಯಾಕೋ, ಬಹಳ ಬೇಜಾರಾಗಿದೆ' ನಾನು ''ಹೌದು ನಿಮ್ಮ ಮುಖ ನೋಡಿದರೆ ಹಾಗೆ ಅನಿಸಿತು. ಏನಾಗಿದೆ ಹೇಳಿರಿ ನೋಡೋಣ'.

ಕುಮಾರಸ್ವಾಮಿ 'ನನ್ನ ಹೆಂಡತಿ ಶಶಿಕಲಾ ಅಮೆರಿಕೆಯಿಂದ ಮರಳಿ ಬಂದಿದ್ದಾಳೆ.'

ನಾ: ''ಎಲ್ಲಿರುವಳು''.

ಶಿ: ''ಹೊಟೇಲ ಸನ್ಮಾನ ಡೀಲಕ್ಸ್‌ದಲ್ಲಿ ಇಳಿದಿರುವಳು''.

ನಾ: ''ನಿಮಗೆ ಈ ಸುದ್ದಿ ಹೇಗೆ ಗೊತ್ತಾಯಿತು?''

ಶಿ: ''ನನ್ನ ಮಗ ತಿಳಿಸಿದ.''

ನಾ: ''ಅವನಿಗೆ ಹೇಗೆ ಗೊತ್ತಾಯಿತು?''

ಶಿ:'' ಆಕೆ ಬೆಳಗಾವಿಗೆ ಬಂದು ಒಂದು ವಾರವಾಯಿತಂತೆ. ನಾನು ನನ್ನ ಆಫೀಸಿಗೆ ಹೋದಾಗ ಮನೆಗೆ ಬಂದು ಮಗನೊಡನೆ ಮಾತಾಡುವುದು ಮಾಡುತ್ತಿದ್ದಳಂತೆ. ಅವನೊಡನೆ ಆಡುತ್ತ ಸಂಜೆಯವರೆಗೆ ಕಾಲ ಕಳೆದು ತಾನು ಬಂದುದನ್ನು ತಿಳಿಸಬಾರದೆಂದು ಹೇಳಿ ಹೋಗುತ್ತಿದ್ದಳಂತೆ. ಮೂರು ದಿನಗಳ ಹಿಂದೆ ಮಗನನ್ನು ಜತೆಗೆ ಕರೆದುಕೊಂಡು ಹೊಟೇಲಿಗೆ ಹೋಗಿದ್ದಳಂತೆ. ಅಲ್ಲಿ ತಾನು ಅವನಿಗೆ ತಂದ ಆಟಿಗೆ ಸಾಮಾನುಗಳನ್ನು ತೋರಿಸಿದಳಂತೆ. ಆಟವಾಡಲು ಕೊಟ್ಟಳಂತೆ. ಅವುಗಳನ್ನು ನೋಡಿ ಮಗು ಸಂತೋಷಪಟ್ಟಿತಂತೆ. ಅಂಥ ನೂರಾರು ಆಟಿಗೆಗಳನ್ನು ಅಮೆರಿಕೆಯಲ್ಲಿ ತಂದು ಇಟ್ಟಿರುವುದಾಗಿ ಹೇಳಿದಳಂತೆ. ಅಂದಿನಿಂದ ಮಗುವು ದಿನಾಲು ಆಕೆ ಇದ್ದ ಹೊಟೆಲಿಗೆ ಹೋಗುತ್ತಿದೆ. ಇಂದು ಮುಂಜಾನೆ ನಾನು ಅವನನ್ನು ಸ್ನಾನ ಮಾಡಿಸುವಾಗ ಅವನು ನನಗೆ ಇದನ್ನೆಲ್ಲ ಹೇಳಿದ. ಈ ಸಲ ಆಕೆ ಅವನನ್ನು ಅಮೆರಿಕೆಗೆ ಕರೆದುಕೊಂಡು ಹೋಗಲು ನಿಶ್ಚಯಿಸಿರುವಳಂತೆ. ಮುಗ್ಧ ಮಗನು ಅವಳೊಡನೆ ಹೋಗಲು ಸಜ್ಜಾಗಿದೆ. ಆಕೆ ಅವನಿಗೆ ಹೇಳಿದಳಂತೆ. 'ಭಾರತವು ಬಡದೇಶ ಇಲ್ಲಿ ಎಲ್ಲವೂ ಕೊಳಕು. ಒಳ್ಳೆಯ ಕಾರುಗಳಿಲ್ಲ. ಒಳ್ಳೆಯ ಬಂಗಲೆಗಳು ಇಲ್ಲ. ಉತ್ತಮ ಬಟ್ಟೆಗಳಿಲ್ಲ. ಆಟಿಗೆಗಳಿಲ್ಲ. ಮುಂದೆ ಅಭ್ಯಾಸ ಮಾಡಲು ಆಸ್ಪದವಿಲ್ಲ. ನೀನು

ನನ್ನೊಡನೆ ಅಮೆರಿಕೆಗೆ ಬಾ, ನಿನಗೆಲ್ಲ ನಾನು ಕೊಡಿಸುತ್ತೇನೆ. ಇಲ್ಲಿ ಏನೂ ಇಲ್ಲ. ನೀನು ಇಲ್ಲಿಯೇ ಉಳಿದರೆ ಉಳಿದವರಂತೆ ಭಿಕಾರಿಯ ಹಾಗೆ ಇರಬೇಕು,' ಮಗುವಿನ ಮನಸ್ಸನ್ನು ಸಂಪೂರ್ಣ ಬದಲಿಸಿ ದ್ದಾಳೆ. ಮಗುವು ನನ್ನನ್ನು ದ್ವೇಷಿಸುವ ಹಾಗೆ ಮಾಡಿದ್ದಾಳೆ. ಇಂದು ರಾತ್ರಿ ಮಗುವು ಅವಳೊಡನೆ ಬೆಂಗಳೂರಿಗೆ ಹೋಗಿ ಅಲ್ಲಿಂದ ಅಮೆರಿಕೆಗೆ ಹೊರಡುವ ತರಾತುರಿಯಲ್ಲಿದೆ.' ಆಘಾತವಾಯಿತು. ಏನು ಮಾಡಬೇಕೆಂಬುದು ಏನು ಹೇಳಬೇಕೆಂಬುದು ನನಗೆ ತೋಚಲೇ ಇಲ್ಲ.

ಒಂದು ವಾರದ ಮೇಲೆ ಕುಮಾರಸ್ವಾಮಿ ಬಂದರು. ಈಗ ಸಂಪೂರ್ಣ ಸೋತು ಹೋದವರಂತೆ ಆಗಿದ್ದರು. ಮಗುವಿನ ಸುದ್ದಿಯನ್ನು ತಗೆಯಬಾರದೆಂದು ನಾನು ನಿಶ್ಚಯಿಸಿದ್ದೆ. ಆದರೆ ಅವರೇ ಅದನ್ನು ಎತ್ತಿದರು. ಶಶಿಕಲಾ ಮಗುವನ್ನು ಎತ್ತಿಕೊಂಡು ಹೋದಳಂತೆ. ಕುಮಾರಸ್ವಾಮಿ ಜತೆ ಮಾತಾಡ ಲಿಲ್ಲವಂತೆ. ಇವರು ಬಸ್ ಸ್ಟಾಂಡಿನವರೆಗೆ ಹೋಗಿ ದೂರ ನಿಂತು ಕಣ್ಣೀರು ಸುರಿಸುತ್ತ ವಿದಾಯ ಹೇಳಿದರಂತೆ.

ಎಲ್ಲವನ್ನು ಹೇಳಿದ ಮೇಲೆ ಕುಮಾರಸ್ವಾಮಿ, ''ಸರ್, ನಾನು ಯಾರಿಗೂ ಕೆಡಕು ಮಾಡಿಲ್ಲ. ಮನಸ್ಸು ನೋಯಿಸಿಲ್ಲ ಆದದ್ದೆಲ್ಲ ದೇವರ ಇಚ್ಛೆ ಎಂದು ಭಾವಿಸಿ ಬದುಕಿರುವೆ' ಎಂದ. ಕುಮಾರಸ್ವಾಮಿಯವರ ಜೀವನವನ್ನು ನೋಡಿ ದಾಗ ನನಗೆ ಅನಿಸುವುದೆಂದರೆ ವಿಶ್ವಾಮಿತ್ರ ಸತ್ತಿಲ್ಲ. ಅವನು ಹಲವಾರು ಜನರ ದೇಹ ದೊಳಗೆ ಸೇರಿಕೊಂಡಿದ್ದಾನೆ.

ಎರಡು ತಿಂಗಳ ಹಿಂದೆ ಕುಮಾರಸ್ವಾಮಿ ಯವರಿಗೆ ಬೇರೆ ಊರಿಗೆ ವರ್ಗವಾಯಿತು. ಅವರಿಗೊಂದು ಔತಣ ಕೊಟ್ಟೆವು. ಎಲ್ಲರಿಗೂ ಬೇಕಾಗಿದ್ದ ಕುಮಾರಸ್ವಾಮಿ ನಗುನಗುತ್ತ ಮಾತಾಡಿದರು. ಧನ್ಯವಾದ ಹೇಳಿದರು, ಮತ್ತೆ ಬೆಳಗಾವಿಗೆ ಭೇಟಿ ಕೊಡುವೆನೆಂದು ಹೇಳಿ ಹೋದರು.

ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ, ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯ ವಾಗಿರುವುದು.

-ವರ್ಡ್ಸ್‌ವರ್ಥ್

ನಿಜಕ್ಕೂ ನಿಮಗೆ ಬೇಕಾಗುವ ಜೀವಸತ್ತ್ವಗಳಾವುವು?

ಸತ್ಯವತಿ
w/o ಡಾ|| ಹರಿಕೃಷ್ಣ
ಸರ್ಜನ್ ಡೆಂಟಿಸ್ಟ್
ಸುರತ್ಕಲ್-೫೭೪೧೫೮

ಇತ್ತೀಚೆಗೆ ನೀವು ಜೀವಸತ್ತ್ವಯುತ ಔಷಧಿ ಮಾತ್ರೆಗಳನ್ನು ಖರೀದಿಸುವ ಸಲುವಾಗಿ ಹೋದದ್ದಿದೆಯೇ? ಹಲವಾರು ಜೀವಸತ್ತ್ವಗಳನ್ನು ಒಳಗೊಂಡ 'ಮಲ್ಟಿವಿಟಮಿನ್ಸ್'ಗಳಲ್ಲಿ ಇತ್ತೀಚಿನವರೆಗೂ ಕೇವಲ ಕೆಲವೇ ರೀತಿಯವು ಮಾತ್ರ ದೊರಕುತ್ತಿದ್ದುವು. ಆದರೆ ಇಂದು ಸಾವಿರಾರು ರೀತಿಯ, ವಿವಿಧ ಜೀವಸತ್ತ್ವಗಳು ಹಾಗೂ 'ಮಿನರಲ್ಸ್' (ಖನಿಜಾಂಶಗಳು) ಎಂಬ ಆಹಾರ ಖನಿಜಗಳನ್ನೊದಗಿಸುವ ಉತ್ಪನ್ನಗಳ ಭಂಡಾರವೇ ಮಾರುಕಟ್ಟೆಯಲ್ಲಿ ವಿರಾಜಿಸುತ್ತಿವೆ. ಮಾತ್ರವಲ್ಲದೆ ಸಂಖ್ಯೆಯಲ್ಲಿ ಕೂಡ ಪ್ರತಿವರ್ಷ ಏಕಪ್ರಕಾರವಾಗಿ ವೃದ್ಧಿಸುತ್ತಲೇ ಇವೆ. ಇವುಗಳಲ್ಲಿ ಯಾವುದನ್ನು ತೆಗೆದುಕೊಂಡರೆ ದೇಹಾರೋಗ್ಯಕ್ಕೆ ಒಳ್ಳೆಯದೆಂದು ಸೋಜಿಗಪಟ್ಟುಕೊಂಡಿರುವುದೇ ನಮ್ಮಂಥವರ ಪಾಡಾಗಿದೆ.

ಅಮೆರಿಕದ ರಾಷ್ಟ್ರೀಯ ವಿಜ್ಞಾನ ವಿದ್ಯಾಲಯದ 'ಆಹಾರ ಮತ್ತು ಸತ್ತ್ವಗಳ ಮಂಡಲಿ'ಯು (ಆಸಮ) ವಿವಿಧ ಪ್ರಾಯದ ಮಹಿಳೆಯರೂ, ಪುರುಷರೂ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲೋಸುಗ ಸ್ವೀಕರಿಸಲು ಯೋಗ್ಯವಾದ ನಿತ್ಯಪಥ್ಯದಲ್ಲಿ ಸೇರ್ಪಡೆಗೊಳ್ಳಬೇಕಾದಂಥ ಜೀವಸತ್ತ್ವಗಳು ಹಾಗೂ ಖನಿಜಗಳನ್ನು ಕುರಿತು ಸಲಹೆ ನೀಡಿ, 'ರೆಕಮೆಂಡೆಡ್ ಡಯೆಟರಿ ಅಲೋಯನ್ಸಸ್'ಯನ್ನು (ಆರ್ ಡಿಎ) ಸಿದ್ಧಪಡಿಸಿದೆ - ಅಂದರೆ ಏನು ಸೇವಿಸಬಹುದೆಂಬ ಶಿಫಾರಸು. ಪಂಚ ಆಹಾರವರ್ಗಕ್ಕೆ ಸೇರಿದ ಪ್ರತಿಯೊಂದು ಆಹಾರ ಪದಾರ್ಥವನ್ನೂ ಕ್ರಮವಾಗಿ, ಶಿಫಾರಸು ಮಾಡಿದ ಸಂಖ್ಯೆಯಲ್ಲಿಯೇ ಸೇವಿಸಿದ ಪಕ್ಷದಲ್ಲಿ, ನಿಮಗೆ ಬೇಕಾದ ಎಲ್ಲ ಬಗೆಯ ಜೀವ ಸತ್ತ್ವ ಹಾಗೂ ಖನಿಜಾಂಶಗಳನ್ನು ನೀವು ಖಂಡಿತ ಪಡೆದಿರುತ್ತೀರಿ. ಆದರೆ ಕ್ರಮಬದ್ಧವಾಗಿ ಹತ್ತರಲ್ಲಿ ಒಬ್ಬ ಮಾತ್ರ ತನಗೆ ಬೇಕಾದ ಪೋಷಕಗಳನ್ನು ಹಣ್ಣು ಹಾಗೂ ತರಕಾರಿ ಗಳಿಂದ ಪಡೆಯುತ್ತಿದ್ದಾನೆಂದು ತನಿಖೆಗಳಿಂದ ತಿಳಿದುಬಂದಿದೆ. ಹಲವಾರು ಪೋಷಕಗಳನ್ನುಗಳಿಸಿ ಆರ್ ಡಿಎ ಶಿಫಾರಸು ಮಾಡಿದ ಮಟ್ಟವನ್ನು ತಲಪುವಲ್ಲಿ ಹೆಚ್ಚಿನ ಪ್ರೌಢಾವಸ್ಥೆಯವರು ವಿಫಲರಾಗಿದ್ದಾರೆ. ಆದ್ದರಿಂದಲೇ ಬಹಳಷ್ಟು ವೈದ್ಯರು ದೇಹದ ಅತ್ಯಗತ್ಯ ಆಹಾರಾಂಶಗಳ ಕೊರತೆಯನ್ನು ನೀಗಿಕೊಳ್ಳಲು ಸಹಕರಿಸುವ, ಹಲವಾರು ಪೋಷಕಗಳಿಂದ ಕೂಡಿದ ಮಲ್ಟಿವಿಟಮಿನ್ ಅಥವಾ ಖನಿಜಾಂಶಗಳನ್ನು ಪ್ರತಿದಿನವೂ ಸೇವಿಸುವಂತೆ ಸೂಚಿಸುತ್ತಾರೆ.

ಈಗ ನಾವು ಕೆಲವು ಮುಖ್ಯವಾದ ಜೀವಸತ್ತ್ವ ಹಾಗೂ ಖನಿಜಾಂಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದು ಹೇಗೆಂದು ಗಮನಿಸೋಣ. (ನಿಮ್ಮ ವೈದ್ಯರ ಸಲಹೆಯನ್ನು ಅವಶ್ಯ ಕೇಳಬೇಕು).

ಅಕ್ಟೋಬರ ೨೦೦೦ನೇ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೀನೀ ವಿಲ್ಸನ್ ರವರ "ಡಿಡ್ ವಿಟಮಿನ್ಸ್ ಡು ಯು ರಿಯಲಿ ನೀಡ್?" ಲೇಖನದ ಭಾವಾನುವಾದ

ಜೀವಸತ್ವ -ಇ

ದೇಹದ ಸ್ವರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುವುದರಲ್ಲಿ , ಕಣ್ಣಿನ ಪೊರೆಯನ್ನು ತಡೆಯುವಲ್ಲಿ, (ಮಿದುಳಿನ ಒಂದು ಪಾರ್ಶ್ವ ಹಾಳಾಗಿ ಚಿಕ್ಕಪ್ರಾಯದಲ್ಲಿಯೇ ಅತಿ ಮರೆವು, ಅರುಳುಮರುಳು ಇತ್ಯಾದಿ ಲಕ್ಷಣಗಳನ್ನು ತೋರುವಂಥ) ಆಲ್‌ಜೈಮಿರ್‌ನ ಕಾಯಿಲೆಯ ಉಲ್ಬಣಿಸುವ ವೇಗವನ್ನು ಕುಂಠಿತಗೊಳಿಸುವ ಸಾಮರ್ಥ್ಯ ಈ ಜೀವಸತ್ವಕ್ಕೆ ಇದೆಯೆಂದು ಅಧ್ಯಯನಗಳು ಸೂಚಿಸುತ್ತವೆ. ಅಷ್ಟೇ ಅಲ್ಲದೆ ಇದು ಎಲ್‌ಡಿಎಂ ಎಂಬ ಅಹಿತಕರ ಕೊಲೆಸ್ಟರಾಲ್ ಆಮ್ಲಜನಕದೊಂದಿಗೆ ಬೆರೆತು ಉಂಟಾಗುವ ಉತ್ಕರ್ಷಣ ಕ್ರಿಯೆಯಿಂದ ಸಂಭವಿಸುವ ರಕ್ತಹೆಪ್ಪುಗಟ್ಟುವಿಕೆಯನ್ನು (ಅಥಿರೋಸ್ ಕ್ಲೆರೋಸಿಸ್) ತಡೆಯುತ್ತ ರಕ್ತವನ್ನು ನೀರಾಗಿಸುವ ಮೂಲಕ ಹೃದಯವನ್ನು ಆರೋಗ್ಯವಾಗಿ ಇಡುವುದರಲ್ಲಿಯೂ ಸಹಕರಿಸುತ್ತದೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರೆತಿವೆ. ದಿನವೊಂದಕ್ಕೆ ೧೦೦ ಅಂತಾರಾಷ್ಟ್ರೀಯ ಏಕಮಾನಗಳನ್ನು ಐಯು ಬಿಡದೆ ಎರಡು ಅಥವಾ ಹೆಚ್ಚು ವರ್ಷಗಳ ಕಾಲ ಜೀವಸತ್ವ ಇ ಸೇವಿಸಿದವರಲ್ಲಿ (ಸುಮಾರು ನೂರಕ್ಕೆ ನಲವತ್ತರಷ್ಟು) ಹೃದಯರೋಗದ ಅಪಾಯದಲ್ಲಿ ಕಡಿತವನ್ನು ಕಾಣಬಹುದೆಂದು ಹಾರ್ವರ್ಡ್ ಯೂನಿವರ್ಸಿಟಿ ನಡೆಸಿದ ಹಲವಾರು ಗಮನೀಯ ಅಧ್ಯಯನಗಳಿಂದ ತಿಳಿದುಬಂದಿದೆ. ವಿಸ್ತಾರವಾದ ವಿಚಾರ ಸಂಕಿರಣದಿಂದ ಇತ್ತೀಚೆಗೆ ಹೊರಬಿದ್ದ ಅಂಕಿ ಅಂಶಗಳ ಆಧಾರದ ಮೇಲೆ ಆಸಮ ತಾಳಿದ ನಿಲವು: ''ಬಹಳಷ್ಟು ಪ್ರಮಾಣದ ಜೀವಸತ್ವ ಇ ಅಥವಾ ಸಿ ತರಹದ, (ಆಮ್ಲಜನಕದೊಂದಿಗೆ ಬೆರೆತು ಉಂಟಾಗುವ) ಉತ್ಕರ್ಷಣದಂಥ ಪರಿಣಾಮವನ್ನು ತಡೆಗಟ್ಟುವ ಆಂಟಿ- ಆಕ್ಸಿಡಾಂಟುಗಳು ಉಲ್ಬಣಾವಸ್ಥೆಯಲ್ಲಿರುವ ರೋಗಗಳ ತೀವ್ರತೆಯನ್ನು ತಗ್ಗಿಸುವುದರಲ್ಲಿ ಉಪಯುಕ್ತವೆಂಬುದಕ್ಕೆ ನಿದರ್ಶನಗಳೇನೂ ದೊರೆತಿಲ್ಲ''.

ಉತ್ಪಾದಿತವಾದ ಮೂವತ್ತಮೂರು ಐಯುಗಳಿಗೆ ಸಮಾನವೆನಿಸುವ ಹದಿನೈದು ಮಿಲಿಗ್ರಾಮ್ಸ್‌ನಷ್ಟು ಜೀವಸತ್ವ ಇ, ಕೊಬ್ಬಿನ ಪದಾರ್ಥಗಳಾದ ವನಸ್ಪತಿಗಳಿಂದ, ಗೋಧಿಯ ಮೊಳಕೆಗಳಿಂದ, ಕಾಯಿ ಹಾಗೂ ಕಾಳುಗಳಿಂದ, ಈಗಾಗಲೇ ಅಮೆರಿಕಾದ ಹೆಚ್ಚಿನ ಜನರಿಗೆ ದೊರೆಯುವುದೆಂದು ಆಸಮ ತಿಳಿಸುತ್ತದೆ. ಜೀವಸತ್ವ ಇ ಸಂಶೋಧಕರಾದ ಬ್ಲುಂಬರ್ಗ್ ಅವರ ಹಾಗೂ ಇತರರ ಅಧ್ಯಯನದಿಂದ ವ್ಯಕ್ತವಾದ ಅಂಶವೆಂದರೆ, ದಿನವೊಂದಕ್ಕೆ ನೂರರಿಂದ ನಾಲ್ಕುನೂರು ಐಯುಗಳಷ್ಟು ಜೀವಸತ್ವ ಇ ಅತ್ಯುತ್ತಮ ಆರೋಗ್ಯಕ್ಕೆ ಪೂರಕವಾಗುತ್ತದೆ ಎಂಬುದು.

ಜೀವಸತ್ವ ಸಿ

''ಜೀವಸತ್ವ ಸಿ ಯು ನೆಗಡಿಯನ್ನು ತಡೆಯುವುದು ಎಂಬುದಕ್ಕೆ ಯಾವುದೇ ಸಾಕ್ಷಿ ಇಲ್ಲದಿದ್ದರೂ , ನೆಗಡಿ ಆಕ್ರಮಣ ಮಾಡಿದ ಸಮಯದಲ್ಲಿ, ನಿತ್ಯವೂ ಅಧಿಕ ಪ್ರಮಾಣದಲ್ಲಿ ಇದನ್ನು ಸೇವಿಸುತ್ತಾ ಬಂದರೆ, ನೆಗಡಿಯ ಲಕ್ಷಣಗಳಲ್ಲಿ ಇಳಿಮುಖ ಕಂಡು ಬಂದು, ಅದರ ಅವಧಿಯೂ ಹ್ರಸ್ವಗೊಳ್ಳುತ್ತದೆ'' ಎಂಬ ವಿಷಯವನ್ನು ಹಲವಾರು ಅಧ್ಯಯನಗಳು ತಿಳಿಸುತ್ತವೆ. ಮಹಿಳೆಯರಿಗೆ ಶಿಫಾರಸ್ಸು ಮಾಡಿರುವ ಅಳತೆ ೭೫ ಮಿಲಿಗ್ರಾಮ್ಸ್ ಆದರೆ ಪುರುಷರಿಗೆ ೯೦ ಮಿಲಿಗ್ರಾಮ್ಸ್ (ಇದು ಒಂದು ಲೋಟ ಕಿತ್ತಳೆ ಶರಬತ್ತಿನಲ್ಲಿ ದೊರೆಯುತ್ತದೆ). ಸಿಗರೇಟು ಸೇದುವವರಿಗೆ ಇದಕ್ಕಿಂತ ಮೂವತ್ತೈದು ಮಿಲಿಗ್ರಾಮ್ಸ್‌ನಷ್ಟು ಹೆಚ್ಚು ಜೀವಸತ್ವ ಸಿ ಬೇಕಾಗುತ್ತದೆ.

ಜೀವಸತ್ವ ಬಿ

'ಬಿ-ವಿಟಮಿನ್ ಫೊಲೇಟ್'ನ ವ್ಯಾಪಾರ ನಾಮ 'ಫೋಲಿಕ್ ಆ್ಯಸಿಡ್' ಬಿ-೧೨ ಮತ್ತು ಬಿ-೬ ನಮ್ಮ ಹೃದಯವನ್ನು ರಕ್ಷಿಸಬಲ್ಲವು. ಜನ್ಮಜಾತ ದೋಷಗಳನ್ನು ತಡೆಯಬಲ್ಲವು. ಹಾಗೂ ಪ್ರಾಯಸಂದರೂ ನಮ್ಮ ಮಾನಸಿಕ ಸ್ಥಿತಿಯನ್ನು ಚೆನ್ನಾಗಿ ಚುರುಕಾಗಿ ಇಡಬಲ್ಲವು. ರಕ್ತದಲ್ಲಿರುವ 'ಹೋಮೋಸಿಸ್ಟೀನ್' ಎಂಬ ಕಣಗಳನ್ನು, ಅದು ಇರಬೇಕಾದ ಮಟ್ಟಕ್ಕೆ ತರುವಲ್ಲಿ, ಈ ಮೂರೂ ಜೀವಸತ್ವಗಳು ಸೇರಿಕೊಂಡಿರುವ ಕಾರಣ, ಇವನ್ನು ಸೇವಿಸುವವರಲ್ಲಿ ಹೃದಯರೋಗಗಳು ಅತಿ ವಿರಳ. ಒಂದಕ್ಕೊಂದು ಸಂಬಂಧವಿರುವ ಕಾರಣ, ಹೋಮೋಸಿಸ್ಟೀನ್ ಮಟ್ಟ ಏರಿದಂತೆ ಹೃದಯ ರೋಗ ಮತ್ತು ರಕ್ತನಾಳಗಳ ತೊಂದರೆಗಳು ತಲೆದೋರುವ ಸಂಭವವಿರುತ್ತದೆ.

ಆರೋಗ್ಯವಂತ ಶಿಶುವಿನ ಹುಟ್ಟಿಗೂ, ಸ್ಪೈನ ಬೈಫಿಡ' ಅಂದರೆ 'ಸೀಳು ಬೆನ್ನೆಲುಬು' ಎಂಬ ಅರ್ಥವನ್ನು ಹೊಂದಿರುವ, ಅದೇ ತೊಂದರೆಯಂಥ ಏಕಲತೆಯೊಂದಿಗೇ ಹುಟ್ಟುವ ಮಗುವಿಗೂ ಫೋಲಿಕ್ ಆ್ಯಸಿಡ್ ಕಾರಣವಾಗಬಲ್ಲದು.

ಒಮ್ಮೆ ಇದ್ದಂತಹ ಅತ್ಯಂತ ತೀಕ್ಷ್ಣವಾದ ಮಾನಸಿಕ ಸ್ಥಿತಿಯಿಂದ ಈಗ ವಂಚಿತರಾಗಿದ್ದಲ್ಲಿ, ಅದು ಜೀವಸತ್ವ ಬಿ-೧೨ರ ಕೊರತೆಯಿಂದ ಆಗಿರಬಹುದು. ಈ ಜೀವಸತ್ವದ ಅತಿಯಾದ ಕೊರತೆಯಿಂದಾಗಿ ಬಳಲಿಕೆ ಉಂಟಾಗಬಹುದು; ನರಗಳಿಗೆ ಪೆಟ್ಟಾಗಬಹುದು; ಮರೆವು, ಅರುಳುಮರುಳು ಮುಂತಾದ ಮಿದುಳಿನ ತೊಂದರೆಗಳು ಘಟಿಸಬಲ್ಲವು. ಮಾನಸಿಕ ಕುಗ್ಗುವಿಕೆ, ಕಂಗೆಡುವಿಕೆಗಳು ಈ ವಿಟಮಿನ್ನಿನ ಅಲ್ಪಪ್ರಮಾಣದ ನ್ಯೂನತೆಯಿಂದ ಗೋಚರಿಸಬಹುದು.

ಸುಲಭವಾಗಿ ಜೀರ್ಣವಾಗದ ಮಾನು, ಮಾಂಸ ಹಾಗೂ ಕೋಳಿಗಳು ಈ ಸತ್ವದ ಮುಖ್ಯ ಆಗರಗಳಾದ್ದರಿಂದ, ಮುದುಕರು ಬಿ-೧೨ನ್ನು ದೇಹದಲ್ಲಿ ತುಂಬಿಕೊಳ್ಳಲು ಅಶಕ್ತರಾಗಿ, ಅಪಾಯದ ಅಂಚಿನಲ್ಲೇ ಉಳಿದುಬಿಡುತ್ತಾರೆ. ಆದ್ದರಿಂದ ಆಹಾರದ ಮೂಲಕ ಬಿ-೧೨ನ್ನು ಜೀರ್ಣಿಸಿಕೊಳ್ಳಲಾಗದ ಐವತ್ತು ಸಂವತ್ಸರಗಳನ್ನು ದಾಟಿದವರು, ಬೇರೆ ಉತ್ಪನ್ನಗಳಿಂದಾಗಲೀ, ಸತ್ವಗಳಿಂದ ಶಕ್ತಿಭರಿತವನ್ನಾಗಿಸಿದ ವಿಶೇಷ ಆಹಾರ ಮೂಲಗಳಿಂದಾಗಲೀ ಈ ವಿಟಮಿನ್ನನ್ನು ಪಡೆಯಬಹುದೆಂದು ಆಸಮ ಸೂಚಿಸುತ್ತದೆ.

ಕ್ಯಾಲ್ಸಿಯಮ್

ಮೂಳೆಗಳನ್ನು ದುರ್ಬಲಗೊಳಿಸುವ ಆಸ್ಟಿಯೋಪೊರೋಸಿಸ್ ಎಂಬ ರೋಗದಿಂದ ತಪ್ಪಿಸಿಕೊಳ್ಳಲು ಹಾಗೂ ನಮ್ಮ ಶಕ್ತಿಯುತ ದಂತಗಳನ್ನು ಮತ್ತು ಎಲುಬುಗಳನ್ನು ಕಾಪಾಡಿಕೊಳ್ಳಲು ಈ ಖನಿಜಾಂಶ ಅಪಾರ ಪ್ರಮಾಣದಲ್ಲಿ ಬೇಕಾಗುತ್ತದೆ. ಪ್ರೌಢರಲ್ಲಿ ಐವತ್ತು ವರ್ಷದ ಮೇಲ್ಪಟ್ಟವರಿಗೆ ೧೨೦೦ ಮಿಲಿಗ್ರಾಮ್ಸ್, ಅಂದರೆ ಒಂದು ದಿನಕ್ಕೆ ಮೂರು-ನಾಲ್ಕು ಲೋಟಗಳಷ್ಟು ಕೆನೆ ತೆಗೆದ ಹಾಲಿಗೆ ಸಮವಾದ ಕ್ಯಾಲ್ಸಿಯಮ್ ಬೇಕಾಗುವುದೆಂದು ಇತ್ತೀಚೆಗೆ ಆಸಮ ತಿಳಿಸಿದೆ.

ಜೀವಸತ್ವ - ಡಿ

ನಮ್ಮ ಶರೀರ ಕ್ಯಾಲ್ಸಿಯಮ್ ಮತ್ತು ಫಾಸ್ಪರಸ್‌ಗಳನ್ನು ಹೀರಿಕೊಳ್ಳಲು ಸಹಕರಿಸುವ ಈ 'ಭಾನುಪ್ರಕಾಶ ಜೀವಸತ್ವ (ಸನ್‌ಶೈನ್ ವಿಟಮಿನ್), ಸರಿಯಾಗಿ ದೊರೆಯದಿದ್ದಲ್ಲಿ ಕೇವಲ ಕ್ಯಾಲ್ಸಿಯಮ್ ಒಂದೇ ಯಾವ ಉಪಕಾರವನ್ನೂ ಮಾಡಲಾರದು. ಹಾಲು, ಬೆಣ್ಣೆ, ಮೊಟ್ಟೆಯ ಲೋಳೆ, ದವಸಧಾನ್ಯಗಳಿಂದ ಸತ್ವಭರಿತವಾಗಿಸಿದ ಉಪಾಹಾರ

ಮುಂತಾದ ಕೆಲವೇ ಆಹಾರ ಪದಾರ್ಥಗಳಿಂದ ಲಭ್ಯವಾಗುವ ಜೀವಸತ್ವ-ಡಿ, ಸೂರ್ಯಕಿರಣ ಗಳಿಗೆ ತೆರವಾಗುವ ಚರ್ಮದ ಅಡಿಯಲ್ಲಿಯೂ ಉತ್ಪನ್ನವಾಗುತ್ತದೆ. ಐವತ್ತು ವರ್ಷದ ಒಳಗಿನವರಾದ ನಿಮಗೆ ಅಗತ್ಯವಿರುವ ೨೦೦ ಐಯುಗಳಷ್ಟು ಜೀವಸತ್ವ-ಡಿ ದೊರಕಬೇಕಾದರೆ ಒಂದೋ ನೀವು 'ದೊಡ್ಡ ಹಾಲು ಕುಡುಕ'ನಾಗಿರಬೇಕಾಗುತ್ತದೆ, ಅಥವಾ ಮನೆಯ ಹೊರಗೇ ಇರುವಂಥವನಾಗಿರಬೇಕಾಗುತ್ತದೆ. (ಆಹಾರ ಪದಾರ್ಥಗಳಿಂದ ದೇಹಕ್ಕೆ ಬೇಕಾದ ಜೀವಸತ್ವಗಳನ್ನು ಹೀರಿ ಕೊಳ್ಳಲಾಗದ ವೃದ್ಧರಿಗೆ), ದೇಹದಲ್ಲಿಯ ಜೀವಸತ್ವ-ಡಿ ಕೊರತೆಯನ್ನು ನೀಗಲು ಐವತ್ತರಿಂದ ಎಪ್ಪತ್ತು ವರ್ಷದವರಿಗೆ ೪೦೦ ಐಯು ಹಾಗೂ ಎಪ್ಪತ್ತರ ಮೇಲ್ಪಟ್ಟವರಿಗೆ ೬೦೦ ಐಯುಗಳಷ್ಟು ಜೀವಸತ್ವ ಬೇಕಾಗುತ್ತದೆಂದು ಶಿಫಾರಸ್ಸು ಮಾಡಲಾಗಿದೆ.

ಮ್ಯಾಗ್ನೀಸಿಯಮ್

ಪುರುಷರಿಗೆ ೪೨೦ ಮಿಲಿಗ್ರಾಮ್ಸ್ ಹಾಗೂ ಸ್ತ್ರೀಯರಿಗೆ ೩೨೦ ಮಿಲಿಗ್ರಾಮಿನಷ್ಟು ಅವಶ್ಯವಾದ ಮ್ಯಾಗ್ನೀಸಿಯಮ್ ದಂತ ಹಾಗೂ ಎಲುಬಿನ ಆರೋಗ್ಯಕ್ಕೆ ಅತ್ಯವಶ್ಯವಾದ ಇನ್ನೊಂದು ಖನಿಜಾಂಶ. ಮಲ್ಟಿವಿಟಮಿನ್ ಸರಾಸರಿ ನೂರಕ್ಕೆ ಇಪ್ಪತ್ತೈದರಷ್ಟು ನಿಮಗೆ ಬೇಕಾದ ಸತ್ವಗಳನ್ನು ಒದಗಿಸುತ್ತದೆ. ಎಲ್ಲ ಕಾಳುಗಳೂ, ಬೀಜಗಳೂ, ಕಾಯಿಗಳೂ, ಬಟಾಣಿ, ಹುರಳೀಕಾಯಿ ಮುಂತಾದ ಕೋಡುಗಳೂ, ದಟ್ಟ ಹಸುರಿನ ಸೊಪ್ಪುಗಳೂ ಮ್ಯಾಗ್ನೀಸಿಯಮ್ ಯುಕ್ತವಾಗಿವೆ.

ಕಬ್ಬಿಣ

ಮಕ್ಕಳಿಗೆ, ಹದಿಹರೆಯದವರಿಗೆ ಹಾಗೂ ಮಕ್ಕಳನ್ನು ಹೆರುವಷ್ಟರ ಪ್ರಾಯದ ಮಹಿಳೆಯರಿಗೆ ಕಬ್ಬಿಣಾಂಶದ ಕೊರತೆ ಯುಂಟಾಗುವ ಸಾಧ್ಯತೆ ಇದೆಯಾದರೂ, ಆರೋಗ್ಯವಂತ ಪುರುಷರಿಗೂ, ಮುಟ್ಟು ನಿಂತ ಸ್ತ್ರೀಯರಿಗೂ ಸಾಧಾರಣವಾಗಿ ಈ ಖನಿಜಾಂಶವನ್ನು ಪೂರಕವಾಗಿ ತೆಗೆದುಕೊಳ್ಳುವ ಆವಶ್ಯಕತೆ ಇರುವುದಿಲ್ಲ. ಇಂಥ ಜನರಲ್ಲಿ ಅನಾವಶ್ಯಕವಾಗಿ ಪೂರಕವಾಗಿ ನೀಡುವ ಕಬ್ಬಿಣ ದೇಹಕ್ಕೆ ಒಳ್ಳೆಯದನ್ನು ಮಾಡುವ ಬದಲು ಕೆಟ್ಟದ್ದನ್ನೇ ಮಾಡುವ ಸಂಭವ ಹೆಚ್ಚು; ಏಕೆಂದರೆ ಕಬ್ಬಿಣ ದೇಹದಲ್ಲಿ ಶೇಖರಗೊಳ್ಳುತ್ತದೆ.

ಈ ಎಲ್ಲಾ ಸಂದರ್ಭಗಳಲ್ಲಿಯೂ ಸ್ವಯ ಮೌಮಧೀಕರಣಕ್ಕೆ (Self medication) ಬಲಿಯಾಗಬೇಡಿ. ನಿಮ್ಮ ವೈದ್ಯರ ಸಲಹೆ ಮತ್ತು ಮಾರ್ಗದರ್ಶನ ತೀರ ಅವಶ್ಯ: ನೂರು ಗ್ರಂಥ ಮಾಡದದ್ದನ್ನು ಒಬ್ಬ ತಜ್ಞ ವೈದ್ಯ ಒಂದು ಗಳಿಗೆಯಲ್ಲಿ ನಿರ್ವಹಿಸಬಲ್ಲ; ನೂರು ತಜ್ಞ ವೈದ್ಯರು ನಿರ್ವಹಿಸಿದ್ದನ್ನು ಒಂದು ಕು-ಗ್ರಂಥ ಕೇವಲ ಗಳಿಗೆಯಲ್ಲಿಯೇ ನಾಶಮಾಡ ಬಲ್ಲದು!

ಕಾಳಗ ಕಾಯದ ಕಾದಲ್ ಮಾಡುವ ವಾನರ ನಿಕರ

ಡಿ.ಎ.ಶಾಮಣ್ಣ
ನಂ.೧೧೯೧,'ಅರಫ್',೧ನೇ ಮೇನ್,
೩ನೇ ಕ್ರಾಸ್,ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩.

'ಇಲ್ಲಿ ಬಾ' ಎಂಬಂತೆ ಕೈಸನ್ನೆ ಮಾಡಿ ಉಲಿಂಡಿ ನನ್ನನ್ನು ಕರೆಯುತ್ತದೆ. ಹತ್ತಿರ ಹೋಗುತ್ತಿದ್ದಂತೆಯೇ ಈ ಹರೆಯದ ಹೆಣ್ಣು ಚಿಂಪಾಂಜಿ ನನ್ನ ಕೆದರಿದ ಕೂದಲಿನಲ್ಲಿ ತನ್ನ ನೀಳ ಬೆರಳುಗಳನ್ನು ನಯವಾಗಿ ಆಡಿಸುತ್ತದೆ. ಕೂದಲು ಶುಭ್ರವಾಗಿದೆ ಎಂದು ದೃಢಪಡಿಸಿಕೊಂಡು , ತನ್ನ ಕೂದಲನ್ನು ನನ್ನೆಡೆ ತಂದು ನಾನೂ ಹಾಗೆಯೇ ಮಾಡಬೇಕೆಂದು ನಿರೀಕ್ಷಿಸುತ್ತದೆ.

ಇಷ್ಟರಲ್ಲಿ ನಾನು ಮತ್ತೊಂದು ಹೆಣ್ಣು ಚಿಂಪಾಂಜಿಯನ್ನು ಮಾತನಾಡಿಸಲು ಪಕ್ಕಕ್ಕೆ ಹೋಗುತ್ತೇನೆ. ಉಲಿಂಡಿಯ ಕಣ್ಣುಗಳು ಸಿಟ್ಟಿನಿಂದ ಉರಿಯುತ್ತವೆ. ಆದರೆ ಕೆಲವೇ ನಿಮಿಷಗಳಲ್ಲಿ ಅದು ನನ್ನೆಡೆ ತಿರುಗಿ, ಸವಿಯಾಗಿ ನಕ್ಕು ನನ್ನನ್ನು ತನ್ನೆಡೆ ಕರೆಯುತ್ತದೆ. ನಾನು ಹತ್ತಿರ ಹೋಗುತ್ತಿದ್ದಂತೆಯೇ ತನ್ನ ಹಿಂದೆ ಬಚ್ಚಿಟ್ಟುಕೊಂಡಿದ್ದ ಒಂದಿಷ್ಟು ಮರದ ಹೊಟ್ಟನ್ನು ನನ್ನ ಮುಖಕ್ಕೆ ಎರಚಿ ಚಡಪಡಿಸುತ್ತ ಓಡಿಹೋಗುತ್ತದೆ.

ಈ ಅಸೂಯೆ ಮತ್ತು ಸೇಡಿನ ಘಟನೆ ನಡೆದದ್ದು ಉಲಿಂಡಿ ವಾಸಿಸುವ ಜರ್ಮನಿಯ ಫ್ರಾಂಕ್‌ಫರ್ಟ್ ಪಟ್ಟಣದ ಮೃಗಾಲಯವೊಂದರಲ್ಲಿ. ಉಲಿಂಡಿ 'ಬೊನೊಬೊ' ಎಂಬ ಜಾತಿಗೆ ಸೇರಿದ ಗಿಡ್ಡ ಚಿಂಪಾಜಿ-ದೂರದ ಆಫ್ರಿಕದ ಅಪಾಯಕಾರಿ ಮತ್ತು ದುರ್ಗಮ ಅರಣ್ಯಗಳಲ್ಲಿ ವಾಸಿಸುವ ಪ್ರಸಿದ್ಧ ಕೋತಿಗಳಲ್ಲಿ ಒಂದು.

ನೆಟ್ಟಗಿನ ದ್ವಿಪಾದಿ ನಡಿಗೆ, ನಿಡಿದಾದ ತೆಳ್ಳನೆಯ ಕೈಕಾಲುಗಳು, ನೀಳವಾದ ಕುತ್ತಿಗೆ, ಚಿಕ್ಕ ಎದೆಗೂಡು-ಇವೆಲ್ಲವೂ ಒರಟು ಕೂದಲನ್ನು ಹೊದ್ದ 'ಬೊನೊಬೊ'ವನ್ನು ಮಾನವರಂತೆ ಕಾಣುವಂತೆ ಮಾಡಿವೆ. ತಮ್ಮ ಭಾವಗರ್ಭಿತ ಮುಖಗಳಿಂದ ಗಿಡ್ಡ ಮನುಷ್ಯರಂತೆ ಕಾಣುವ ಬೊನೊಬೊಗಳ ಮತ್ತು ಮಾನವ ವಂಶವಾಹಿಗಳಲ್ಲಿ ಶೇಕಡಾ೯೮ರಷ್ಟು ಹೋಲಿಕೆ ಇದೆ- ಇದನ್ನು ಬೊನೊಬೊಗಳ ವರ್ತನೆಯಿಂದ ಗುರುತಿಸಬಹುದಾಗಿದೆ.

ಫ್ರಾಂಕ್‌ಫರ್ಟ್‌ನಲ್ಲಿ ಕೋತಿಗಳ ಪಾಲಕರಾಗಿರುವ ಕಾರ್ಸ್ಟೆನ್ ನಾಟ್ ಹೀಗೆ ಹೇಳುತ್ತಾರೆ: "ಗೊರಿಲ್ಲ ಬೋನಿನೊಳಗೆ ಚೂಪಾದ ಕಬ್ಬಿಣದ ಸರಳೊಂದನ್ನು ಎಸೆದರೆ ಸರಳಿನ ಇರುವಿಕೆಯು ಗೊರಿಲ್ಲಗಳಿಗೆ ತಿಳಿಯುವುದು ಅವು ಸರಳಿನ ಮೇಲೆ ಕುಳಿತಾಗಲೇ. ಚಿಂಪಾಂಜಿ ಬೋನಿಗೆ ಎಸೆದರೆ ಅವು ಸರಳನ್ನು ಏನನ್ನಾದರೂ ಒಡೆದು ಹಾಕಲು ಉಪಯೋಗಿಸುತ್ತವೆ. ಆದರೆ ಬೊನೊಬೊಗಳಿಗೆ ಸರಳು ಸಿಕ್ಕಿದರೆ ಕೇವಲ ಅರ್ಧ ಗಂಟೆಯಲ್ಲಿ ಬೋನಿನ ಬೀಗವನ್ನು ತೆಗೆದು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತವೆ.

ವಿಜ್ಞಾನಿಗಳನ್ನು ಬೆರಗುಗೊಳಿಸುವುದು ಬೊನೊಬೊಗಳ ಮಾನಸಿಕ ಸಾಮರ್ಥ್ಯ ಒಂದೇ ಅಲ್ಲ. ಇವುಗಳ ವರ್ತನೆ ಸದಾ ಜಗಳಕ್ಕೆ ತಯಾರಿರುವ ಕಲಹಕಂಟಕ ಚಿಂಪಾಂಜಿಗಳಿಗಿಂತ ತೀರ ಭಿನ್ನ." ಬೊನೊಬೊಗಳ ಬಗ್ಗೆ ಅಧ್ಯಯನ ಇತ್ತೀಚೆಗಷ್ಟೆ ಆರಂಭವಾಗಿದೆ. ಆದರೆ ಇದು ಈಗಾಗಲೇ ಮಾನವನು

೨೦೦೧ನೇ ಏಪ್ರಿಲ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪಾಲ್ ರ್‍ಯಾಫೇಲ್ ಅವರ 'ದಿ ಏಪ್ಸ್ ಹೂ ಮೇಕ್ ಲವ್, ನಾಟ್ ವಾರ್' ಎಂಬ ಲೇಖನದ ಕನ್ನಡಾನುವಾದ

ಕೋತಿಗಳಿಂದ ವಿಕಾಸವಾಗಿರುವ ಬಗೆಗಿನ ದೃಷ್ಟಿಕೋನವನ್ನೇ ಬದಲಾಯಿಸಿದೆ'' ಎಂದು 'ಲಿವಿಂಗ್ ಲಿಂಕ್ಸ್ ಸೆಂಟರ್'ನ ನಿರ್ದೇಶಕ ಹಾಗೂ ಅಟ್ಲಾಂಟದ ಜಗತ್ಪ್ರಸಿದ್ಧ 'ಯೆರ್ಕ್ಸ್ ರೀಜನಲ್ ಪ್ರೈಮೇಟ್ ರಿಸರ್ಚ್ ಸೆಂಟರ್'ನಲ್ಲಿ ಸ್ತನಿ ತಜ್ಞರಾಗಿ ಕಾರ್ಯ ನಿರ್ವಹಿಸುತ್ತಿರುವ ಫ್ರಾನ್ಸ್ ಡಿ ವಾಲ್ ಹೇಳುತ್ತಾರೆ.

೧೯೭೩ರಲ್ಲಿ ತಕಾಯೋಶಿ ಕಾನೊ ಎಂಬ ಜಪಾನೀ ತರುಣ ಬೊನೊಬೊಗಳ ಬಗ್ಗೆ ಕಾಡಿನಲ್ಲಿ ಮೊದಲಬಾರಿಗೆ ಆಳವಾದ ಅಧ್ಯಯನ ನಡೆಸಿದ. ಜೇರ್ ದೇಶದ (ಈಗ ಕಾಂಗೊ) ಕಾಂಗೊ ಮತ್ತು ಕಸಾಯಿ ನದಿಗಳ ಮಧ್ಯದಲ್ಲಿರುವ ಬೊನೊಬೊ ಪ್ರಾಂತ್ಯವಾದ ದಟ್ಟ ಉಷ್ಣವಲಯ ಕಾಡಿಗೆ ಬಂದ ಕಾನೊ, ಸ್ಥಳೀಯರಿಂದ ಬೊನೊಬೊಗಳ ಬಗ್ಗೆ ದಂತಕತೆಯೊಂದನ್ನು ಕೇಳಿದ.

ಹಿಂದೆ ಮನುಷ್ಯರ ಮತ್ತು ಬೊನೊಬೊಗಳು ಜೊತೆಯಲ್ಲೆ ವಾಸಿಸುತ್ತಿದ್ದವು ಎಂದು ಸ್ಥಳೀಯ ಹಿರಿಯರೊಬ್ಬರು ತಿಳಿಸಿದರು. ಮಾನವ ಬಟ್ಟೆ ತೊಡಲು ಆರಂಭಿಸಿದಾಗ ಅದನ್ನು ಧಿಕ್ಕರಿಸಿದ ದಾಯಾದಿ ಬೊನೊಬೊಗಳು ಕಾಡಿಗೆ ಹಿಂತಿರುಗಿದವು.

ಈ ದಂತ ಕತೆಯು ಮಾನವರು ಮತ್ತು ಬೊನೊಬೊಗಳ ಸಂಬಂಧದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. ''ಹಳ್ಳಿಗರು ಆಹಾರಕ್ಕಾಗಿ ಚಿಂಪಾಂಜಿಗಳನ್ನು ಕೊಲ್ಲುತ್ತಿದ್ದರು. ಆದರೆ ಬೊನೊಬೊಗಳು ತೀರಾ ಮಾನವರಂತಿದ್ದುದರಿಂದ ಅವುಗಳನ್ನು ಕೊಲ್ಲುವುದನ್ನು ನಿಷೇಧಿಸಿದ್ದರು'' ಎಂದು ಕಾನೊ ಹೇಳಿದ. ಆದರೆ ಈಚಿನ ದಿನಗಳಲ್ಲಿ ಈ ನಿಷೇಧವನ್ನು ಜನರು ನಿರ್ಲಕ್ಷಿಸುತ್ತಿರುವುದು ತೀರಾ ವಿಷಾದಕರ.

ಕಾನೊ ಕೂಡ ಬೊನೊಬೊಗಳ ಚರ್ಯೆಯಿಂದ ಬೆರಗಾದ. ''ನೆಟ್ಟಗಿನ, ಮಾನವನಂತಿರುವ ದ್ವಿಪಾದಿ ನಡಿಗೆ ಭಂಗಿಯಲ್ಲಿ ಭಾಗದ ಬೆನ್ನಿನ ಬೊನೊಬೊಗಳು ನಡೆದು ಬರುವಾಗ ನನ್ನ ಮೈ ಝುಂ ಎಂದಿತು'' ಎಂದು ಕಾನೊ ಹೇಳುತ್ತಾನೆ.

ಬೊನೊಬೊಗಳಲ್ಲಿ ಹೆಣ್ಣುಗಳು ಕುಟುಂಬದ ಯಜಮಾನಿ ಆಗಿರುವುದನ್ನು ಕಂಡು ಕಾನೊ ಅಚ್ಚರಿಗೊಂಡ. ಹೆಣ್ಣು ಬೊನೊಬೊಗಳು ಒಟ್ಟಿಗೆ ಕೂತು ಆಹಾರ ಸೇವನೆ ಮಾಡುವಾಗ ತಮಗಿಷ್ಟವಾದ ಕೆಲವು ಗಂಡುಗಳನ್ನು ಜೊತೆಯಲ್ಲಿ ಕೂರುವುದಕ್ಕೆ ಬಿಡುತ್ತಿದ್ದುವು. ಗಂಡೇನಾದರೂ ಅಲ್ಲಿದ್ದ ಹೆಣ್ಣೊಂದರ ಮೇಲೆರಗುವುದಕ್ಕೆ ಅನುವಾದರೆ, ಉಳಿದ ಹೆಣ್ಣುಗಳು ಅದನ್ನು ನಿರ್ಲಕ್ಷಿಸುತ್ತಿದ್ದುವು ಇಲ್ಲವೆ ಕಾಡಿಗೆ ಅಟ್ಟುತ್ತಿದ್ದುವು.

ಕಾನೊ ಗಮನಿಸಿದ ಈ ವಿಷಯಗಳು ಚಕಿತಗೊಳಿಸುವಂಥದ್ದಾಗಿದ್ದುವು. ''ಪೂರ್ವ ಆಫ್ರಿಕದಲ್ಲಿರುವ ಚಿಂಪಾಂಜಿಗಳಲ್ಲಿ ಬೆಳೆದ ಎಲ್ಲ ಹೆಣ್ಣುಗಳೂ ಉಳಿದೆಲ್ಲ ಗಂಡುಗಳಿಗೂ (ಬೆಳೆದ) ಅಧೀನವಾಗಿರುತ್ತವೆ,'' ಎಂದು ಚಿಂಪಾಂಜಿಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಹಾರ್ವರ್ಡ್ ವಿಶ್ವವಿದ್ಯಾಲಯದ ಸ್ತನಿ-ತಜ್ಞ ರಿಚರ್ಡ್ ರ್‍ಯಾಂಗ್‌ಹ್ಯಾಮ್ ಹೇಳುತ್ತಾರೆ.

ಸಮಾಜದಲ್ಲಿ ಗಂಡಿನ ಪ್ರಾಬಲ್ಯದ ಬಗ್ಗೆ ಚಿಂಪಾಂಜಿಗಳಲ್ಲಿ ಮತ್ತು ಮಾನವರಲ್ಲಿರುವ ಹೋಲಿಕೆ ವಿಷಯದಲ್ಲಿ ಸ್ತನಿ ತಜ್ಞರು ಹೆಚ್ಚು ಗಮನ ಕೊಟ್ಟಿದ್ದಾರೆ. ''ಹೀಗಿರುವಾಗ ಬೊನೊಬೊಗಳ ಹೆಣ್ಣು ಪ್ರಾಬಲ್ಯದ ಸಾಮಾಜಿಕ ಸ್ವರೂಪ ಅನೇಕ ಸ್ತನಿ ತಜ್ಞರಿಗೆ (ಕನಿಷ್ಠ ಪುರುಷ ಸ್ತನಿ ತಜ್ಞರಿಗಾದರೂ!) ಉಗ್ರ ಆಘಾತವಾಗಿದೆ. ಬೊನೊಬೊಗಳ ಈ ವರ್ತನೆಯು ಹಲವು ಸ್ತ್ರೀ ಸ್ವಾತಂತ್ರ್ಯವಾದಿಗಳಿಗಾದರೂ ಉತ್ತೇಜನ ನೀಡಿದೆ. ಹೆಣ್ಣು-ಗಂಡುಗಳ ನಡುವಿನ ಬಾಂಧವ್ಯದಲ್ಲಿ ನಾವು ಅಂದುಕೊಂಡಿರುವುದಕ್ಕಿಂತಲೂ ಹೆಚ್ಚು ಹೊಂದಾಣಿಕೆ ಇದೆ ಎಂಬುದಕ್ಕೆ ಇದು ಪುರಾವೆಯಾಗಬಹುದೆ?

ಈ ವಾದ ವಾಸ್ತವವಾಗಿಯೂ ತರ್ಕಬದ್ಧವಲ್ಲ. "ಕೋತಿಗಳಂಥ ಪ್ರೌಢ ಸ್ತನಿಗಳು ಮಾನವನ ಮಾದರಿ- ಎಂದು ಭಾವಿಸುವ ಪದ್ಧತಿಯು ಸ್ತನಿ ಶಾಸ್ತ್ರದಲ್ಲಿದೆ" ಎಂದು 'ಟೈಮ್ಸ್' ವೃತ್ತಪತ್ರಿಕೆಯಲ್ಲಿ ವಿವರಿಸಿದ ವಿಕಾಸವಾದಿ ಮನಃಶಾಸ್ತ್ರಜ್ಞ ಲೀಡಾ ಕಾಸ್ಮೈಡ್ಸ್ ಮುಂದುವರೆದು: "ಆದರೆ ಇದು ಸರಿಯಲ್ಲ. ಹೇಗೆ ಗೋರಿಲ್ಲ ಚಿಂಪಾಂಜಿಗಳು ಮಾನವರಲ್ಲವೊ ಹಾಗೆಯೇ ಮಾನವರು ಕೇವಲ ಚಿಂಪಾಂಜಿಗಳಾಗಿ ಅಲ್ಲ" ಎನ್ನುತ್ತಾರೆ.

ಬೊನೊಬೊಗಳ ಬಗ್ಗೆ ಅಧ್ಯಯನ ಮುಂದುವರೆಸಿದ ಕಾನೊ ಅಚ್ಚರಿಗೊಳಿಸುವ ಇನ್ನೂ ಹಲವಾರು ವಿಚಾರಗಳನ್ನು ಗಮನಿಸಿದ. ೧೫೦ಕ್ಕೂ ಹೆಚ್ಚು ಬೊನೊಬೊಗಳನ್ನು ವೈಯುಕ್ತಿಕವಾಗಿ ಗುರುತಿಸಬಲ್ಲವನಾಗಿದ್ದ ಅವನು, ಕೆಲವು ಗಂಡು ಹೆಣ್ಣುಗಳ ನಡುವೆ ವಿಶಿಷ್ಟವಾದ ಸಂಬಂಧವಿದ್ದದ್ದನ್ನು ಗಮನಿಸಿದ. ಕೇಮ್ ಎಂಬ ಹಿರಿಯ ಹೆಣ್ಣು ಬೊನೊಬೊ ಐಬೊ ಮತ್ತು ಮನ್ ಎಂಬ ಗಂಡು ಬೊನೊಬೊಗಳ ಜೊತೆಯಲ್ಲಿಯೇ ಇದ್ದು, ಒಟ್ಟಿಗೆ ಆಹಾರ ಸೇವಿಸುತ್ತಿತ್ತಾದರೂ, ಅವುಗಳ ಜೊತೆ ಎಂದೂ ಕೂಡಿರಲಿಲ್ಲ!

ಮೊದಮೊದಲು ಕಾನೋಗೆ ಅಚ್ಚರಿಯಾದರೂ, ಆ ಹೆಣ್ಣು ಮತ್ತು ಎರಡು ಗಂಡುಗಳು ಕೌಟುಂಬಿಕ ಪ್ರೀತಿಯ ಬಂಧನದಲ್ಲಿದ್ದ ತಾಯಿ ಮತ್ತು ಮಕ್ಕಳು ಎಂದು ನಿಧಾನವಾಗಿ ಹೊಳೆಯಿತು. "ಹೆಣ್ಣು ಬೊನೊಬೊ ಸಮಾಜದ ಅಂತರಾಳ- ಗುಂಪಿನ ಸದಸ್ಯರನ್ನು ಒಟ್ಟುಗೂಡಿಸಿಟ್ಟಿರುವ ಶಕ್ತಿ" ಎನ್ನುವ ಕಾನೊ ಮುಂದುವರಿದು : "ತಮ್ಮ ಗಂಡು ಮಕ್ಕಳ ಘನತೆಯನ್ನು ಹೆಚ್ಚಿಸಲು ಅವು ಅದೇ ಗುಂಪಿನ ಇತರ ಹೆಣ್ಣುಗಳ ಜೊತೆ ಕೂಡುವುದನ್ನು ಬೊನೊಬೊ ಹೆಣ್ಣುಗಳು ಪ್ರೋತ್ಸಾಹಿಸುತ್ತವೆ. ಬೊನೊಬೊ ಸಮಾಜದಲ್ಲಿ ಹೆಚ್ಚು ಹೆಚ್ಚು ಹೆಣ್ಣುಗಳ ಜೊತೆ ಕೂಡಿದಷ್ಟೂ ಗಂಡಿನ ಘನತೆ ಹೆಚ್ಚುತ್ತದೆ. ಇತರೆ ಗುಂಪಿನ ಗಂಡೇನಾದರೂ ತನ್ನ ಮಗನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರೆ, ಆ ಹೆಣ್ಣು ತನ್ನ ಸ್ನೇಹಿತೆಯರನ್ನೆಲ್ಲ ಒಟ್ಟುಗೂಡಿಸಿ ಮಗನ ರಕ್ಷಣೆಗೆ ಅನುವಾಗುತ್ತಿತ್ತು" ಎಂದು ನುಡಿದ.

ಗಂಡು ಬೊನೊಬೊಗಳು ಜೀವನದುದ್ದಕ್ಕೂ ತಮ್ಮ ತಾಯಂದಿರ ಜೊತೆ ಬಾಂಧವ್ಯವನ್ನು ಇಟ್ಟುಕೊಂಡಿರುತ್ತವೆ ಎಂಬುದು ನಿರಂತರ ಅಧ್ಯಯನದಿಂದ ಕಾನೊಗೆ ಮನದಟ್ಟಾಯಿತು. ಇದೊಂದು ಮಹತ್ತರವಾದ ತಿಳುವಳಿಕೆಯೆಂದು ಸ್ತನಿತಜ್ಞ ಡಿ ವಾಲ್ ಅಭಿಪ್ರಾಯ ಪಡುತ್ತಾರೆ. ಚಿಂಪಾಂಜಿ ಗಂಡುಗಳು ದೊಡ್ಡವವಾದ ಮೇಲೆ ತಮ್ಮ ತಾಯಂದಿರ ಜೊತೆ ಹತ್ತಿರದ ಸಂಬಂಧವನ್ನಿಟ್ಟು ಕೊಂಡಿರುವುದು ವಿರಳ.

ಕಾನೊವಿನ ಅಧ್ಯಯನದಿಂದ ಬೆಳಕಿಗೆ ಬಂದ ಉದ್ದೀಪಕ ಸಂಗತಿಯೆಂದರೆ ಬೊನೊಬೊಗಳ ಸಮೃದ್ಧ ಲೈಂಗಿಕ ಜೀವನ. ಇದು ಚಿಂಪಾಂಜಿ ಗೊರಿಲ್ಲಗಳ ಅರಸಿಕ ಲೈಂಗಿಕ ಸಂಬಂಧದಂತಿರದೆ, ವಾತ್ಸಾಯನ ಕಾಮಸೂತ್ರವನ್ನು ನೆನಪಿಸುವಂತಿತ್ತು! ಬೊನೊಬೊ ಹೆಣ್ಣುಗಳು ತಮ್ಮ ೪೬-ದಿನದ ಋತುಚಕ್ರದ ಅವಧಿ ಪೂರ್ತಿ ಲೈಂಗಿಕ ಚಟುವಟಿಕೆಯಲ್ಲಿ ಆಸಕ್ತರಾಗಿರುತ್ತಿದ್ದುವು- ಗೊರಿಲ್ಲಗಳು ಕೇವಲ ೧೦ ದಿನಗಳು ಮಾತ್ರ ಕೂಡಲು ಇಷ್ಟಪಡುತ್ತಿದ್ದವು.

ಬೊನೊಬೊಗಳ ಲೈಂಗಿಕ ಚಟುವಟಿಕೆಯ ವಿವಿಧ ಭಂಗಿಗಳು ಕೂಡ ಮನುಷ್ಯರನ್ನು ನೆನಪಿಸುವಂಥದ್ದಾಗಿದ್ದುವು. ದೊಡ್ಡ ವಾನರರಲ್ಲೇ ವಿಶಿಷ್ಟವಾದ ಬೊನೊಬೊಗಳ ಲೈಂಗಿಕ ಆಚರಣೆಯನ್ನು ಗಮನಿಸಿದ ಕಾನೊ...."ಇವು ಯುದ್ಧ ಮಾಡದೆ, ಪ್ರೀತಿಯನ್ನೇ ಮಾಡುವ ಮಹಾ ವಾನರರೇ ಸರಿ!" ಎಂದು ಉದ್ಗರಿಸಿದ.

ಚಿಂಪಾಂಜಿಗಳಂತೆಯೇ ಬೊನೊಬೊಗಳ ಲೈಂಗಿಕ ಚಟುವಟಿಕೆ ಅನಿಯತ. ಪ್ರತಿ

ಕೋತಿಯೂ ಆದಷ್ಟು ಹೆಚ್ಚು ಜೊತೆಗಾರರೊಂದಿಗೆ ಕೂಡುತ್ತದೆ.ತರುಣ ಹೆಣ್ಣುಗಳು ಕೈಯಲ್ಲಿ ಕಬ್ಬಿನ ಜಲ್ಲೆಗಳನ್ನು ಹಿಡಿದು ಗಂಡುಗಳನ್ನು ಲೈಂಗಿಕವಾಗಿ ಆಕರ್ಷಿಸಿದ್ದನ್ನು ಕಾನೊ ನೋಡಿದ್ದ. ಕೂಡುವುದನ್ನು ಸೂಚಿಸುವುದಕ್ಕೆ ಉದ್ರಿಕ್ತ ಕೂಗು, ಅಂಗ ಪ್ರದರ್ಶನ, ಆಹಾರದ ಆಸೆ ಮುಂತಾದ ೨೦ಕ್ಕೂ ಹೆಚ್ಚು ಅಂಗವಿಕ್ಷೇಪ/ಹಾವಭಾವಗಳು ಬೊನೊಬೊಗಳಲ್ಲಿವೆ.

ಎರಡು ಕೈಯ್ಯಲ್ಲೂ ಕಿತ್ತಳೆ ಹಣ್ಣುಗಳನ್ನು ಹಿಡಿದು, ನಿಂತಿದ್ದ ಗಂಡೊಂದರ ಹತ್ತಿರ ಹೋಗಿ, ಕೂಡಲು ಒಪ್ಪಿ, ಅನಂತರ ಆ ಎರಡು ಹಣ್ಣುಗಳನ್ನೂ ತೆಗೆದುಕೊಂಡ ಹೆಣ್ಣೊಂದನ್ನು ಡೀ ವಾಲ್ ಗಮನಿಸಿದ್ದರು.

ಜರ್ಮನಿಯ 'ಮ್ಯಾಕ್ಸ್ ಫ್ಯಾಕ್ಸ್ ಇನ್ಸ್ಟಿಟ್ಯೂಟ್ ಫಾರ್ ಬಿಹೇವೋರಿಯಲ್ ಫಿಸಿಯಾಲಜಿ'ಯ ಬಾರ್ಬರ ಫ್ರುಥ್ ಕಾಂಗೊದಲ್ಲಿ ಬೊನೊಬೊಗಳ ವರ್ತನೆ ಬಗ್ಗೆ ಏಳು ವರ್ಷ ಅಧ್ಯಯನ ಮಾಡಿದ್ದಾಳೆ. ಬೊನೊಬೊಗಳ ಗುಂಪಿನ ಪ್ರತಿಯೊಂದು ಕೋತಿಯೂ ದಿನದ ಕೊನೆಯಲ್ಲಿ ಮರದ ಮೇಲಿನ ಕೊಂಬೆಗಳಲ್ಲಿ ಅಟ್ಟೆಯನ್ನು ಮಾಡಿ, ಪಕ್ಕದಲ್ಲಿದ್ದ ಸಣ್ಣ ಕೊಂಬೆ/ಎಲೆಗಳನ್ನು ಅದಕ್ಕೆ ಹೆಣೆದು, ಮೆತ್ತನೆಯ ಸುಪ್ಪತ್ತಿಗೆ ಮಾಡಿದ್ದನ್ನು ಫ್ರುಥ್ ಗಮನಿಸಿದ್ದಳು.ಕೇವಲ ಹುಲ್ಲನ್ನು ಮೈಯ್ಯಿಂದ ತಟ್ಟಿ ಮಾಡಿದ ಚಿಂಪಾಂಜಿಗಳ ಕಚ್ಚ ತೊಟ್ಟಿಲಿಗಾಗಲೀ, ಗೊರಿಲ್ಲಗಳ ಒರಟು ಗೂಡಿಗಾಗಲೀ ಇದನ್ನು ಹೋಲಿಸಲೇ ಆಗದು.

ಅಟ್ಲಾಂಟದ ಸ್ತನಿ ತಜ್ಞೆ ಸ್ಯೂಸ್ಯಾವೇಜ್ ರುಂಭ ಬೊನೊಬೊಗಳ ಬುದ್ಧಿಶಕ್ತಿಯ ಅಚ್ಚರಿಗೊಳಿಸುವ ಪ್ರದರ್ಶನವೊಂದನ್ನು ವರದಿ ಮಾಡಿದ್ದಾರೆ. ಆಹಾರವನ್ನು ಹುಡುಕುತ್ತ ಹೋದ ಬೊನೊಬೊಗಳ ಗುಂಪೊಂದನ್ನು ಆಕೆ ಹಿಂಬಾಲಿಸಿದಳು. ಕಾಡಿನ ಭರ್ತಿ ಅಡ್ಡಡ್ಡಲಾಗಿದ್ದ ಬೊನೊಬೊ ಕಾಲುದಾರಿಗಳಿದ್ದುವು. ಒಂದು ಗುಂಪಿನ ಕಾಲುದಾರಿ ಮತ್ತೊಂದು ಗುಂಪಿನ ಕಾಲುದಾರಿಯನ್ನು ಹಾದಾಗ, ಆ ಜಾಗದಲ್ಲಿ ಕೊಂಬೆಯನ್ನೊ, ದೊಡ್ಡ ಎಲೆಗಳನ್ನೊ ಬೊನೊಬೊಗಳು ಇಡುತ್ತಿದ್ದುದನ್ನು ಆಕೆ ಗಮನಿಸಿದಳು. ಕಾಂಗೊದಲ್ಲಿಯ ಪಿಗ್ಮಿ ಜನಾಂಗದ ಬೇಟೆಗಾರರು ದಾರಿಯನ್ನು ನೆನಪಿಟ್ಟುಕೊಳ್ಳಲು ಇದೇ ವಿಧಾನವನ್ನು ಉಪಯೋಗಿಸುತ್ತಾರೆ.

ಇಂಥ ಒಂದ ಪ್ರವಾಸದಲ್ಲಿ ಒಂದು ಕಡೆ ಕಾಲುದಾರಿ ಕವಲೊಡೆದಾಗ ಸ್ಥಳೀಯ ಮಾರ್ಗದರ್ಶಿಯೊಬ್ಬ ಬೊನೊಬೊಗಳು ಎಡಕ್ಕೆ ತಿರುಗಿರಬಹುದೆಂದು ಊಹಿಸಿದ. ಆದರೆ ಆ ದಿಕ್ಕಿನಲ್ಲಿ ಬೊನೊಬೊಗಳು ಇರಲಿಲ್ಲ. ಕವಲಿನಲ್ಲಿ ಕೊಂಬೆಯನ್ನು ಬಲಭಾಗಕ್ಕೆ ಇರಿಸಿದ್ದನ್ನು ಕಂಡ ಸ್ಯಾವೇಜ್ ರುಂಭ ಆ ದಿಕ್ಕಿನಲ್ಲಿ ತಿರುಗಿದಾಗ ಅಲ್ಲಿ ಬೊನೊಬೊಗಳು ಆಹಾರ ಸೇವನೆ ಮಾಡುತ್ತಿದ್ದದ್ದು ಕಂಡುಬಂತು.

ಅಟ್ಲಾಂಟದ ಜಾರ್ಜಿಯ ಸ್ಟೇಟ್ ವಿಶ್ವವಿದ್ಯಾಲಯದ ತನ್ನ ಪ್ರಯೋಗಾಲಯದಲ್ಲಿರುವ ಬೊನೊಬೊಗಳು ೩೦೦೦ಕ್ಕೂ ಹೆಚ್ಚು ಇಂಗ್ಲಿಷ್ ಪದಗಳ ಅರ್ಥವನ್ನು ಬಲ್ಲವೆಂದು ಸ್ಯಾವೇಜ್ ರುಂಭ ವಾದ ಮಾಡುತ್ತಾಳೆ. ಒಂದು ಪ್ರಯೋಗದಲ್ಲಿ ಆಕೆ ಕಾಂಜಿ ಎಂಬ ತರುಣ ಬೊನೊಬೊಗೆ ರಬ್ಬರಿನ ಹಾವು ಮತ್ತು ಬೊಂಬೆ ನಾಯಿಯನ್ನು ಕೊಟ್ಟಳು. ಈ ಆಟ ಸಾಮಾನುಗಳನ್ನು ಕಾಂಜಿ ಇದೇ ಮೊದಲು ನೋಡಿದ್ದಾದರೂ, ಕಾಡಿನಲ್ಲಿ ನಡೆದಾಡುವಾಗ ನಿಜವಾದ ಹಾವು ನಾಯಿಗಳನ್ನು ಅದು ನೋಡಿತ್ತು. ''ಹಾವಿಂದ ನಾಯಿಯನ್ನು ಕಚ್ಚಿಸು'' ಎಂದು ರುಂಭ ಹೇಳಿದಾಗ , ಕಾಂಜಿ ಹಾವಿನ ಮೂತಿಯನ್ನು ಸೀದಾ ನಾಯಿಯ ಪೃಷ್ಠಕ್ಕೆ ಅಂಟಿಸಿತು.

''ಈಗ ನಾಯಿಯಿಂದ ಹಾವನ್ನು ಕಚ್ಚಿಸು''

ಎಂದು ರುಂಬ ಹೇಳಿದಾಗ, ಕಾಂಜಿ ನಾಯಿಯ ಬಾಯಿಯೊಳಕ್ಕೆ ಹಾವಿನ ಮೂರ್ತಿಯನ್ನು ತೂರಿಸಿತು.

ಹಲವು ಸ್ತನಿ ತಜ್ಞರು ಸ್ಯಾವೇಜ್ ರುಂಬಳ ಬೊನೊಬೊಗಳಿಗೆ ಆಂಗ್ಲ ಭಾಷೆಯನ್ನು ಗ್ರಹಿಸುವ ಅಸಾಧಾರಣ ಶಕ್ತಿ ಇದೆಯೆಂದು ನಂಬುತ್ತಾರೆ. ಕೆಲವು ಚಿಂಪಾಂಜಿ, ಗೊರಿಲ್ಲ ಮತ್ತು ಒರಾಂಗುಟಾನ್‌ಗಳಿಗೆ ಕಿವುಡರು ಬಳಸುವ ಸಂಕೇತ ಭಾಷೆಯ ನೂರಾರು ಪದಗಳನ್ನು ಅರ್ಥಮಾಡಿಸುವುದರಲ್ಲಿ ವಿಜ್ಞಾನಿಗಳು ಸಫಲರಾಗಿದ್ದಾರೆ.

ಆದರೆ ಈ ವಿಷಯದ ಬಗ್ಗೆ ವಿಜ್ಞಾನಿಗಳಲ್ಲಿ ಒಮ್ಮತವಿಲ್ಲ. ಚಿಂಪಾಂಜಿಗಳಿಗೆ ಸಂಕೇತ ಭಾಷೆಯನ್ನು ಕಲಿಸಲು ಪ್ರಯತ್ನಪಟ್ಟವರಲ್ಲಿ ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದ ಹರ್ಬರ್ಟ್ ಟೆರೈಸ್ ಒಬ್ಬರು. ತರುಣ ಚಿಂಪಾಂಜಿಯೊಂದಕ್ಕೆ ಸಂಕೇತ ಭಾಷೆಯ ಮೂಲ ಸಂಜ್ಞೆಗಳನ್ನು ಕಲಿಸಿಕೊಡಲು ಪ್ರಯತ್ನಿಸಿದಾಗ, ಪ್ರತಿ ಸಂಜ್ಞೆಯನ್ನು ಕಲಿತಾಗಲೂ ಅದು ತಿಂಡಿಯೋ, ಮತ್ತಾವುದಾದರೋ ಪ್ರತಿಫಲವನ್ನು ನಿರೀಕ್ಷಿಸುತ್ತಿತ್ತು.

ಮಸಾಚುಸೆಟ್ಸ್‌ನ ತಾಂತ್ರಿಕ ವಿದ್ಯಾಲಯದ ಭಾಷಾತಜ್ಞ ನೋಂ ಚಾಮ್‌ಸ್ಕಿ ಮತ್ತು ಇತರರು ಕೋತಿಗಳು ಭಾಷೆಯನ್ನು ಅರ್ಥಮಾಡಿಕೊಳ್ಳಬಲ್ಲವೆಂಬುದನ್ನು ನಂಬುವುದಿಲ್ಲ. ''ಪ್ರಾಣಿಯೊಂದು ಭಾಷೆಯನ್ನು ತಿಳಿಯಬಲ್ಲ ಸಾಮರ್ಥ್ಯ ಪಡೆದಿದ್ದೂ, ಏಕೊ ಅದನ್ನು ಇಲ್ಲಿಯವರೆಗೂ ಉಪಯೋಗ ಮಾಡದೆ ಇದ್ದರೆ ಅದು ವಿಕಾಸದ ಪವಾಡವೇ ಸರಿ!'' ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಕಾಂಗೋದಲ್ಲಿಯ ಬೊನೊಬೊಗಳ ಪ್ರಾಂತ್ಯ ಆಂತರಿಕ ಯುದ್ಧದ ರಕ್ತಪಾತದಲ್ಲಿ ಮುಳುಗಿರುವುದರಿಂದ ಸಂಶೋಧಕರು ಅಲ್ಲಿಗೆ ಹೋಗಲು ಹೆದರುತ್ತಾರೆ. ಕಳೆದ ಎರಡು ವರ್ಷಗಳಿಂದ ಸಂಶೋಧನೆ ಹೆಚ್ಚು ಕಡಿಮೆ ಅಮೆರಿಕ ಮತ್ತು ಯೂರೋಪಿನ ಕೆಲವು ಮೃಗಾಲಯಗಳಲ್ಲಿರುವ ಸುಮಾರು ೧೫೦ ಬೊನೊಬೊಗಳಿಗೆ ಸೀಮಿತವಾಗಿದೆ. ಈ ಪ್ರಾಣಿಗಳ ಸಂಖ್ಯೆ ಕುಗ್ಗುತ್ತಿದೆ ಎಂದು ಕಾನೊ ಆತಂಕಪಟ್ಟುಕೊಳ್ಳುತ್ತಾನೆ. ''ಆಂತರಿಕ ಯುದ್ಧ, ಜನಸಂಖ್ಯೆಯ ಒತ್ತಡ ಹಾಗೂ ಬೊನೊಬೊ ನೆಲೆಯ ನಾಶ ಇವೆಲ್ಲವೂ ಬೊನೊಬೊಗಳನ್ನು ವಿನಾಶದಂಚಿಗೆ ತಳ್ಳುತ್ತಿದೆ.'' ಎಂದು ಹೇಳುವ ಕಾನೊ ಈಗ ಕಾಡಿನಲ್ಲಿ ಕೇವಲ ೧೦,೦೦೦ ಬೊನೊಬೊಗಳು ಉಳಿದಿರಬಹುದೆಂದು ಅಂದಾಜು ಮಾಡುತ್ತಾನೆ.

ಫ್ರಾಂಕ್‌ಫರ್ಟ್‌ನ ಮೃಗಾಲಯದಲ್ಲಿ ತನ್ನ ಪುಟ್ಟ ತಂಗಿಯನ್ನು ನಡೆದಾಡಿಸುತ್ತಿರುವ ಉಲಿಂಡಿಯನ್ನು ನೋಡುತ್ತಿದ್ದಂತೆಯೇ ಈ ವಿಚಾರಗಳು ನನ್ನನ್ನು ಚಿಂತಾಮಗ್ನನನ್ನಾಗಿಸಿದುವು. ಸ್ನೇಹ ಸ್ವಭಾವದ ಉಲಿಂಡಿ ನನಗೆ ವಿಶಿಷ್ಟವಾಗಿ ಕಂಡಿತು. ಆದರೆ ಇಂತಹ ಎಷ್ಟೋ ಬೊನೊಬೊಗಳು ಆಂತರಿಕ ಯುದ್ಧದಲ್ಲಿ ಮುಳುಗಿರುವ ಕಾಂಗೊದ ಕಾಡುಗಳಲ್ಲಿ ಆಹಾರಕ್ಕೂ ಕಷ್ಟಪಡುತ್ತಿವೆ.

ಉಲಿಂಡಿಯ ಪ್ರತಿಕ್ರಿಯೆಯನ್ನು ಗಮನಿಸಲು ಮೃಗಾಲಯದ ಒಬ್ಬ ಸಿಬ್ಬಂದಿ ಅದರ ಬೋನಿನೊಳಕ್ಕೆ ಮಿಡತೆಯನ್ನು ಎಸೆದಾಗ, ಭಯದಿಂದ ಕೂಗುತ್ತ, ತನ್ನ ಪುಟ್ಟ ತಂಗಿಯನ್ನು ಚಿಲಿಪಿಲಿಗುಟ್ಟುತ್ತಿರುವ ವಿಚಿತ್ರ ಕೀಟದಿಂದ ರಕ್ಷಿಸಲು ತಬ್ಬಿಹಿಡಿಯುತ್ತದೆ. ಕೆಲವೇ ಕ್ಷಣಗಳಲ್ಲಿ ಧೈರ್ಯ ತಂದುಕೊಂಡು ಮಿಡತೆಯನ್ನು ಓಡಿಸಲು ಅನುವಾಗುತ್ತದೆ. ಮಿಡತೆ ಬೋನಿನಿಂದ ಹೊರಗೆ ಹೋದ ಮೇಲೆ ಉಲಿಂಡಿ ನನ್ನೆಡೆ ತಿರುಗಿ ವಿಜಯೋತ್ಸಾಹದ ದೃಷ್ಟಿಯನ್ನು ಬೀರುತ್ತದೆ.

ಹೊಸನಾಡ ಕಟ್ಟುತ್ತಿರುವ ಜವ್ವನಿಗರು

ಸರೋಜ ಆರ್. ಆಚಾರ್ಯ
"ಭಾಗೀರಥಿ"
೧-೨-೫೦ ಬಿ, ಕುಂಜಿ ಬೆಟ್ಟು
ಉಡುಪಿ-೫೭೬೧೦೨

"ಒಂದು ಹೊಸ ಸಂಸ್ಥೆಯನ್ನು ಕಟ್ಟುವುದೆಂದರೆ ನಮಗೆ ಅದೊಂದು ಮೋಜಿನ ಕೆಲಸ!"

'ಮೈಕ್ರೋಲಿಂಕ್'ನ, ಪ್ರಧಾನ ಕಚೇರಿಯ, ಓರಣವಾದ ಕಟ್ಟಡಗಳ ಮಧ್ಯೆ ನಡೆದು ಹೋಗುತ್ತಿರುವಾಗ ಉತ್ಸಾಹದಿಂದ ಹೀಗೆ ಹೇಳಿಕೆ ನೀಡುತ್ತಾನೆ ಅಲ್ವಿನ್ ಮಾರ್ಟಸ್ಸನ್. ಅಲ್ಲಿಯ ದೃಶ್ಯವನ್ನು ನೋಡುವಾಗ ನನಗೆ ಸಿಲಿಕನ್ ವ್ಯಾಲಿಯು ನೆನಪಾಗುತ್ತದೆ. ಸರಳ ಉಡುಪಿನಲ್ಲಿರುವ ಯುವಕರೂ, ಯುವತಿಯರೂ 'ಕೀ-ಬೋರ್ಡ್'ನ ಮೇಲೆ ಚುರುಕಾಗಿ ಬೆರಳಾಡಿಸುತ್ತಿದ್ದಾರೆ, ಪ್ರೋಗ್ರಾಮ್‌ಗಳನ್ನು ಸಿದ್ಧಪಡಿಸುತ್ತಿದ್ದಾರೆ, ಮತ್ತು ಕಾರ್ಯಸೂಚಿಗಳನ್ನು ರೂಪಿಸುತ್ತಿದ್ದಾರೆ. ಕಳೆದ ಎರಡೇ ವರ್ಷಗಳ ಅವಧಿಯಲ್ಲಿ, ಮುಮ್ಮಡಿಯಾಗಿ ಬೆಳೆದಿರುವ ಈ ಸಂಸ್ಥೆಯ ವಾರ್ಷಿಕ ಆದಾಯ ಈಗ ೭೦ ದಶಲಕ್ಷ ಅಮೆರಿಕನ್ ಡಾಲರ್‌ಗಳು!

ಆದರೆ ನಾವೀಗ ಕ್ಯಾಲಿಫೋರ್ನಿಯಾದಲ್ಲಿ ಇಲ್ಲ : ಮಾಹಿತಿ ತಂತ್ರವಿದ್ಯೆಯ ಈ ಬೃಹತ್ ಸಂಸ್ಥೆ "ಮೈಕ್ರೋಲಿಂಕ್", ಎಸ್ಟೋನಿಯಾ ದೇಶದ ರಾಜಧಾನಿ 'ಟ್ಯಾಲಿನ್' ನಗರದ ಹೊರವಲಯದಲ್ಲಿದೆ. ಅಂತೆಯೇ ಕೆಂಚು ಕೂದಲಿನ, ಬರೀ ೨೭ ವರ್ಷ ಪ್ರಾಯದ, ತೆಳುಕಾಯದ ಈ ತರುಣ ಅಲ್ವಿನ್ ಮಾರ್ಟಸ್ಸನ್ ಈ ಸಂಸ್ಥೆಯ ಅಧ್ಯಕ್ಷ!

ಕಳೆದ ೧೮ ತಿಂಗಳುಗಳಲ್ಲಿ ನಾವು ನಮ್ಮ ಸಂಸ್ಥೆಗೆ ೧೫ ಹೊಸ ಸೇರ್ಪಡೆಗಳನ್ನು ಮಾಡಿದ್ದೇವೆ. ಮುಂದಿನ ವರ್ಷ ನಮ್ಮ ಅಭಿವೃದ್ಧಿ ಇಮ್ಮಡಿಯಾಗಲಿದೆ ; ಅನಂತರ ನಾವು ಬಾಲ್ಟಿಕ್ ಸಮುದ್ರದಾಚೆಯೂ ನಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲಿದ್ದೇವೆ!"

ಬಿಸಿರಕ್ತದ ಯುವಕ ಮಾರ್ಟಸ್ಸನ್‌ನ ಹುರುಪಿನ ಮಾತುಗಳು ಆವನ ದೇಶದಲ್ಲಿ ಆಗುತ್ತಿರುವ ಮಹತ್ತರ ಬದಲಾವಣೆಗಳ ಲಾಕ್ಷಣಿಕ ನಿದರ್ಶನವೇ ಆಗಿವೆ. ಸೋವಿಯತ್ ಒಕ್ಕೂಟದಿಂದ ಬೇರ್ಪಟ್ಟಿರುವ ಎಸ್ಟೋನಿಯಾ ದೇಶದ ಇಂದಿನ ಆರ್ಥಿಕ ಪ್ರಗತಿಗೆ, ಸತತವಾಗಿ ಮೇಲೇರುತ್ತಿರುವ ಜೀವನದ ಗುಣಮಟ್ಟಕ್ಕೆ, ಮತ್ತು ವಿಪುಲವಾಗಿರುವ ಉದ್ಯೋಗಾವಕಾಶಗಳಿಗೆ ಆ ದೇಶ ಧೈರ್ಯವಾಗಿ ಕೈಗೊಂಡ ಮುಕ್ತ ಮಾರುಕಟ್ಟೆಯ ಸಿದ್ಧಾಂತಗಳೇ ಮೂಲ ಕಾರಣವೆಂದು ಹೇಳಬಹುದು. ವಾಷಿಂಗ್ಟನ್‌ನ ಅಂತಾರಾಷ್ಟ್ರೀಯ ಶಾಂತಿ ದತ್ತಿಯ ಒಬ್ಬ ತಜ್ಞ ಅನಟೋಲ್ ಲೀವನ್ ಹೇಳುತ್ತಾರೆ: 'ಎಸ್ಟೋನಿಯಾದ ಪ್ರಜೆಗಳಿಗೆ ಹೆಮ್ಮೆಪಟ್ಟುಕೊಳ್ಳಲು ಬೇಕಾದಷ್ಟು ವಿಷಯಗಳಿವೆ !" ಎಂದು ತೆರಿಗೆಗಳನ್ನು ಗಣನೀಯವಾಗಿ ಇಳಿಸಿದುದರಿಂದ ವಿದೇಶಿ ಬಂಡವಾಳ ಹೂಡಿಕೆದಾರರು ಸಹಜವಾಗಿಯೇ ಆಕರ್ಷಿತರಾಗುತ್ತಾರೆ. 'ಸ್ಕ್ಯಾಂಡಿನೇವಿಯಾ'ದ ಉನ್ನತ ತಾಂತ್ರಿಕ. ಕೈಗಾರಿಕಾ ಘಟಕಗಳೊಂದಿಗೆ ಕೈ ಜೋಡಿಸಿರುವ ಈ ಪುಟ್ಟ ದೇಶ ಎಸ್ಟೋನಿಯಾ, ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮೊಬೈಲ್ (ಜಂಗಮ) ದೂರವಾಣಿಯ ಮತ್ತು ಅಂತರ್ಜಾಲ ಸಂಪರ್ಕದ ಸೌಕರ್ಯಗಳನ್ನು

ಅಕ್ಟೋಬರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಫೆರ್ಗಸ್ ಬೋರ್ಡ್‌ವಿಚ್ ರ 'ದಿ ಕಂಟ್ರಿ ರನ್ ಬೈ ಕಿಡ್ಸ್' ಎಂಬ ಲೇಖನದ ಭಾವಾನುವಾದ

ಹೊಂದಿರುವ ದೇಶವೆಂಬ ಕೀರ್ತಿ ಪಡೆದಿದೆ.

ಎಸ್ಟೋನೀಯಾದ ಕೆಲವು ಹೊಸ ನಾಯಕರಂತೂ ಮಾರ್ಟಿನ್ಸನ್‌ಗಿಂತಲೂ ವಯಸ್ಸಿನಲ್ಲಿ ಕಿರಿಯವರಾಗಿದ್ದಾರೆ ಎನ್ನುವುದು ಗಮನಾರ್ಹವಾದ ಸಂಗತಿ! ಜನಪ್ರಿಯ ರಾಜಕಾರಣಿ ಮತ್ತು ಬಿಸಿನೆಸ್ ಶಾಲೆಯ ಉಪನ್ಯಾಸಕನೂ ಆಗಿರುವ, ೨೭ ವರ್ಷದ, ಹೆಗಲವರೆಗೂ ಕೆಂಗೂದಲನ್ನು ಇಳಿಬಿಟ್ಟಿರುವ, ದೃಢಕಾಯದ ಸುಂದರ ತರುಣ ಮಾಲಿಸ್ ಕಿಟ್ಸಿಂಗ್ ಹೇಳುತ್ತಾನೆ: ''ನಾವು ಸ್ವಾತಂತ್ರ್ಯ ಪಡೆದಾಗ ನಮ್ಮ ಮುಂದೆ ಎರಡು ಬಗೆಯ ಜನರಿದ್ದರು. ನಮಗೆ ಉಪಯುಕ್ತವಲ್ಲದ ಅಪಾರ ಅನುಭವ ಜ್ಞಾನವನ್ನು ಹೊಂದಿದ್ದ ಜನರು ಒಂದೆಡೆ; ಯಾವುದೇ ಪೂರ್ವಾನುಭವ ಇಲ್ಲದಿರುವ, ಆದರೆ ಹೊಸ ಬದಲಾವಣೆಗಳಿಗೆ ಹೊಂದಿಕೊಂಡು ಹೊಸತನ್ನು ಕಲಿಯಲು ಉತ್ಸುಕರಾಗಿರುವ ಜನರು ಇನ್ನೊಂದೆಡೆ! ನಾವು ಎರಡನೆಯ ವರ್ಗದವರನ್ನೇ ಆರಿಸಿಕೊಂಡೆವು!''

ಸೋವಿಯತ್ ಆಳ್ವಿಕೆ ಕೊನೆಗೊಂಡ ಸಮಯ; ೪೩ ವರ್ಷದ ಜೂರಿ ಮೋಯಿಸ್, ಸ್ಥಳೀಯ ಅಂಗಡಿ ಸಮುಚ್ಚಯದಲ್ಲಿ ಒಂದು ಮೇಜನ್ನು ಬಾಡಿಗೆಗೆ ಪಡೆದುಕೊಂಡು, ತನ್ನ ಇಬ್ಬರು ಗೆಳೆಯರೊಂದಿಗೆ 'ರೂಬಲ್' ಅನ್ನು ವಿದೇಶಿ ಕರೆನ್ಸಿಯೊಂದಿಗೆ ವಿನಿಮಯ ಮಾಡಲು ತೊಡಗಿದ. ಆಗೆಲ್ಲ ಬ್ಯಾಂಕಿಂಗ್ ಕಾನೂನುಗಳು ಅಸ್ತಿತ್ವದಲ್ಲೇ ಇರಲಿಲ್ಲವಾಗಿ, ನಾಯಿಕೊಡೆಗಳಂತೆ ಎಲ್ಲೆಲ್ಲೂ ಬ್ಯಾಂಕ್‌ಗಳು ತಲೆಯೆತ್ತಿದ್ದುವು; ಒಂದು ಗ್ಯಾರೇಜಿನೊಳಗೆ ಎರಡು ಡೆಸ್ಕ್‌ಗಳು, ಒಂದು ಹಣದ ಪೆಟ್ಟಿಗೆ, ಇಷ್ಟಿದ್ದರೆ ಬ್ಯಾಂಕ್ ಸಿದ್ಧ! ''ಬ್ಯಾಂಕ್‌ಗಳು ಪ್ರತಿ ತಿಂಗಳೂ ದಿವಾಳಿಯಾಗುತ್ತಿರಲು, ನಾವು ಹೊಸ ಯೋಜನೆ ಹಾಕಿದೆವು. ಆ ಪ್ರಕಾರ ನಾವು ಹಣವನ್ನು ಗಣಕತಂತ್ರ ವಿದ್ಯೆಯ ಪರಿಕರ ಮತ್ತು ಆಡಳಿತದ ತರಬೇತಿ ಕೇಂದ್ರಗಳಲ್ಲಿ ತೊಡಗಿಸಿದೆವು. ಅಂತೆಯೇ ವಿಶ್ವವಿದ್ಯಾಲಯದಿಂದ ಹೊರ ಬರುತ್ತಿರುವ ನೂತನ ಪದವೀಧರರನ್ನೇ ಉದ್ಯೋಗಗಳಲ್ಲಿ ನೇಮಿಸಿದೆವು!'' ಎಂದು ವರ್ಣಿಸುವ ಮೋಯಿನ್ ಪೂರ್ವದಲ್ಲಿ ಒಂದು ಕಾರಖಾನೆಯಲ್ಲಿ ಮೇಲ್ವಿಚಾರಕನಾಗಿದ್ದ. ತೀಕ್ಷ್ಣವಾದ ಕಣ್ಣುಗಳ, ಗಿಡ್ಡ ಕೂದಲಿನ, ಆಕರ್ಷಕ ವ್ಯಕ್ತಿತ್ವದ ಮೋಯಿನ್ ತನ್ನ ಗೆಳೆಯರೊಂದಿಗೆ 'ಹನ್ಸಾ ಬ್ಯಾಂಕ್'ನ್ನು ಪ್ರಾರಂಭಿಸಿದಾಗ ಅವರು ಹಾಕಿದ್ದ ಮೂಲಧನ ಬರೀ ೩೦೦೦ ಡಾಲರ್‌ಗಳು. ಮುಂದೆ ಅದು ಅಭಿವೃದ್ಧಿಯಾಗಿ ೬೦% ಸ್ವದೇಶಿ ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಂಡಿತು. ೧೯೯೮ರಲ್ಲಿ ಮೋಯಿಸ್ ಬಳಗದವರು ಹನ್ಸಾ ಬ್ಯಾಂಕನ್ನು ಸ್ವೀಡನ್ನಿನ ಒಂದು ಆರ್ಥಿಕ ಸಂಸ್ಥೆಗೆ ಮಾರಾಟ ಮಾಡಿದಾಗ ಅದರ ಬೆಲೆ ೬೪೦ ದಶಲಕ್ಷ ಡಾಲರ್‌ಗಳು!

ಕಳೆದ ವರ್ಷ ಮೋಯಿಸ್ 'ಟಾಲ್ಲಿನ್' ನಗರದ ಮೇಯರಾಗಿ ಆಯ್ಕೆಯಾಗಿದ್ದಾನೆ. ದೇಶದ ಪ್ರಮುಖ ಸೇವೆಗಳನ್ನು ಖಾಸಗೀಕರಣಗೊಳಿಸುವ ಉಪರಿ ಸಂಪತ್ತುಗಳನ್ನು ವಿಕ್ರಯಿಸಿ, ಆಡಳಿತ ಯಂತ್ರವನ್ನು ಸರಾಗವಾಗಿ ನಡೆಸುವ ಉದ್ದೇಶಗಳು ಅವನವು. ''ನಮ್ಮಲ್ಲಿ ಅತಿ ಹೆಚ್ಚು ನೌಕರರು ಅತಿ ಕಡಿಮೆ ಕೆಲಸ ಮಾಡುತ್ತಿದ್ದಾರೆ ಹಲವರಿಗೆ ತಮ್ಮ ಜೀವನಪಥವನ್ನೇ ಬದಲಿಸುವಂತೆ ಉತ್ತೇಜನ ನೀಡಬೇಕಾಗಿದೆ. ಆ ಮೂಲಕ ಅವರಿಗೆ ಹೊಸ ದಾರಿ ತೋರಿಸುತ್ತೇವೆ.''

ಮೋಯಿಸ್‌ನ ನಿರ್ವಹಣೆಯಲ್ಲಿರುವ ಟಾಲ್ಲಿನ್ ನಗರದಲ್ಲಿ ತಾರುಣ್ಯದ ನವೋಲ್ಲಾಸ ತುಂಬಿ ತುಳುಕುತ್ತಿದೆ. ಫ್ಯಾಟ್‌ಮಾರ್ಗರೆಟ್ 'ಪೀಕ್-ಇನ್-ದಿ-ಕಿಚನ್' ಮುಂತಾದ

ಆಕರ್ಷಕ ಹೆಸರುಗಳ ಕೆಲವು ಮಧ್ಯಕಾಲೀನ ಗೋಪುರಗಳು, ನಗರದ ಇಕ್ಕಟ್ಟಾದ, ತೇಪೆ ಹಚ್ಚಿದ ಸಂದುಗಳಲ್ಲಿ ನಿಡುಸುಯ್ಯುತ್ತಿದ್ದರೆ, ಹಲವಾರು ಸುಂದರವಾದ ಹಳೆ ಕಟ್ಟಡಗಳು ಉಪಾಹಾರ ಗೃಹಗಳಾಗಿ, ಕಚೇರಿಗಳಾಗಿ, ವಾಣಿಜ್ಯ ಕೇಂದ್ರಗಳಾಗಿ ನವೀಕರಿಸಲ್ಪಡುತ್ತಿವೆ. ಈಗಲೂ ಅಕ್ಕಪಕ್ಕದ ಪ್ರದೇಶಗಳಲ್ಲಿ ಕೆಲವು ಸೋವಿಯತ್ ಯುಗದ, ಮಬ್ಬಾದ ವಸತಿ ಕಟ್ಟಡಗಳು, ಬೂದು ಬಣ್ಣದಲ್ಲಿ, ಭೂತ ಕಾಲದ ಭೂತಗಳಂತೆ ನಿಂತಿವೆ! ಆದರೆ ಇಲ್ಲಿ, ಸೋವಿಯತ್ ಆಳ್ವಿಕೆಯಿಂದ ಈಚೆ ಬಂದಿರುವ ಇತರ ದೇಶಗಳ ಬೀದಿಗಳಲ್ಲಿ, ದಯನೀಯ ಸ್ಥಿತಿಯಲ್ಲಿ, ಕಾಣ ಸಿಗುವಂಥ - ಭಿಕ್ಷುಕರ ಯಾ ಅಲೆಮಾರಿಗಳ ಸುಳಿವೂ ಸಿಗುವುದಿಲ್ಲ.

ಸರಕಾರಿ ಕಚೇರಿಗಳು, ವ್ಯವಹಾರ ಕೇಂದ್ರಗಳು, ಉದ್ಯಮಗಳು, ಉಪಾಹಾರ ಮಂದಿರಗಳು ಎಂದು ಎಲ್ಲಿ ನೋಡಿದರೂ ಆರೋಗ್ಯ ಸೂಸುವ ತಾಜಾ ಮುಖದ ಗಂಡು, ಹೆಣ್ಣುಗಳು ಕರ್ತವ್ಯ ನಿರತರಾಗಿರುವುದನ್ನು ನೋಡಬಹುದಾಗಿದೆ. 'ಈಗಷ್ಟೆ ಕಾಲೇಜಿಂದ ಯಾ ಪಾಠಶಾಲೆಗಳಿಂದ ಹೊರ ಬಂದವರಂತೆ ಕಾಣುತ್ತಿರುವವರಲ್ಲ' ಎಂಬ ನಮ್ಮ ಅನಿಸಿಕೆ ಸತ್ಯವೂ ಹೌದು! ಕೇವಲ ಕೆಲವೇ ವರ್ಷಗಳ ಹಿಂದೆ ಕಮ್ಯೂನಿಸಂನ ಕರಾಳವಾದ ಹಿಡಿತದಿಂದ ಹೊರ ಬಂದಿರುವ ದೇಶವಿದು ಎಂದು ನಂಬುವುದೇ ಕಷ್ಟವೆನಿಸುತ್ತದೆ.

ಲಾಟ್ವಿಯಾ, ಲಿತುವಾನಿಯಾ ದೇಶಗಳಂತೆ ಎಸ್ಟೋನಿಯಾ ಕೂಡ ಮೊದಲನೆಯ ಜಾಗತಿಕ ಮಹಾಯುದ್ಧದ ನಂತರ ಸ್ವತಂತ್ರವಾಗಿತ್ತಾದರೂ, ಮುಂದೆ ಸೋವಿಯತ್‌ಗಳು ಮತ್ತು 'ನಾಜಿ'ಗಳು ಸರದಿಯಂತೆ ಈ ದೇಶವನ್ನು ಲೂಟಿ ಮಾಡಿದರು. ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲೂ, ನಂತರವೂ ಕೂಡ ಈ ಕೊಳ್ಳೆ ಮುಂದುವರಿದಿತ್ತು. ಈ ಸಮಯದಲ್ಲಿ ಸುಮಾರು ೧,೬೦,೦೦೦ ದಿಂದ ೧,೯೦,೦೦೦ ಎಸ್ಟೋನಿಯಾ ಪ್ರಜೆಗಳು ಕೊಲ್ಲಲ್ಪಟ್ಟರು, ಅಥವಾ ಸೆರೆಮನೆಗಳಿಗೆ ಸಾಗಿಸಲ್ಪಟ್ಟರು, ಅಥವಾ ದೇಶವನ್ನೇ ತೊರೆದು ಓಡಿಹೋದರು. 'ಬಾಲ್ಟಿಕನ್' ಮೂರು ದೇಶಗಳೂ ಕಬ್ಬಿಣದ ತೆರೆಯ ಹಿಂದೆ ಮರೆಯಾಗಿ ಹೋದುವು.

''ವಿಶ್ವದ ಇತರ ಎಲ್ಲ ದೇಶಗಳೂ ನಮ್ಮನ್ನು ಕೈಬಿಟ್ಟರೂ ನಾವು ಮಾತ್ರ ನಂಬಿಕೆ ಕಳೆದುಕೊಂಡಿರಲಿಲ್ಲ'' ಹೀಗೆ ಹೇಳುವವರು ಎಸ್ಟೋನಿಯಾ ಪ್ರಜೆಗಳ ತುಂಬು ಗೌರವಕ್ಕೆ ಪಾತ್ರರಾದ ಅಧ್ಯಕ್ಷ ಲೆನ್ನಾರ್ಟ್ ಮೆರಿ. ೭೧ ವರ್ಷ ಪ್ರಾಯವಾದರೂ ದೇಹದಾರ್ಢ್ಯವುಳ್ಳ, ಗಂಭೀರವಾದ ಮುಖಮುದ್ರೆಯ ಅಧ್ಯಕ್ಷ ಮೆರಿ ತಮ್ಮ ಬಾಲ್ಯವನ್ನು ಸೈಬೀರಿಯಾದ ಚಳಿಯಲ್ಲಿ ಕಳೆದವರು. ಅವರ ಇಡೀ ಕುಟುಂಬವನ್ನು ಅಲ್ಲಿಗೆ ಗಡೀಪಾರು ಮಾಡಲಾಗಿತ್ತು. ''ಈ ಸೋವಿಯತ್ ಒಕ್ಕೂಟ ಬಹಳ ಕಾಲ ಉಳಿಯುವುದಿಲ್ಲ ಎಂದು ನಮಗೆ ಆಗಲೇ ತಿಳಿದಿತ್ತು. ಆದರೆ ನಾವು - ಎಸ್ಟೋನಿಯನ್ನರು - ಸ್ವಂತ ರಾಷ್ಟ್ರ ನಿರ್ಮಿಸಲು ತಯಾರಿದ್ದೇವೆಯೇ ಎನ್ನುವುದೇ ಪ್ರಶ್ನೆಯಾಗಿತ್ತು!''

೧೯೮೭ರಲ್ಲಿ ಮಾಸ್ಕೋ ಆಡಳಿತದ ವಿರುದ್ಧ ಬಂಡಾಯದ ಪ್ರದರ್ಶನಗಳು ಶುರುವಾದುವು. ೧೯೯೧ ಆಗಸ್ಟ್‌ನಲ್ಲಿ ಎಸ್ಟೋನಿಯಾ ತನ್ನನ್ನು ಸ್ವತಂತ್ರ ದೇಶವೆಂದು ಮತ್ತೊಮ್ಮೆ ಘೋಷಿಸಿಕೊಂಡಿತು. ೧೯೯೨ ಸೆಪ್ಟೆಂಬರ್‌ನಲ್ಲಿ ಮೊತ್ತಮೊದಲ ಮುಕ್ತ ಚುನಾವಣೆ ನಡೆಯಿತು ಆಗ ಪ್ರಧಾನಮಂತ್ರಿಯಾದ ಮಾರ್ಟ್‌ಲಾರ್‌ಗೆ ಆಗಿನ್ನೂ ವಯಸ್ಸು ೩೨!

ತ್ವರಿತಗತಿಯಲ್ಲಿ ಬದಲಾವಣೆಗಳು

ಆದುವು. ಸೋವಿಯತ್‌ನವರಿಂದ ತರಬೇತಿ ಪಡೆದ ನ್ಯಾಯಾಧಿಪತಿಗಳನ್ನು ಮತ್ತು ಸಮಾಜವಾದಿ ಅಧಿಕಾರಿಗಳನ್ನು ತೆಗೆದು ಹಾಕಲಾಯಿತು. ಜಾನಸ್ ಪಿಕಾನಿ ಎಂಬ ಯುವ ಕ್ಯಾನ್ಸರ್ ಸರ್ಜನರನ್ನು ಸಮಾಜ ಕಲ್ಯಾಣ ಮಂತ್ರಾಲಯದ ಮುಖ್ಯಸ್ಥರಾಗಿ ನೇಮಿಸಲಾಯಿತು. ''ಅನುಭವ ಹೀನರಾಗಿದ್ದ ನಾವು ಮೊದಲು ಉದ್ಯೋಗ ಪಡೆದು, ಅನಂತರ ಅದರಿಂದಲೇ ಅನುಭವ ಪಡೆದೆವು. ತಪ್ಪುಗಳನ್ನು ಮಾಡಿದೆವು. ಆದರೆ ನಮ್ಮಲ್ಲಿ ಕ್ರಿಯಾಶೀಲತೆಯಿತ್ತು, ಉತ್ಪಾದಕತೆಯಿತ್ತು. ಇದರಿಂದಾಗಿ ಅತಿ ಶೀಘ್ರದಲ್ಲಿ ನಿಜವಾದ ಬದಲಾವಣೆ ಸಾಧ್ಯವಾಯಿತು. ಪೂರ್ವ ಪದ್ಧತಿಯ ಈ ರೂಪಾಂತರ ಕುತೂಹಲಕಾರಿಯಾಗಿತ್ತು.'' ಎನ್ನುತ್ತಾರೆ ಪಿಕಾನಿ.

ಸ್ವಾತಂತ್ರ್ಯದೊಂದಿಗೆ ಸಹಜವಾಗಿಯೇ ಆರ್ಥಿಕ ಅಸ್ಥಿರತೆ, ಅತ್ಯಾವಶ್ಯಕ ವಸ್ತುಗಳ ಕೊರತೆಯಿಂದ ಪರದಾಟ ಮತ್ತು ತಿಂಗಳಿಗೆ ೧೦೦% ಹಣದುಬ್ಬರ ಎಂದು ತುಮುಲಗಳು ಉಂಟಾದುವು. ಈ ಸಮಯದಲ್ಲಿ, ಭವ್ಯ ಭವಿಷ್ಯದ ಕನಸುಗಾರರಾದ ಕೆಲವು ತರುಣರು ಮುಂದೆ ಬಂದರು. ಇವರೆಲ್ಲ ಮಾರ್ಗರೆಟ್ ಥ್ಯಾಚರ್, ರೊನಾಲ್ಡ್ ರೀಗನ್ ಮತ್ತು ಅಮೆರಿಕದ ಮುಕ್ತ ಮಾರುಕಟ್ಟೆಯ ಸಿದ್ಧಾಂತದ ರುವಾರಿಯೆನಿಸಿದ ಮಿಲ್ಟನ್ ಫ್ರೆಡ್‌ಮನ್ ಮುಂತಾದವರ ಕಟ್ಟಾ ಅಭಿಮಾನಿಗಳು! ''ಸಮಾಜವಾದ ಸಿದ್ಧಾಂತಕ್ಕೆ ವಿರುದ್ಧವಾಗಿ ಏನೇ ಮಾಡಿದರೂ ಅದು ಒಳಿತಾಗಿಯೇ ಇರುತ್ತದೆ ಎಂಬುದು ನಮ್ಮ ಭಾವನೆಯಾಗಿತ್ತು. ಆರ್ಥಿಕ ಉನ್ನತಿಗೆ ಆರ್ಥಿಕ ಉದಾರೀಕರಣವೇ ಮೊದಲ ಹೆಜ್ಜೆ ಎಂಬುದಾಗಿ ತಿಳಿದ ನಾವು ಅದನ್ನು ಕಾರ್ಯಗತಗೊಳಿಸಲು ಚೂರೂ ತಡ ಮಾಡಲಿಲ್ಲ'' ಎಂದು ಸ್ಮರಿಸಿ ಕೊಳ್ಳುತ್ತಾನೆ ಸೀಂ ಕಲ್ಲಾಸ್. ಕಂದು ಕೂದಲಿನ ಈ ಯುವಕ ಬೇರಾರೂ ಅಲ್ಲ, ಎಸ್ಟೋನಿಯಾದ ವಿತ್ತ ಸಚಿವ!

ಎಸ್ಟೋನಿಯನರು ಬಲು ಬೇಗನೆ ಸರಕಾರದ ವಶದಲ್ಲಿದ್ದ ಉದ್ಯಮಗಳನ್ನು, ನಿಗಮಗಳನ್ನು ಖಾಸಗೀಕರಣ ಮಾಡಿದರು. ವೈಯಕ್ತಿಕ ಆದಾಯ ತೆರಿಗೆಯನ್ನು ೨೬% ಕ್ಕೆ ಇಳಿಸಿದರು. ಸುಂಕ ಪದ್ಧತಿಯನ್ನು ತೆಗೆದು ಹಾಕಿದರು. ಎಲ್ಲಕ್ಕಿಂತ ಮಿಗಿಲಾಗಿ ಅವರು ಇನ್ನೊಂದು ಅಪಾಯಕಾರಿ ಸಾಹಸವನ್ನು ಮಾಡಿದರು!

ರಷ್ಯನ್ ಹಣವಾದ 'ರೂಬೆಲ್' ಅನ್ನು ಕೈಬಿಟ್ಟು ಜರ್ಮನಿಯ ಮಾರ್ಕ್‌ನೊಂದಿಗೆ ಪರಿವರ್ತಿಸಲು ಸಾಧ್ಯವಾಗುವಂಥ ಒಂದು ಹೊಸ ಕರೆನ್ಸಿಯನ್ನು ಸ್ವೀಕರಿಸಿದ ಮೊತ್ತಮೊದಲ ದೇಶ ಎಸ್ಟೋನಿಯಾ! 'ನೀವು ದಿವಾಳಿಯಾಗಲಿದ್ದೀರಿ' ಎಂದು ರಷ್ಯಾ ಹೆದರಿಸಿತು. 'ಇಷ್ಟು ದೊಡ್ಡ ಬದಲಾವಣೆ ತರಲು ಎಸ್ಟೋನಿಯಾ ಇನ್ನೂ ಪಕ್ವವಾಗಿಲ್ಲ' ಎಂದು ಅಂತಾರಾಷ್ಟ್ರೀಯ ಸಾಂಪತ್ತಿಕ ನಿಧಿ ಎಚ್ಚರಿಸಿತು.

ಆದರೆ ನಡೆದದ್ದೇ ಬೇರೆ! ವಿದೇಶಿ ಬಂಡವಾಳ ಹೂಡಿಕೆ ಹೆಚ್ಚಾಗುತ್ತಿದ್ದಂತೆಯೇ ಹಣದುಬ್ಬರ ಇಳಿಮುಖವಾಗಿ ಹೋಯಿತು. ಇಂದು ಲಾಟ್ವಿಯಾ ಮತ್ತು ಲಿತುವೇನಿಯಾ ದೇಶಗಳು - ತಡವಾಗಿಯಾದರೂ - ಎಸ್ಟೋನಿಯಾದ ಆರ್ಥಿಕ ನೀತಿಯನ್ನು ಅನುಸರಿಸುತ್ತವೆ. ಬಲ್ಗೇರಿಯಾ, ಮಾಸಡೋನಿಯಾ ಮತ್ತು ಮಂಗೋಲಿಯಾ ದೇಶಗಳು ತಂತಮ್ಮ ಆರ್ಥಿಕ ಸುಧಾರಣೆಗೆ ಎಸ್ಟೋನಿಯಾದಿಂದ ಸಲಹೆ ಪಡೆಯುತ್ತವೆ.

ಚಿಕಾಗೋದ ಒಂದು ರಾಸಾಯನಿಕ ಕಂಪೆನಿ ವೆಲ್ಸಿಕಾಲ್' ಇದು 'ಕೋಟ್ಲಾಜಾರ್ವೇ' ಎಂಬಲ್ಲಿ ಒಂದು ಕಾರಖಾನೆಯನ್ನು ಕೊಂಡು

ಕೊಂಡಾಗ, ಅದೇ ಊರಿನವಳಾದ ಟಾಟ್ಯಾನಾ ಸ್ಟಾಲ್ಜರೋವಾ ಎಂಬ ಯುವತಿಯನ್ನು ಹಂಗಾಮಿ ಭಾಷಾನುವಾದಕಿಯಾಗಿ ಕೆಲಸಕ್ಕೆ ತೆಗೆದುಕೊಂಡಿತು. ಎಸ್ಟೋನಿಯಾದಲ್ಲಿ ಹುಟ್ಟಿದ, ಆದರೆ ರಷ್ಯನ್ ಮೂಲದವಳಾದ ಸ್ಟಾಲ್‌ಜರೋವಾ ಆಗ ವಿಶ್ವವಿದ್ಯಾಲಯದಲ್ಲಿ ಭಾಷಾ ಶಾಸ್ತ್ರದ ವಿದ್ಯಾರ್ಥಿನಿಯಾಗಿದ್ದಳು.

ಕಠಿಣ ಪರಿಶ್ರಮದಿಂದ ಗುರಿಸಾಧನೆ, ಮೊದಲ ದಿಟ್ಟ ಹೆಜ್ಜೆಯ ಮಹತ್ವ, ಬದಲಾವಣೆಯ ಅಗತ್ಯ ಮುಂತಾದ ವಿಚಾರಗಳನ್ನು ಯಾವಾಗಲೂ ಚರ್ಚಿಸುತ್ತಿರುವ ಅಮೆರಿಕದ ಜನರಿಂದ ಸ್ಟಾಲ್‌ಜರೋವಾ ಬಹಳ ಪ್ರಭಾವಿತಳಾಗಿದ್ದಳು. ಕೆಲಸದಲ್ಲಿ ಅವಳ ಹುರುಪನ್ನು ನೋಡಿ ಸಂತುಷ್ಟರಾದ ಅವಳ ಮೇಲಧಿಕಾರಿ ಅವಳನ್ನು ಸ್ಥಾಯಿ ನೌಕರಳನ್ನಾಗಿ ತೆಗೆದು ಕೊಂಡರು, ಮಾತ್ರವಲ್ಲದೆ, ಆ ಸ್ಥಾವರದ ಕಾರ್ಯನಿರ್ವಾಹಕಿಯನ್ನಾಗಿಯೂ ಮಾಡಿದರು.

“ಇಲ್ಲಿ ಉದ್ಯೋಗದ ವಾತಾವರಣ ಎಷ್ಟೊಂದು ಮುದನೀಡುತ್ತದೆಂದರೆ ನಾನು ಇಲ್ಲಿಂದ ಹೋಗಲು ಇಷ್ಟ ಪಡುವುದಿಲ್ಲ” ಎಂದು ನನ್ನ ಬಳಿ ಮಧುರವಾಗಿ, ಶುದ್ಧ ಇಂಗ್ಲೀಷ್‌ನಲ್ಲಿ ಹೇಳಿದಳು, ಅವಳು.

ಸುರಕ್ಷಾ ವಿಧಾನಗಳು, ಆಯವ್ಯಯಗಳ ಸರಿತೂಗುವಿಕೆ, ಗ್ರಾಹಕರಿಗೆ ಸುಮುಖಿ ಸೇವೆ ಇವೇ ಮುಂತಾದ ಪಾಶ್ಚಾತ್ಯ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವಂತೆ ಕೆಲಸಗಾರರ ಮನವೊಲಿಸುವ ಪ್ರಯತ್ನ ಅವಳದು. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ.

ಒಂದೊಮ್ಮೆ ‘ಸುರಕ್ಷಾ ವಿಧಾನಗಳನ್ನು ಸುಧಾರಿಸಲು ಏನೇನು ಮಾಡಲು ಸಾಧ್ಯ’ ಎಂದು ಸ್ಥಾವರದ ಮೇಲ್ವಿಚಾರಕರ ಸಭೆಯನ್ನು ಉದ್ದೇಶಿಸಿ ಅವಳು ಕೇಳಿದ್ದಳು.

‘ಏನೂ ಸಾಧ್ಯವಿಲ್ಲ’ ಎಂದು ಮಂಕಾಗಿ ಉತ್ತರಿಸಿದರು ಅವರು. “ಇನ್ನೊಮ್ಮೆ ನನ್ನ ಮುಂದೆ ಆ ಮಾತನ್ನು ಆಡಬೇಡಿರಿ. ಅಸಾಧ್ಯವೆಂಬುದು ಏನೂ ಇಲ್ಲ” ಎಂದು ಉದ್ವೇಗದಿಂದ ಸಾರಿದಳು ಸ್ಟಾಲ್‌ಜರೋವಾ. ಅರ್ಧಭಾಗದಷ್ಟು ನೌಕರರನ್ನು ಸ್ಥಾನಪಲ್ಲಟ ಮಾಡಬೇಕಾಗಿ ಬಂದರೂ, ಉಳಿದ ನೌಕರರಲ್ಲಿ ಜಾಗೃತಿ ಉಂಟಾಗುತ್ತಿರುವುದನ್ನು ನೆಮ್ಮದಿಯಿಂದ ಗಮನಿಸಿದಳು. ಇನ್ನೇನು ಕಾರಖಾನೆ ಲಾಭ ಗಳಿಸಿತು, ನೌಕರರ ವೇತನ ಇಮ್ಮಡಿಯಾಯಿತು. ೧೯೯೮ರಲ್ಲಿ ಸ್ಟಾಲ್‌ಜರೋವಾ ಆ ಸ್ಥಾವರದ ವ್ಯವಸ್ಥಾಪಕಿಯಾಗಿ ಬಡ್ತಿ ಹೊಂದಿದಳು. ಆಗ ಅವಳಿಗೆ ಪ್ರಾಯ ೨೩ ವರ್ಷ!

ಎಸ್ಟೋನಿಯಾ ಇದೀಗ ‘ಯೂರೋಪಿಯನ್ ಯೂನಿಯನ್’ ಸದಸ್ಯತ್ವ ಕೋರಿದೆ. ಅಲ್ಲಿಯ ಹೆಚ್ಚಿನ ಪ್ರಜೆಗಳು ನ್ಯಾಟೋದಲ್ಲಿಯೂ ಸದಸ್ಯತ್ವ ಹೊಂದಲು ಬಯಸುತ್ತಾರೆ; ಆದರೆ ರಷ್ಯಾ ಈ ಬಗ್ಗೆ ತನ್ನ ಅಸಂತೋಷವನ್ನು ವ್ಯಕ್ತಪಡಿಸಿದೆ.

ಯುವಶಕ್ತಿ ಮತ್ತು ಸ್ವಾತಂತ್ರ್ಯ ಸೇರಿದರೆ ಏನೇನೆಲ್ಲಾ ಸಾಧಿಸಬಹುದು ಎಂದು ಯುರೋಪಿಯನ್ನರಿಗೆ ಎಸ್ಟೋನಿಯಾ ತೋರಿಸಿ ಕೊಡುತ್ತಿದೆ. ಎಸ್ಟೋನಿಯಾದಲ್ಲಿ ಎಲ್ಲೆಡೆ ನಾನು ಗುರುತಿಸಿದ ‘ನಮ್ಮಿಂದ ಸಾಧ್ಯ’ ಎಂಬ ಈ ಆಶಾವಾದವನ್ನು ಅಲ್ಲಿಯ ತರುಣ ರಾಜಕಾರಣಿ ಕಿಟ್ಸಿಂಗ್ ಈ ರೀತಿಯಾಗಿ ವಿಶ್ಲೇಷಿಸಿದರು. “ನೀವು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು, ಕನಸುಗಳನ್ನು ನನಸಾಗಿಸಬಹುದು. ಒಂದು ಉನ್ನತ ರಾಷ್ಟ್ರದ ನಿರ್ಮಾಣದಲ್ಲಿ ಪ್ರತಿಯೊಬ್ಬ ಪ್ರಜೆಯ ಅನುದಾನವೂ ಸೇರಿರುತ್ತದೆ!”

ಪುಸ್ತಕ ಪರಿಚಯ ಮತ್ತು ಪುಸ್ತಕ ವಿಮರ್ಶೆ

ಶೋಭನಾ (ಕವನ ಸಂಕಲನ) ಕವಿ: ಮೋಹನ ಕುರುಡಗಿ ಪ್ರಕಾಶನ : ಗೀತಾಂಜಲಿ ಪ್ರಕಾಶನ, ಕೋಡಿ ಕೊಪ್ಪ, ಗದಗ ಜಿಲ್ಲೆ, ವರ್ಷ: ಮಾರ್ಚ ೨೦೦೧, ಪುಟಗಳು : xii +೭೪=೮೬, ಬೆಲೆ: ರೂ. ೪೦/-

ಮೋಹನ ಕುರುಡಗಿಯವರು ಕಾವ್ಯ ಮಾಧ್ಯಮವನ್ನು ಪ್ರಧಾನವಾಗಿ ತಮ್ಮ ಅಭಿವ್ಯಕ್ತಿಗೆ ಆರಿಸಿಕೊಂಡಿರುವುದು ಇದುವರೆಗಿನ ಅವರ ಕಾವ್ಯ ಕೃಷಿಯಿಂದ ಸ್ಪಷ್ಟವಾಗುತ್ತದೆ. ೧೯೮೦ರಿಂದ ಅವರು ಕವನ ಸಂಕಲನಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಅಚ್ಚಿನಲ್ಲಿರುವ ''ಮಹಾಶ್ವೇತೆ'' ಮತ್ತು ''ಯೋಜನಗಂಧ'' ಪುಸ್ತಕಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ''ಶೋಭನಾ'' ಕುರುಡಗಿಯವರ ಆರನೇ ಸಂಕಲನವಾಗುತ್ತದೆ.

ಈ ಸಂಕಲನದ ಪದ್ಯಗಳನ್ನು ಯಾವ ಪ್ರಕಾರಕ್ಕೆ ಸೇರಿಸಬೇಕು ಎನ್ನುವ ಗೊಂದಲವನು ಆರಂಭದಲ್ಲಿ ಈರಪ್ಪ ಎಂ. ಕಂಬಳಿಯವರು ದಾಖಲಿಸಿದ್ದಾರೆ. ''ಇವುಗಳನ್ನು ಮುಕ್ತಕಗಳೆನ್ನಬೇಕೋ, ಹಾಯಕುಗಳೆನ್ನಬೇಕೋ ಗೊಂದಲವಾಗಿ, ಮಿನಿಪದ್ಯಗಳೆಂದು ಕರೆದು ಶುಷ್ಕ, ಸಾಮಾನ್ಯೀಕರಿಸಲು ಮನಸು ಬಾರದೆ, ಕನ್ನಡ ಶಾಯರಿಗಳೆನ್ನಲೂ ಆಗದೆ 'ನೆನಪಿನ ಸಂಜೀವಿನಿ'ಗಳೆಂದು ಕರೆಯುವುದರಲ್ಲಿಯೇ ಅವುಗಳಲ್ಲಿನ ತಾಜಾತನದ ಮಾಧುರ್ಯವನ್ನು ಗುರುತಿಸಬಹುದಾಗಿದೆ'' ಎಂದಿದ್ದಾರೆ.

''ಶೋಭನಾ''ದ ಪದ್ಯಗಳು ಮೂರು ಭಾಗಗಳಲ್ಲಿ- ''ನಾನು, ನೀನು'', ''...ಮತ್ತು ಇವಳು'' ಹಾಗೂ ''ಸ್ವಗತ'' ಎಂದು ವಿಂಗಡಗೊಂಡಿವೆ. ಮೊದಲೆರಡು ಭಾಗದ ಪದ್ಯಗಳಷ್ಟೇ ಪ್ರಮಾಣದಲ್ಲಿ ಕೊನೆಯ ಭಾಗದ ಪದ್ಯಗಳ ಸಂಖ್ಯೆಯಿದೆ. ''....ಮತ್ತು ಇವಳು'' ಚಿಕ್ಕ ವಿಭಾಗ.

''ಮುನ್ನುಡಿ''ಯಲ್ಲಿ ಡಾ. ಕಾಳೇಗೌಡ ನಾಗವಾರರು ಅಭಿಪ್ರಾಯ ಪಡುವಂತೆ ''ಒಂದು ರೀತಿಯಲ್ಲಿ ಈ ಸಂಕಲನದ ಎಲ್ಲ ಕವಿತೆಗಳೂ ಭಗ್ನಪ್ರೇಮದ ವ್ಯಾಖ್ಯೆಗಳಂತೆ ಕಂಡುಬರುತ್ತವೆ.''

''ನಾನು, ನೀನು'' ವಿಭಾಗದ 'ಊರಿಗೆ ಊರೇ ಕೂಗುತ್ತಾರೆ/ ಕಣ್ಣ ತೋರಣಗಳಲಿ ಕೆಕ್ಕರಿಸುತ್ತಾರೆ'' ಎಂಬ ಕವನ ಹದಿಮೂರು ಸಾಲುಗಳನ್ನುಳ್ಳದ್ದಾಗಿದ್ದು ಇದೇ ಇಲ್ಲಿನ ದೀರ್ಘ ಕವನ; ''ಸ್ವಗತ''ದಲ್ಲಿ 'ಪ್ರೀತಿಗೀತಿಗೆ ಯಾಕೆ/ ರೀತಿ ನೀತಿ?' ಎಂಬ ಎರಡು ಸಾಲಿನ ಕವನವೂ ಇದೆ. ಹಾಗಾಗಿ ಕುರುಡಗಿಯವರು ಕವನಗಳಿಗೆ ಸಂಖ್ಯೆಯನ್ನಾಗಲೀ ಶೀರ್ಷಿಕೆಯನ್ನಾಗಲೀ ಕೊಡುವ ಗೋಜಿಗೆ ಹೋಗಿಲ್ಲ. ಅವರ ಪ್ರಕಾರ ''ಇಲ್ಲಿನ ಎಲ್ಲ ಪದ್ಯಗಳೂ ಒಟ್ಟಾಗಿ, ಪ್ರತ್ಯೇಕವಾಗಿಯೂ, ಆಂತರಿಕವಾಗಿ ಒಂದೇ ಮೂಲದ ಸ್ಫುರಿತ ದ್ರವ್ಯದ ಕಡೆಗೆ ಸಾಗುವುದರಿಂದ ನಾನು ಯಾವ ಪದ್ಯಗಳಿಗೂ ಶೀರ್ಷಿಕೆ ಕೊಡಲು ಹೋಗಲಿಲ್ಲ. ಅಂಥ ಅವಶ್ಯಕತೆಯೂ ನನಗೆ ಕಾಣಲಿಲ್ಲ.''

''ಶೋಭನಾ''ದಲ್ಲಿನ ಕಾವ್ಯ ನಾಯಕ ವೈವಾಹಿಕ ಚೌಕಟ್ಟಿನ ಆಚೆ ಅಂಕುರಿಸಿದ ತನ್ನ ಉತ್ಕಟ ಪ್ರೇಮಾಲಾಪನೆಯಿಂದಾಗಿ 'ಮೃಚ್ಛಕಟಿಕ'ದ ನಾಯಕ ಶಕಾರನನ್ನು ನೆನಪಿಸುತ್ತಾನೆ' ಎಂಬ ವೀರಪ್ಪ ಕಂಬಳಿಯವರ ಮಾತು ಒಪ್ಪತಕ್ಕದ್ದಾಗಿದೆ. ಇಲ್ಲಿನ ನಾಯಕ ಮತ್ತೆ ಮತ್ತೆ ತನ್ನನ್ನು ಪೌರಾಣಿಕ ಹಾಗೂ ಐತಿಹಾಸಿಕ ಪಾತ್ರಗಳ ಜೊತೆ ಸಮೀಕರಿಸಿಕೊಳ್ಳುತ್ತಾನೆ. ಒಮ್ಮೆ ಸಲೀಮನಾಗಿ, ಒಮ್ಮೆ ಪುರೂರವನಾಗಿ, 'ಮೇಘದೂತ'ದ ಯಕ್ಷನಾಗಿ, ವೈದೇಹಿ ವಿರಹಿತನಾದ ರಾಘವನಾಗಿ ಪ್ರಲಾಪಿಸುತ್ತಾನೆ. ಚಾರುದತ್ತ, ಜಹಂಗೀರ್, ಪಾಂಡು, ಚಂದ್ರ, ನಳ, ಪರಶಿವ, ದುಷ್ಯಂತ, ಸವ್ಯಸಾಚಿ- ಎಲ್ಲರೂ ಕವಿಯ ಒಳಗೆ ಕುಳಿತು ಬರೆಯಿಸುತ್ತಿದ್ದಾರೆ. 'ಮೊನಾಲಿಸಾ' ರಚಿಸಿದ ಡಾವಿಂಚಿ ಇದ್ದಾನೆ; ಮೈಕೆಲೆಂಜೆಲೊ ಹಾಗೂ ವೈವಸ್ವತ ಮನುವೂ ಇದ್ದಾರೆ ; ಹೆಲೆನ್‌ಗಾಗಿ ಪರಿತಪಿಸಿದ ಟ್ರೋಜನ್ನರಿದ್ದಾರೆ.

ಇವರೆಲ್ಲರಂತೆ ಕವಿ ತನ್ನ ಬಾಳೂ ಕೂಡ ತನ್ನ ಪ್ರಿಯತಮೆಯ ದೆಸೆಯಿಂದಾಗಿ ಜರ್ಝರಿತವಾಗಿದೆಯೆಂದು ಹೇಳುತ್ತಾನೆ. ಆದಾಗ್ಯೂ ಈ

ಕವನಗಳಲ್ಲೆಲ್ಲ ಒಂದು ಬಗೆಯ ಸತ್ವ ನಿರಂತರವಾಗಿ ಹರಿಯುವುದು ಗೋಚರವಾಗುತ್ತದೆ. ಉತ್ಕಟ ಪ್ರೇಮದ ನೆನಪಿನಲ್ಲಿ ಪ್ರಕಟವಾಗುವ ಸತ್ವದ ಚಹರೆ ಇದು. ಕೈಗೂಡದ ಪ್ರೇಮದಿಂದಾಗಿ ಕವಿ ಹತಾಶನಾಗಿಲ್ಲ; ಬದಲಾಗಿ ಆ ನೆನಪಿನ ಆಧಾರದಿಂದಲೇ ಚೇತರಿಸಿಕೊಂಡು ತನ್ನ ನೋವನ್ನು ವಿನೂತನವಾಗಿ ನಿವೇದಿಸಿಕೊಳ್ಳುತ್ತಿದ್ದಾನೆ. ರಚನೆ, ಶಿಲ್ಪ ಹಾಗೂ ಬಂಧದ ದೃಷ್ಟಿಯಿಂದ ಎಲ್ಲ ಪದ್ಯಗಳೂ ಯಶಸ್ವಿಯಾಗಿಲ್ಲ. ''ಅಸಂಖ್ಯ ಪ್ರೇಮಿಗಳು ಹೆಜ್ಜೆ ಹಾಕಿದ್ದಾರೆ/ಈ ವಿಶಾಲ ಶರಧಿಯ ಮರಳ ತಡಿಯಲ್ಲಿ/ ಉರುಳಿರುಳಿ ಬರುವ ದೈತ್ಯ ತೆರೆಗಳು ಅಳಿಸಿ ಹಾಕಿವೆ/ ಎಲ್ಲ ಗುರುತುಗಳನ್ನು ಆದರಿನ್ನೂ ಕನಸುತ್ತಿರುವೆ:/ ಒಂದಲ್ಲ ಒಂದು ತೆರೆ ತೊಳೆದು/ಹೋದ ಮೇಲೆ/ ಉಳಿಯುವ ನಿನ್ನ ಹೆಜ್ಜೆ ಮುತ್ತನ್ನು ಕಾಣಲು!'' ಇಷ್ಟೇ ಬಗೆಯಲ್ಲಿ ಎಲ್ಲ ಪದ್ಯಗಳೂ ಗೆಲುವು ಸಾಧಿಸಿಲ್ಲ. ''ವರ್ತುಲಗಳೆಂದೂ ವರ್ತುಲ ಗಳೇ /ಪರಸ್ಪರ ಸಂಧಿಸದಿರುವುದೇ ಅವುಗಳ ವೈಶಿಷ್ಟ್ಯ ; ಗೊತ್ತಿದೆಯೇ?'' ಎಂದು ಕೇಳುವಾಗ ಪದ್ಯ ಬಂಧ ಕವಿಯ ಕೈಯಿಂದ ಜಾರಿ ಹೋಗಿರುವುದು ಗೊತ್ತಾಗುತ್ತದೆ. ''ಬೆಟ್ಟದ ನೆರಳಿನ ಇರುಳಿನ ಹಾಗಿರುವ ನಿನ್ನ / ಇಳಿ ಬಿಟ್ಟ ಕುರುಳುಗಳು !'' ಎನ್ನುವಾಗಿನ ಸವಕಲು ಚಿತ್ರ ಪಿಚ್ಚೆನಿಸುತ್ತದೆ. ಚಿರಪರಿಚಿತವಾದ ಹಳೆಯ ಧಾಟಿ, ಸಂಕೇತಗಳನ್ನು ನಿವಾರಿಸಿಕೊಂಡು ಹೊಸ ಪ್ರತಿಮೆಯ ಹುಡುಕಾಟದಲ್ಲಿ ರಚಿಸಿರುವ ಕವನಗಳಲ್ಲಿ ಕುರುಡಗಿ ಸಫಲರಾಗಿದ್ದಾರೆ. ಹಾಗೆಯೇ ಉರ್ದು ಶಾಯಿರಿ ಹಾಗೂ ಗಜಲ್‌ಗಳಲ್ಲಿ ಖಾಯಂ ಜಾಗ ಪಡೆದಿರುವ 'ತಾಜ್‌ಮಹಲ್' ಮತ್ತು ಗುಲ್ಮೊಹರ್' ಕನ್ನಡದಲ್ಲಿ ಕಾಣಿಸಿಕೊಂಡಾಗ ಚಿತ್ರ ದಟ್ಟವಾಗುವುದಿಲ್ಲ. ವಿರಹ ವೇದನೆಯನ್ನು ತಾಜ್‌ಮಹಲ್ ಮತ್ತು ಗುಲ್ಮೊಹರ್‌ನ ಆಸರೆಯಿಲ್ಲದೆ ಪ್ರಕಟಿಸುವ ಕಲೆಯನ್ನು ಕುರುಡಗಿ ಕರತಲಾಮಲಕ ಮಾಡಿಕೊಳ್ಳಬೇಕಾಗಿದೆ. ಗೊತ್ತಿರುವ ಸಂಕೇತಗಳನ್ನು ಬದಿಗೊತ್ತಿ ಹೊಸ ರೂಪಕಗಳನ್ನು ಅನ್ವೇಷಿಸುವುದೇ ಕಾವ್ಯದ [illegible]ವಾದ ಸವಾಲು. ಇದನ್ನರಿತಿದ್ದರೆ ಕವಿ ಬೇರೆ ಚಿತ್ರ ಹಾಗೂ ಸಂಕೇತಗಳನ್ನು ಬಳಸಬಹುದಾಗಿತ್ತು.

ಕುರುಡಗಿಯವರ ಪ್ರಯತ್ನದ ಸಫಲತೆಯನ್ನು ನೆನೆಯುವಾಗ ಒಂದು ಅಂಶ ಮುಖ್ಯವಾಗಿ ಗೋಚರಿಸುತ್ತದೆ. ತಾನು ಒಂದು ಕಾಲದಲ್ಲಿ ಪ್ರೀತಿಸಿದ ಹೆಣ್ಣು ಈಗ ಬೇರೊಂದು ಮನೆಯ ಒಗೆತನದಲ್ಲಿ ಗೃಹಣಿಯಾಗಿ ಕಾಲ ಸವೆಸುತ್ತಿರಬಹುದು; ಆದರೆ ತಾನಿಲ್ಲಿ ಅವಳ ಬಗೆಗೆ ಧ್ಯಾನಿಸುತ್ತಾ ಪದ್ಯ ಹೊಸೆಯುತ್ತಿದ್ದೇನೆ ಎಂಬ ಅರಿವಿನ ನಿವೇದನೆಯ ಹೊಸತನ ಆಕರ್ಷಕವಾಗಿದೆ. ಕಾವ್ಯವನ್ನು ಒಂದು ಪೀಠದಲ್ಲಿಟ್ಟು ಆರಾಧಿಸದೆ ಲೌಕಿಕ ಸಂಕಟಗಳ ಪ್ರಕಟಣೆಗೆ ಅದು ಒದಗಿ ಬರುವಂತೆ ಕವಿ ಮಾಡಿಕೊಂಡಿದ್ದಾರೆ. ಒಂದು ಹಂತದಲ್ಲಿ ಒಂದು ಮಿತಿಯಲ್ಲಾದರೂ ಆಂಗ್ಲಕವಿ ಡ್ರೈಡನ್‌ನ ''ನಾಟಕೀಯ ಸ್ವಗತ''ಗಳನ್ನು ಇಲ್ಲಿನ ರಚನೆಗಳು ಶ್ರುತಪಡಿಸುತ್ತವೆ.

ತನ್ನನ್ನು ತೊರೆದವಳ ನಡತೆಯ ಲೋಪದೋಷಗಳ ಪಟ್ಟಿ ಮಾಡುತ್ತಲೇ ಡ್ರೈಡನ್‌ನ ನಾಯಕ ತನ್ನ ನಡತೆಯ ಲೋಪದೋಷಗಳನ್ನು ನಮಗೆ ತಿಳಿಸಿಬಿಡುತ್ತಾನೆ. ಹಾಗಾಗಿ, ಈ ಮಾದರಿಯ ''ನಾಟಕೀಯ ಸ್ವಗತಗಳಿಗೆ ವಿಶೇಷ ರೀತಿಯ ವ್ಯಂಗ್ಯ, ಆಳ ಹಾಗೂ ಲೋಕಾನುಭವ ಪ್ರಾಪ್ತವಾಗುತ್ತದೆ. ಕುರುಡಗಿ ಅಷ್ಟು ಮಹತ್ವಾಕಾಂಕ್ಷೆಯನ್ನು ಹೊಂದಿರುವಂತೆ ಕಾಣುವುದಿಲ್ಲ. ಆ ಪರಿಕರಗಳನ್ನೆಲ್ಲ ಮೊನಚಾಗಿಟ್ಟುಕೊಂಡಿರುವ ಮೋಹನ ಮುಂದಾದರೂ ''ನಾಟಕೀಯ ಸ್ವಗತ''ಗಳ ನಿಡಿದಾದ ನಡೆಯನ್ನು ಕನ್ನಡದಲ್ಲಿ ಕಾಣಿಸಲು ಪ್ರಯತ್ನಿಸಿದರೆ ಲಾಭವಾದೀತು.

ಕನ್ನಡದಲ್ಲಿ ಕೆ.ಎಸ್. ನರಸಿಂಹಸ್ವಾಮಿಯವರ ಗೆರೆದಾಟದ ಮಧ್ಯಮವರ್ಗದ ಗೃಹಸ್ಥ ನಾಯಕನ ಮಾಧುರ್ಯದ ಹಾಡುಗಳಿಂದ ಕುರುಡಗಿಯವರ ''ಶೋಭನಾ''ದ ವೈವಾಹಿಕ ಪ್ರೇಮದ ಹೊರಗಿನ ರಾಗಗಳವರೆಗೆ ಈ ಮಾದರಿಯ ಪ್ರೇಮಾಲಾಪದ ಸರಿಯಿದೆ. ಮೂಲದ ಆ ಧಾತು ಈ ರೀತಿಯಾಗಿ ಭಿನ್ನವಾಗಿ ಕಾಣಿಸಿ ಕೊಳ್ಳುತ್ತಿರುವುದು ಅತ್ಯಂತ ಸ್ವಾಗತಾರ್ಹ. ಬಂಡಾಯ ಕಾವ್ಯದ ಉಚ್ಛ್ರಾಯ

ಕಾಲದಲ್ಲಿ ಆ ಜಾಡಿನಲ್ಲಿ ಹಾಡಿರುವ ಮೋಹನ ಕುರುಡಗಿಯವರು ಚಳವಳಿಯ ಹೊರಾವರಣದ ದನಿಯನ್ನು ಬಿಟ್ಟುಕೊಟ್ಟು ಅತ್ಯಂತ ಆಪ್ತವಾದ ಸುಖ ದುಃಖಗಳ ಬಗ್ಗೆ ಬರೆದಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ವರ್ಗ, ವರ್ಣ, ಜಾತಿ, ಕಾಲ- ದೇಶಗಳನ್ನು ಮೀರಿ ತಾನೇತಾನಾಗಿ ನಿಲ್ಲುವ ಒಂದು ಸಂಗತಿಯೆಂದರೆ ಪ್ರೇಮ ಮಾತ್ರ. ಅನಾದಿ ಕಾಲದಿಂದ ಕವಿಗಳು ಇದರ ಕುರಿತು ಹಾಡುತ್ತ ಬಂದಿರುವರಾದರೂ ಇದು ಎಂದೆಂದೂ ಮುಗಿಯದ ವಿಷಯವೆನ್ನುವುದನ್ನು ನಾವು ಬಲ್ಲೆವು. ಹಾಡಿದಷ್ಟು ಉಳಿಯುವಂಥದ್ದು ಇದು. ಪರಂಪರೆಯಿಂದ ಸಮೃದ್ಧವಾದ ಚಿತ್ರಗಳ ಆಧಾರವಿಲ್ಲದೆ ಬರೆಯುವ ಸಂಕಲ್ಪ ಮಾಡಿದವರೆಲ್ಲ ತಮ್ಮೊಳಗಿನ ವಿನ್ಯಾಸವನ್ನು ನೆಚ್ಚಿ ಮುಂದಡಿಯಿಡ ಬೇಕಾಗುತ್ತದೆ. ಈ ಕಾರಣದಿಂದ ಕುರುಡಗಿಯವರು ಮತ್ತೆ ಮತ್ತೆ ಪೌರಾಣಿಕ ಹಾಗೂ ಐತಿಹಾಸಿಕ ಪಾತ್ರಗಳೊಡನೆ ತಮ್ಮ ನಾಯಕನನ್ನು ಸಮೀಕರಿಸುತ್ತಾರೆ. ಪ್ರೇಮದಂಥ ಪರಿಚಿತ ವಿಷಯವನ್ನೆತ್ತಿಕೊಂಡು ಇಷ್ಟು ಪ್ರಮಾಣದ ಯಶಸ್ಸನ್ನು ಸಾಧಿಸಿರುವ ಕುರುಡಗಿಯವರು ಕಾವ್ಯವನ್ನು ತಮ್ಮ ಪ್ರಮುಖವಾದ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿರುವುದು ಸಾರ್ಥಕವಾಗಿದೆ. ಅವರಿಗೆ ಇನ್ನೂ ಹೆಚ್ಚಿನ ರೀತಿಯ ಪ್ರತಿಫಲ ದೊರಕಲೆಂದು ಹಾರೈಸುತ್ತೇನೆ.

ಪ್ರೊ. ಸಿ.ನಾಗಣ್ಣ
ನಂ. ೬೧೯೫, ೩೧/೩. ಮೇಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

ಏಪ್ರಿಲಿನಲ್ಲಿ ಬೆಂಗಳೂರಿನ ನವಕರ್ನಾಟಕ ಪ್ರಕಾಶನ ನಾಲ್ಕು ಮಹತ್ವದ ಕೃತಿಗಳನ್ನು ಬಿಡುಗಡೆ ಮಾಡಿದೆ. ಪುಸ್ತಕಗಳ ಮೂಲಕ ಮನುಕುಲದ ಸೇವೆ ಎಂಬುದು ನವಕರ್ನಾಟಕದ ಧ್ಯೇಯ. ಪ್ರತಿವರ್ಷ ಏನಾದರೊಂದು ಹೊಸ ಯೋಜನೆ ಕೈಗೊಳ್ಳುವ ಮೂಲಕ ಕನ್ನಡ ಪುಸ್ತಕ ಲೋಕಕ್ಕೆ ಹಲವು ಉಪಯುಕ್ತ ಪ್ರಕಟಣೆಗಳನ್ನು ನೀಡುತ್ತ ಬಂದಿದೆ. ಈ ನಾಲ್ಕು ಕೃತಿಗಳು ಸಹ ಮಹತ್ವದ ಕೊಡುಗೆಗಳೇ!

ವಿಜ್ಞಾನ ಪದವಿವರಣ ಕೋಶ: (ಡೆಮಿ ಚತುರ್ಥಾಕಾರ-೪೭೮ ಪುಟಗಳು : ಬೆಲೆ : ರೂ.೫೦೦.)

ಶ್ರೀ ಜೆ. ಟಿ. ನಾರಾಯಣರಾವ್ ಈ ಯೋಜನೆಯ ಪ್ರಧಾನ ಸಂಪಾದಕರು. ಜೊತೆಗೆ ಇಬ್ಬರು ಸಂಪಾದಕರು. ನಾಲ್ಕು ಮಂದಿ ಸಂಪಾದಕ ಮಂಡಲಿಯ ಸದಸ್ಯರು ಮತ್ತು ನಾಲ್ಕು ಮಂದಿ ಸಲಹಾಮಂಡಲಿಯ ಸದಸ್ಯರು. ಇವರೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣತ ವಿದ್ವಾಂಸರು, ವಿಜ್ಞಾನ ವಿಷಯಗಳ ಬರಹಗಾರರು. ಪದಗಳ ಆಯ್ಕೆ ಅರ್ಥವಿವರಣೆ, ಅದರ ಪರಿಷ್ಕರಣ, ತಿದ್ದುಪಡಿ ಸೇರ್ಪಡೆ- ಹೀಗೆ, ಕೋಶದ ಕೆಲಸ ಪ್ರಾರಂಭಿಸಿ ಅಂತಿಮ ರೂಪ ತಳೆಯಲು ಹತ್ತು ವರ್ಷಗಳಷ್ಟು ದೀರ್ಘಕಾಲ ಬೇಕಾಯಿತು. ವಿಶ್ವವಿದ್ಯಾನಿಲಯಗಳು ಅಥವಾ ಸರಕಾರದ ಅನುದಾನ ಪಡೆಯುವ ಸಂಸ್ಥೆಗಳು ಮಾಡಬೇಕಾಗಿದ್ದ ಕೆಲಸ. ಒಂದು ಖಾಸಗಿ ಪ್ರಕಾಶನ ಸಂಸ್ಥೆಗೆ ಭಾರಿ ವೆಚ್ಚದ ಬಾಬ್ತು. ಆದರೆ ಕನ್ನಡಕ್ಕೆ ಇಂಥ ಕೋಶ ಅತ್ಯಗತ್ಯವಾಗಿತ್ತು. ಮುಖ್ಯವಾದದ್ದು ಇದು- ತಗಲಬಹುದಾದ ವೆಚ್ಚವಲ್ಲ.

ಈ ಪದ ವಿವರಣ ಕೋಶ ಸುಮಾರು ಹನ್ನೆರಡು ಸಾವಿರ ವೈಜ್ಞಾನಿಕ ಹಾಗೂ ದಿನಬಳಕೆಯ ತಾಂತ್ರಿಕ ಪದಗಳನ್ನು ಒಳಗೊಂಡಿದೆ. ಇದರಲ್ಲಿ ವಿಜ್ಞಾನದ ಎಲ್ಲ ಶಾಖೆಗಳ ಪದಗಳೂ ಸೇರ್ಪಡೆಯಾಗಿವೆ. ಮುಖ್ಯ ವಿಭಾಗದಲ್ಲಿ ಪದಗಳನ್ನು ಕನ್ನಡದ ಅಕಾರಾದಿಯಾಗಿ ನೀಡಲಾಗಿದೆ. ಕನ್ನಡ ಪದದ ಬಳಿಕ ಪಕ್ಕದಲ್ಲಿ ತತ್ಸಮ ಇಂಗ್ಲಿಷ್ ಪದ

ನೀಡಿ ಆ ಪದ ಯಾವ ವಿಜ್ಞಾನ ಶಾಖೆಗೆ ಸೇರಿದುದು ಎಂಬುದನ್ನು ಹ್ರಸ್ವವಾಗಿ ಸೂಚಿಸಲಾಗಿದೆ. ಅನಂತರ ಅದರ ವಿವರಣೆ ನೀಡಲಾಗಿದೆ. ಅದೇ ವಿಷಯ ಬೇರೆ ರೀತಿಯಲ್ಲಿ ಮತ್ತೊಂದು ಕಡೆ ಬಂದಿದ್ದರೆ ಆ ಪದ ನೋಡುವಂತೆ ಸೂಚನೆ ನೀಡಲಾಗಿದೆ. ಕೋಶದ ಕೊನೆಯಲ್ಲಿ ಇಂಗ್ಲಿಷ್ ಪದಗಳನ್ನೂ ಆಂಗ್ಲ ವರ್ಣಾನುಕ್ರಮದಲ್ಲಿ ಕೊಟ್ಟು ಆ ಪದ ನಿಘಂಟಿನ ಒಳಗಿರುವ ಪುಟಸಂಖ್ಯೆಯನ್ನು ಪಕ್ಕದಲ್ಲಿ ಕೊಡಲಾಗಿದೆ. ಈ ಕೋಶ ಕನ್ನಡ-ಇಂಗ್ಲಿಷ್ ನಿಘಂಟು, ಇಂಗ್ಲಿಷ್-ಕನ್ನಡ ನಿಘಂಟು ಮತ್ತು ವಿವರಣ ನಿಘಂಟೂ ಹೌದು.

ಅನೇಕ ಕಡೆ ವಿವರಣ ಚಿತ್ರಗಳನ್ನೂ ನೀಡಲಾಗಿದ್ದು, ಇದು ಏಕತಾನತೆಯ ಬೇಸರ ಕಳೆಯಲು ಸಹಾಯಕವಾಗಿದೆ. ಕೊನೆಯಲ್ಲಿ ಉಪಯುಕ್ತ ಮಾಹಿತಿಗಳನ್ನು ನೀಡಲಾಗಿದೆ. ವೈಜ್ಞಾನಿಕ ತಾಂತ್ರಿಕ ಬರಹಗಳ ಲೇಖಕರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅತ್ಯಂತ ಉಪಯುಕ್ತವಾದ ಕೋಶ. ಗಟ್ಟಿರಟ್ಟಿನ ಅಚ್ಚುಕಟ್ಟಾದ ಬೈಂಡಿಂಗ್ ಹೊಂದಿದೆ.

ಇಗೋ ಕನ್ನಡ-ಸಂಪುಟ ೨ : (ಡೆಮಿ ಅಷ್ಟಾಕಾರ ೩೭೨ ಪುಟಗಳು : ಬೆಲೆ : ರೂ. ೨೦೦)

ಪ್ರೊ. ಜಿ. ವೆಂಕಟಸುಬ್ಬಯ್ಯನವರು ಇದರ ಲೇಖಕರು. ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಪ್ರಕಟವಾಗುತ್ತ ಬಂದಿರುವ ಜನಪ್ರಿಯ ಅಂಕಣ ಲೇಖನ-ಇಗೋ ಕನ್ನಡ. ಕರ್ನಾಟಕದ ಅನೇಕ ಕಡೆಗಳಿಂದ ಓದುಗರು ಲೇಖಕರೊಂದಿಗೆ ನಡೆಸುವ ಸಂವಾದ ಅಂಕಣ ರೂಪ ತಳೆದಿದೆ. ಇದರ ಮೊದಲ ಸಂಪುಟವನ್ನು ಸಹ ನವಕರ್ನಾಟಕ ಪ್ರಕಟಿಸಿದೆ. ಇದರ ಎರಡನೇ ಆವೃತ್ತಿಯೂ ಪ್ರಕಟವಾಗಿದೆ. ಈಗ ಪ್ರಕಟವಾಗಿರುವುದು ಎರಡನೇ ಸಂಪುಟ.

ಇದೊಂದು ಸಾಮಾಜಿಕ ನಿಘಂಟು. ಅರ್ಥವನ್ನು ಅರಸುತ್ತ ಸಂಚರಿಸುವಾಗ ಜನಸಾಮಾನ್ಯರ ಬಳಕೆಯ ನುಡಿಗಟ್ಟಿನ ಜೊತೆಗೆ ಹಳೆಗನ್ನಡ, ನಡುಗನ್ನಡ, ಆಧುನಿಕ ಕನ್ನಡದ ಗದ್ಯಪದ್ಯಗಳಲ್ಲದೆ, ಸಂಸ್ಕೃತ ಕಾವ್ಯಗಳಿಂದಲೂ ಉದಾಹರಣೆ ನೀಡುತ್ತ ಜೊತೆಗೆ ವ್ಯಾಕರಣದ ಪರಿಚಯವನ್ನೂ ಮಾಡಿಸುವ ನಿಘಂಟು. ಅನ್ಯದೇಶ್ಯ ಪದಗಳು ನಮ್ಮ ನುಡಿಗಟ್ಟಿನಲ್ಲಿ ನುಸುಳಿಕೊಂಡು, ತಮ್ಮ ನೆಲೆಯನ್ನು ಖಾಯಂ ಗೊಳಿಸಿಕೊಂಡಿರುವ ಪರಿಯ ರೋಚಕ ಅನುಭವ ನೀಡುವ ಪುಸ್ತಕ. ಹಾಗಾಗಿ, ಬೇರೆಲ್ಲ ನಿಘಂಟುಗಳಿಗಿಂತ ಈ ಸಾಮಾಜಿಕ ನಿಘಂಟಿಗೆ ಹೆಚ್ಚಿನ ಮಹತ್ವ ಬರುತ್ತದೆ.

ಇದರ ವ್ಯಾಪಕತೆ ಒಂದು ಪದಕ್ಕೆ ಅರ್ಥ ನೀಡುವಷ್ಟಕ್ಕೆ ಸೀಮಿತವಾಗಿಲ್ಲ. ಆ ಪದದ ಬೇರು, ಕಾಂಡ, ರೆಂಬೆ ಕೊಂಬೆ ಇತ್ಯಾದಿಗಳ ಮೂಲ ಶೋಧಿಸಿ ಬಳಕೆಯಲ್ಲಿ ಅದು ಹೇಗೆಲ್ಲ ಬದಲಾವಣೆಗೊಳಗಾಗಿದೆ ಎಂಬುದನ್ನು ಪತ್ತೆ ಮಾಡುವ, ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಕ್ರಿಯಾಶೀಲವಾದ ಪರಿಶ್ರಮದ ಹಿನ್ನೆಲೆ ಈ ಕೃತಿಗಿದೆ. ಇದನ್ನು ನಿಘಂಟೆಂದು ಪರಿಗಣಿಸಿ ಓದಬೇಕಾಗಿಲ್ಲ. ಸುಮ್ಮನೆ ಓದುತ್ತ ಹೋದರೂ ಮನಸ್ಸಿಗೆ ಮುದ ನೀಡುತ್ತದೆ. ಮನೆಗಳಲ್ಲಿ, ಶಾಲೆಗಳಲ್ಲಿ ಪ್ರತಿ ಮನೆಯ ಗ್ರಂಥಾಲಯದಲ್ಲಿ ಇರಲೇ ಬೇಕಾದ ಕೃತಿ.

ನವಕರ್ನಾಟಕ ಕೈಪಿಡಿ ರಂಗಭೂಮಿ: (ಡೆಮಿ ಚತುರ್ಥಾಕಾರ ೨೦೮ ಪುಟಗಳು : ಬೆಲೆ: ರೂ. ೨೫೦)

ಎನ್. ಎಸ್. ವೆಂಕಟರಾವ್ ಇದರ ಲೇಖಕರು. ಚಿಣ್ಣರಿಗೆ ರಂಗಮಂದಿರ ಚಟುವಟಿಕೆಗಳ ತರಬೇತು ನೀಡುವಲ್ಲಿ ಸಿದ್ಧಹಸ್ತರಾಗಿದ್ದ ಇವರು ರಂಗಮಂಚದ ಎಲ್ಲ ಚಟುವಟಿಕೆಗಳ ಪರಿಚಯವಿದ್ದವರು. ಸ್ವತಃ ನಾಟಕಕಾರರು, ನಿರ್ದೇಶಕರು, ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಪದವೀಧರ. ರಂಗಮಂಚದ ಪರಿಚಯ, ಚಟುವಟಿಕೆಗಳ ಅನುಭವ, ಅಧ್ಯಯನ ಆಧಾರದ ಮೇಲೆ ಇದನ್ನು ರಚಿಸಿದ್ದಾರೆ.

ದಿವಂಗತರಾದ ನಂತರ ಈ ಕೃತಿ ಪ್ರಕಟವಾಗಿದೆ.

ಶ್ರೀ ಬಿ. ವಿ. ಕಾರಂತರ ಮುನ್ನುಡಿಯೊಂದಿಗೆ ಪ್ರಕಟವಾಗಿರುವ ಈ ಕೃತಿ ೧೫೦ಕ್ಕೂ ಹೆಚ್ಚು ಆಕರ್ಷಕ ರೇಖಾಚಿತ್ರಗಳನ್ನು ಹಾಗೂ ಛಾಯಾಚಿತ್ರಗಳನ್ನು ಒಳಗೊಂಡಿದೆ. ರಂಗಭೂಮಿಯ ಹುಟ್ಟು ಬೆಳವಣಿಗೆ ಕುರಿತ ವಿವರಗಳಿವೆ. ಪಾಶ್ಚಾತ್ಯ ಮತ್ತು ಭಾರತೀಯ ರಂಗಭೂಮಿ ಪ್ರಯೋಗ ಇತಿಹಾಸಗಳ ಬಗ್ಗೆ ಮಾಹಿತಿ ಇದೆ. ಅಖಾಡ, ಸಾಂಪ್ರದಾಯಿಕ, ಏಕಕಾಲಿಕ, ಬಹುಘಟಕ, ನಾಟಕೀಯ ಮತ್ತು ಯಥಾರ್ಥ ರಂಗಪದ್ಧತಿಗಳನ್ನು ವಿಶದಪಡಿಸಿದ್ದಾರೆ. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿರುವ ರಂಗಪದ್ಧತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

ರಂಗಭೂಮಿಯ ಇತಿಹಾಸ ಮತ್ತು ಬೆಳವಣಿಗೆಯ ಬಗ್ಗೆ ತಿಳಿದುಕೊಳ್ಳುವುದಲ್ಲದೆ, ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳುವ ನಾಟಕದ ಪಾತ್ರಗಳಿಗೆ ಹೊಂದಿಕೊಳ್ಳುವ ನಟನಟಿಯರನ್ನು ಆಯ್ಕೆ ಮಾಡುವ ಬಗ್ಗೆ ತರಬೇತು ಬಗ್ಗೆ, ರಂಗಾಲಂಕಾರ, ಮೇಕಪ್, ರಂಗಸಂಗೀತ- ಹೀಗೆ ಹಲವು ವಿಷಯಗಳಿದ್ದು ರಂಗಾಸಕ್ತರಿಗೆ ಅತ್ಯುಪಯುಕ್ತ ಪುಸ್ತಕ.

ಬೇಡಿ ಕಳಚಿತು ದೇಶ ಒಡೆಯಿತು: (ಡೆಮಿ ಅಷ್ಟಾಕಾರ ೧೦೦೦ ಪುಟಗಳು: ಬೆಲೆ: ರೂ. ೬೦೦)

ಭಾರತದ ಸ್ವಾತಂತ್ರ್ಯ ಸಂಗ್ರಾಮ ಕುರಿತ ಬೃಹತ್ ಕಾದಂಬರಿ, ಇದರ ಲೇಖಕರಾದ ಶ್ರೀ. ಕೋ. ಚೆನ್ನಬಸಪ್ಪನವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಆನಂತರ ಕರ್ನಾಟಕ ಏಕೀಕರಣ ಚಳುವಳಿಯಲ್ಲೂ ಭಾಗವಹಿಸಿದವರು. ವಕೀಲರಾಗಿ, ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದವರು. ಪತ್ರಕರ್ತರು, ಕಥೆಗಾರರು, ಕಾದಂಬರಿಕಾರರು. ಹಲವು ವರ್ಷಗಳ ನಂತರ, ಈ ಬೃಹತ್ ಕಾದಂಬರಿಯ ಮೂಲಕ ತಮ್ಮ ಲೇಖನಿಯ ಸಾಮರ್ಥ್ಯವನ್ನು ಪ್ರಕಟಿಸಿದ್ದಾರೆ.

ಇದು ೧೮೫೭ರಿಂದ ೧೯೪೭ರವರೆಗಿನ ಸ್ವಾತಂತ್ರ್ಯ ಹೋರಾಟದ, 'ಸಿಪಾಯಿದಂಗೆ'ಯಿಂದ ಸುಭಾಸ ಬೋಸರ ಐಎನ್ಎ ಸೈನ್ಯದ ಸಶಸ್ತ್ರ ಹೋರಾಟದವರೆಗೆ ನಡೆದ ಲಕ್ಷಾಂತರ ಭಾರತೀಯ ಯುವಕರು, ಯುವತಿಯರು, ಬಾಲಕ ಬಾಲಕಿಯರು ಭಾಗವಹಿಸಿದ, ಲಾಠಿ ಏಟು, ಗುಂಡಿನೇಟು, ನೇಣುಗಂಬ, ದ್ವೀಪಾಂತರ ವಾಸ, ಉಪವಾಸ ಅನುಭವಿಸಿದ ಎದೆ ನಡುಗಿಸುವ ರೋಮಾಂಚಕಾರಿ ಇತಿಹಾಸವನ್ನು ಕಥೆಯಾಗಿ ಮೂಡಿಸಿರುವ ಕಾದಂಬರಿ.

ಪಕ್ಷಗಳ ನಾಯಕತ್ವದಲ್ಲಿ ಅಹಿಂಸಾತ್ಮಕ ಚಳುವಳಿ ನಡೆಯುತ್ತಿರುವಾಗಲೇ, ಹಲವು ಕಡೆ ಅನೇಕರು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಬ್ರಿಟಿಷ್ ಸರಕಾರವನ್ನು ಧೃತಿಗೆಡಿಸಿದ ಘಟನೆಗಳನ್ನು, ಮತ್ತೆ ಜನಸಾಮಾನ್ಯರು ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಂದಿಸುತ್ತಿದ್ದುದನ್ನು ಚಿತ್ರ ಬಿಡಿಸಿದಂತೆ ಸ್ಪಷ್ಟವಾಗಿ ತೋರಿಸಿದ್ದಾರೆ. ಇದರಲ್ಲಿ ಬರುವ ನೂರಾರು ಪರಿಚಿತ ಅಪರಿಚಿತ ವ್ಯಕ್ತಿಗಳು ಇಷ್ಟು ವಿಶಾಲವಾದ ಭಿತ್ತಿಯಲ್ಲಿ ತಮ್ಮ ಪಾತ್ರಗಳನ್ನು ಚೊಕ್ಕವಾಗಿ ನಿರ್ವಹಿಸುತ್ತಾರೆ. ಇವರೆಲ್ಲರ ಹೋರಾಟದ ಫಲವಾಗಿ ಬೇಡಿಯೇನೋ ಕಳಚಿತು. ಆದರೆ ದೇಶ ಒಡೆಯಿತು ಎಂಬುದನ್ನು ಮಾರ್ಮಿಕವಾಗಿ ಹೇಳುವ ಕಾದಂಬರಿ ಇದು.

ಕಲಾವಿದ ಶ್ರೀ ಪ.ಸ. ಕುಮಾರರು ಪ್ರತಿಯೊಂದು ಅಧ್ಯಾಯಕ್ಕೆ ರಚಿಸಿರುವ ರೇಖಾಚಿತ್ರಗಳು ಸೂಚ್ಯವಾಗಿ ಕೃತಿಯ ಆಶಯವನ್ನು ವ್ಯಕ್ತಪಡಿಸುವಂತಿವೆ. ಕೆಲವು ಕಡೆ ಒಂದೇ ಚಿತ್ರ ಆ ಸಂದರ್ಭದ ಇಡೀ ಪರಿಸ್ಥಿತಿಯನ್ನು ಓದುಗರ ಕಣ್ಣ ಮುಂದೆ ತಂದು ನಿಲ್ಲಿಸುವಷ್ಟು ಅದ್ಭುತವಾಗಿದೆ. ಪ್ರಾಯಶಃ ಈ ರೀತಿಯ ಕಾದಂಬರಿಯೊಂದು ಈವರೆಗೆ ಬಂದಿಲ್ಲವೆನ್ನಬಹುದು.

ಈ ಕೃತಿಯನ್ನು ಪ್ರಕಟಿಸಿರುವ ಬಗ್ಗೆ ನವಕರ್ನಾಟಕ ಪ್ರಕಾಶನಕ್ಕೆ ಅಭಿನಂದನೆಗಳು ಸಲ್ಲುತ್ತವೆ.

ಪಿ.ಎಸ್.ರಾಜೇಶ್
c/o ನವಕರ್ನಾಟಕ ಪ್ರಕಾಶನ
ಬೆಂಗಳೂರು

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಹೆಚ್. ಭಾಸ್ಕರ್, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ. ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು-೫೭೦ ೦೦೬
ದೂರವಾಣಿ ಸಂಖ್ಯೆ : ೫೧೧ ೮೭೫

ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಶರಣ ಚರಿತಾಮೃತ

ಸಣ್ಣ ಕತೆಗಳು ೧೩೮ :(ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು)

ನಾಗರಿಕತೆಯ ಇತಿಹಾಸ

ಸಂಪಾದಕೀಯ ಸಂಕಲನ

ಕಾರಂತ ದರ್ಶನ

ಸ್ವಾಮಿ ವಿವೇಕಾನಂದ

ನನ್ನೂರು

ನಳಚರಿತ್ರೆ ಸಂಗ್ರಹ

ಯುದ್ಧ ಮತ್ತು ಶಾಂತಿ : ಭಾಗ ೧, ೨, ಮತ್ತು ೩

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ